


# ಹಲಸಂಗಿ ಗೆಳೆಯರು

## ಪ್ರಬಂಧ ಸಂಕಲನ



ಸಂಪಾದಕರು : ಡಾ। ಪಿ. ಕೆ. ಖಂಡೋಬಾ



# ಹಲಸಂಗಿ ಗೆಳೆಯರು

ಸಂಪಾದಕರು

ಡಾ|| ಪಿ. ಕೆ. ಖಂಡೋಬಾ

**ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ**

ನೃಪತುಂಗ ರಸ್ತೆ, ಬೆಂಗಳೂರು - ೫೬೦ ೦೦೨

HALASANGI GELEYARU-A collection of Articles Edited by Dr. P. K. Khondoba
Published by Karnataka Janapada and Yakshagana Academy, Nrupatunga Road, Bangalore - 560 002.

First Edition : 1997

Copies : 1000

Price : Rs. 25/-

Printed at :

ILA PRINTERS
153, 4th Main Road, 8th Cross
Chamarajpet, Bangalore-560 018
Phone : 623159

## ಅಧ್ಯಕ್ಷರ ಮಾತು

ಕನ್ನಡ ಜನಪದ ಸಾಹಿತ್ಯವನ್ನು ಅಧ್ಯಯನ ಮಾಡುವವರಿಗೆ ಎಂದೆಂದೂ ಮರೆಯಲಾರದ ಉಜ್ವಲ ನೆನಪು 'ಹಲಸಂಗಿ ಗೆಳೆಯರ ಗುಂಪು'. ಸಮಾನ ಮನಸ್ಕರೂ, ಅರ್ಪಣ ಮನೋಧರ್ಮದವರೂ ಹಾಗೂ ಶ್ರದ್ಧೆ ಮತ್ತು ಆಸಕ್ತಿಗಳ ಒಮ್ಮಿಳನವೂ ಆಗಿರುವ ವ್ಯಕ್ತಿಗಳು ಒಂದು ನಿರ್ದಿಷ್ಟ ಉದ್ದೇಶದಿಂದ ಒಂದು ಕಾರ್ಯವನ್ನು ಕೈಗೆತ್ತಿಕೊಂಡಲ್ಲಿ ಅದು ಎಂತಹ ಚಾರಿತ್ರಿಕ ಸತ್ಫಲವನ್ನು ನೀಡಬಲ್ಲದೆಂಬುದಕ್ಕೆ ನಿದರ್ಶನ ಈ ಸಹೃದಯೀ ಗುಂಪು. ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಒಂದು ಅಜ್ಞಾತ ಹಳ್ಳಿಯಾಗಿದ್ದ ಹಲಸಂಗಿ ಇಂದು ಜಾನಪದ ಕ್ಷೇತ್ರದ ಯಾತ್ರಾ ಸ್ಥಳಗಳಲ್ಲಿ ಒಂದಾಗಿದೆ. ಇದಕ್ಕೆ ಈ ಮೌಲ್ಯವನ್ನು, ಹಿರಿಮೆಯನ್ನೂ ತಂದು ಕೊಟ್ಟವರು ಶ್ರೀಯುತರಾದ ಚನ್ನಮಲ್ಲಪ್ಪ, ಪಿ. ಧೂಲ, ಕಾಪಸೆ ರೇವಪ್ಪ ಮತ್ತು ಸಿಂಪಿ ಲಿಂಗಣ್ಣ. ಕನ್ನಡ ಕಾವ್ಯಲೋಕದಲ್ಲಿ ಪ್ರತಿಭಾ ಪೂರ್ಣವಾದ ಅನನ್ಯ ಅನುಭವದ ಆಧ್ಯಾತ್ಮಿಕ ಗೀತೆಗಳನ್ನು ರಚಿಸಿದ ಮಧುರಚೆನ್ನ ರೆಂದು ಹೆಸರು ಪಡೆದ ಶ್ರೀ ಚನ್ನಮಲ್ಲಪ್ಪನವರ ನೇತೃತ್ವದಲ್ಲಿ 1922ರಲ್ಲಿ ಸ್ಥಾಪಿತವಾದ ಗೆಳೆಯರ ಗುಂಪು ನಮ್ಮ ಸಂಸ್ಕೃತಿಯ ಶೋಧದಲ್ಲಿ ಭಕ್ತಿ, ಶ್ರದ್ಧೆ ಮತ್ತು ಗಾಂಭೀರ್ಯಗಳಿಂದ ತೊಡಗಿಕೊಂಡು ಸಂಶೋಧಿಸಿ ತಂದ ಅಮೃತಫಲಗಳೇ ಗರತಿಯ ಹಾಡು, ಜೀವನ ಸಂಗೀತ ಮತ್ತು ಮಲ್ಲಿಗೆ ದಂಡೆ ಎಂಬ ಜನಪದ ಗೀತಸಂಕಲನಗಳು.

ಮಧುರಚೆನ್ನರಿಂದ ಸ್ಥಾಪಿತರಾದ ಈ ಗುಂಪಿನ ಗೆಳೆಯರು ಸ್ವತಃ ಆದರ್ಶ ಪ್ರಿಯರು, ಧ್ಯೇಯವಂತರೂ ಮತ್ತು ಮಹತ್ವವಾದುದ್ದನ್ನೇನಾದರೂ ತಮ್ಮ ಸಂಸ್ಕೃತಿಗೆ ಕೊಡುಗೆಯಾಗಿ ನೀಡಬೇಕೆಂಬ ಹಂಬಲವುಳ್ಳವರು. ಇದೆಲ್ಲದರ ಜೊತೆಗೆ ದೇಶ ಮತ್ತು ಭಾಷೆಗಳ ಬಗ್ಗೆ ಅನನ್ಯವಾದ ಅಭಿಮಾನವುಳ್ಳವರು, ಮೇಲಾಗಿ ವಿಶಿಷ್ಟ ಪ್ರತಿಭೆಯ ಕವಿಗಳು ಹಾಗೂ ಮಧುರಕಂಠದಲ್ಲಿ ಜನಪದ ಗೀತೆಗಳನ್ನು ಹಾಡಿ ಜನಮನವನ್ನು ಮೋಹಿಸಬಲ್ಲ ಜನಪದ ಸಂಗೀತಜ್ಞರು, ಉತ್ತರ ಕನ್ನಡ ಜಿಲ್ಲೆಯ ಗ್ರಾಮೀಣ ಸಂಸ್ಕೃತಿಯ ಹೃದಯಸಿರಿಯನ್ನು ಈ ಮೂರೂ ಸಂಕಲನಗಳು ಅತ್ಯಂತ ಸಮರ್ಥವಾಗಿ ಮತ್ತು ಪರಿಣಾಮಕಾರಿಯಾಗಿ ಅನಾವರಣ ಮಾಡುತ್ತವೆ. ಹಳ್ಳಿಯ ಹೆಣ್ಣು ಗಂಡುಗಳ ನೋವು ನಲಿವುಗಳು, ಕಷ್ಟ ಕಾರ್ಪಣ್ಯಗಳು, ದೈವ ಶ್ರದ್ಧೆ ಹಾಗೂ

ಜೀವನ ನಂಬಿಕೆಗಳು, ಹುಟ್ಟು, ಸಾವು, ವಿವಾಹ, ಹಬ್ಬ-ಹರಿದಿನ, ತಾಯಿ ಮಕ್ಕಳು, ಗಂಡ ಹೆಂಡಿರು, ಪ್ರಣಯ ಪ್ರಪಂಚ, ವಿವಿಧ ಸಂಪ್ರದಾಯಗಳು, ನಿಸರ್ಗಪ್ರೀತಿ, ಕೃಷಿಯ ಸಂದರ್ಭಗಳು - ಮುಂತಾದುವೆಲ್ಲ ಈ ಅಪೂರ್ವ ಗೀತೆಗಳ ಮೂಲಕ ಸಜೀವವಾಗಿ ಮತ್ತು ಅನ್ಯಾದೃಶವಾಗಿ ಅನಾವರಣಗೊಂಡಿವೆ. ಈ ಗೀತೆಗಳಲ್ಲಿನ ಸುಸೂಕ್ಷ್ಮವಾದ, ಮುಟ್ಟಿದರೆ ಹನಿಯುವಂತಹ ಕೋಮಲ ಭಾವನೆಗಳು, ಮುಖದಲ್ಲೇ ಮಿಂದೆದ್ದ ಕರುಳು ಹಿಂಡುವ ಭಾವಗಳು, ಪರಿಸರವನ್ನು ತನ್ನೆಲ್ಲ ವಿಶಿಷ್ಟತೆಯೊಡನೆ ಅನಾಮತ್ತಾಗಿ ನಮ್ಮೆದುರು ತಂದು ನಿಲ್ಲಿಸುವ ಸ್ತಬ್ಧ ಚಿತ್ರಗಳು ಗ್ರಾಮೀಣರಿಗೆ ಮಾತ್ರ ಸಹಜವೆನಿಸುವ ಕಲ್ಪನಾರಮ್ಯವಾದ ಸಂದರ್ಭ ಶಿಲ್ಪಗಳು ನಮ್ಮ ಜನಪದ ಕಾವ್ಯ ಸೌಂದರ್ಯದ ಶ್ರೀಮಂತಿಕೆಯನ್ನು ಪ್ರತಿನಿಧಿಸುತ್ತವೆ. ಈ ಹಾಡುಗಳ ಮೂಲಕ ಧ್ವನಿಸುವ ವಿವಿಧ ಲಯ ಮತ್ತು ಧಾಟಿಗಳ ಸಂಗೀತ ಗುಣವೇ ಪ್ರತ್ಯೇಕವಾದ ಒಂದು ಅಧ್ಯಯನಕ್ಕೆ ಯೋಗ್ಯವಾಗಿವೆ. ಅನ್ಯತ್ರ ಅಲಭ್ಯವಾದ ಧ್ವನಿಪೂರ್ಣವಾದ ಇವುಗಳ ಭಾಷೆ, ಕನ್ನಡದ ಸಮೃದ್ಧತೆಯ ಹಾಗೂ ಅರ್ಥ ವ್ಯಾಪಕತೆಯ ಜೀವಂತ ಪ್ರತೀಕವಾಗಿದೆ. ಹೀಗೆ ಈ ಹಾಡುಗಳು ತಮ್ಮ ಭಾಷಾ ಸೌಂದರ್ಯದಿಂದ ನಮ್ಮ ಜನಪದ ಸಾಹಿತ್ಯದ ಅನರ್ಘ್ಯ ರತ್ನವಾಗಿದೆ. ಎಲ್ಲಿಯವರೆಗೆ ಈ ನಾಡಿನಲ್ಲಿ ಗರತಿಯರ ಬಗ್ಗೆ ಅನೂನವಾದ ಅಕ್ಕರೆ ಗೌರವಗಳು ಜೀವಂತವಾಗಿರುತ್ತದೆಯೋ ಅಲ್ಲಿಯವರೆಗೆ, ಎಲ್ಲಿಯವರೆಗೆ ಕನ್ನಡದ ಜನ ತಮ್ಮ ಜೀವನವನ್ನು ಸಂಗೀತದಂತೆ ಭಾವಿಸಿ ಅನುಭವಿಸುತ್ತಾರೋ ಅಲ್ಲಿಯವರೆಗೆ ಮತ್ತು ಎಲ್ಲಿಯವರೆಗೆ ಮಲ್ಲಿಗೆ ದಂಡೆಯ ಬಗೆಗಿನ ಆಕರ್ಷಣೆ ಹಾಗೂ ವ್ಯಾಮೋಹ ನಮ್ಮ ಜನಪದರ ಹೃದಯದಲ್ಲಿ ಹಸಿರಾಗಿರುತ್ತದೆಯೋ ಅಲ್ಲಿಯವರೆಗೆ 'ಗರತಿಯ ಹಾಡು', 'ಜೀವನ ಸಂಗೀತ' ಮತ್ತು 'ಮಲ್ಲಿಗೆ ದಂಡೆ' ಕೃತಿಗಳ ಅಂತರಂಗ ಮತ್ತು ಬಹಿರಂಗ ಸೌಂದರ್ಯಗಳು ಕಾವ್ಯಾಭ್ಯಾಸಿಗಳಿಗೆ ಸ್ಫೂರ್ತಿಯನ್ನೂ, ಸಂತೋಷವನ್ನು ಮತ್ತು ವಿಶಿಷ್ಟವಾದ ಜೀವನದರ್ಶನವನ್ನು ನೀಡುತ್ತಲೇ ಹೋಗುತ್ತವೆ. ಇವುಗಳ ಶ್ರದ್ಧಾಪೂರ್ಣ ಅಧ್ಯಯನ ಅತಿ ಬಳಕೆಯಿಂದ ಸವೆದ ಮತ್ತು ಜಡ್ಡುಗಟ್ಟಿದ ನಮ್ಮ ಭಾಷೆಗೆ ಹೊಸ ಹೊಳಪನ್ನು ಮತ್ತು ಸತ್ವವನ್ನು ತುಂಬಬಲ್ಲದ್ದಾಗಿದೆ.

ದಿನಾಂಕ : 18-12-93ರಂದು ಗುಲ್ಬರ್ಗ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಬೆಳ್ಳಿಹಬ್ಬದ ಸಂದರ್ಭದಲ್ಲಿ ಸಂಸ್ಥೆಯ ಸಹಯೋಗದೊಡನೆ ಅಕಾಡೆಮಿಯು ಹಲಸಂಗಿ ಗೆಳೆಯರು ಮತ್ತು ಜಾನಪದ ಎಂಬ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಆ ಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳನ್ನು ಈ ಮೂಲಕ ಪುಸ್ತಕ ರೂಪದಲ್ಲಿ ಪ್ರಸ್ತುತ ಪಡಿಸಲಾಗುತ್ತಿದೆ. ಈ ಸಂಕಿರಣದಲ್ಲಿ ಪಾಲ್ಗೊಂಡ ಡಾ॥ ದೇವೇಂದ್ರ ಕುಮಾರ ಹಕಾರಿ, ಡಾ॥ ಎಚ್. ಜೆ. ಲಕ್ಕಪ್ಪಗೌಡ, ಡಾ॥ ಅಂಬಳಿಕೆ ಹಿರಿಯಣ್ಣ, ಡಾ॥ ಎಂ. ಬಿ. ಹೊರಕೇರಿ, ಡಾ॥ ಎಂ. ಎಸ್. ವಾಲಿ,



ಡಾ॥ ಬಸವರಾಜ್ ಮಲಶೆಟ್ಟಿ ಮತ್ತು ಡಾ॥ ವೀರಣ್ಣ ದಂಡೆ ಇವರು ಕನ್ನಡ ಜಾನಪದ ಕ್ಷೇತ್ರದಲ್ಲಿ ತಮ್ಮ ಮೌಲಿಕವಾದ ಸಂಶೋಧನೆಯಿಂದಾಗಿ ಚಿರಪರಿಚಿತರಾಗಿದ್ದಾರೆ. ಈ ಪ್ರಬಂಧ ಮಂಡನೆಯ ಕಾಲದಲ್ಲಿ ನಡೆದ ಚರ್ಚೆ ಮತ್ತು ಸಂವಾದಗಳು ನಮ್ಮ ಯುವಜನತೆಗೆ ಜಾನಪದ ಕ್ಷೇತ್ರದಲ್ಲಿ ಹೆಚ್ಚುತ್ತಿರುವ ಆಸಕ್ತಿಯ ಸಂಕೇತವಾಗಿತ್ತು. ಹಲಸಂಗಿ ಗೆಳೆಯರ ಗುಂಪಿನ ಜಾನಪದ ಕೊಡುಗೆಯನ್ನು ಈ ಏಳೂ ಪ್ರಬಂಧಗಳಲ್ಲಿ ವಿದ್ವಾಂಸರು ವಿಶಿಷ್ಟ ದೃಷ್ಟಿಕೋನದಿಂದ ವಿಶ್ಲೇಷಿಸಿ ಅದರ ನೆಲೆಬೆಲೆಗಳನ್ನು ಗುರುತಿಸಿದ್ದಾರೆ. ಕನ್ನಡ ಜಾನಪದ ಅಧ್ಯಯನದ ಮುಖ್ಯ ಮಜಲುಗಳಲ್ಲಿ ಒಂದಾದ ಹಲಸಂಗಿ ಗೆಳೆಯರ ಜನಪದ ಸೇವೆಯ ಪ್ರತಿಫಲವಾದ ಈ ಕೃತಿಗಳನ್ನು ಕುರಿತ ಒಂದು ಚಿಂತನ ಕ್ರಮ ಇಲ್ಲಿ ಬಿಚ್ಚಿಕೊಂಡಿದೆ. ಜಾನಪದಾಸಕ್ತರಿಗೆ ಇದು ಜಾನಪದದ ಬಗ್ಗೆ ಆಸಕ್ತಿ ಉತ್ಸಾಹಗಳನ್ನು ಮತ್ತು ಸ್ಫೂರ್ತಿಯನ್ನು ಒದಗಿಸಬಲ್ಲ ಕೃತಿಯಾಗುತ್ತದೆ ಎಂಬ ನಂಬಿಕೆ ನನ್ನದು. ಆಗ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾಗಿದ್ದು ಈಗ ಪ್ರಸಾರಾಂಗದ ನಿರ್ದೇಶಕರಾಗಿರುವ ಹಾಗೂ ನಮ್ಮ ಜಾನಪದ ಕ್ಷೇತ್ರದ ಪ್ರಸಿದ್ಧ ವಿದ್ವಾಂಸರಲ್ಲಿ ಒಬ್ಬರಾಗಿರುವ ಶ್ರೀ ಪಿ. ಕೆ. ಖಂಡೋಬಾ ಅವರು ಈ ಪ್ರಬಂಧಗಳನ್ನು ಈ ಮೂಲಕ ಸಂಕಲಿಸಿ ಕೊಟ್ಟಿದ್ದಾರೆ. ವಿಚಾರ ಸಂಕಿರಣವನ್ನು ಅಚ್ಚುಕಟ್ಟಾಗಿ ಅಣಿಗೊಳಿಸಿ, ಈ ಪ್ರಬಂಧಗಳನ್ನು ಶ್ರಮ ಮತ್ತು ಶ್ರದ್ಧೆಗಳಿಂದ ಸಂಕಲಿಸಿ ಕೊಟ್ಟಿರುವ ಅವರಿಗೆ ಅಕಾಡೆಮಿಯ ಪರವಾಗಿ ಕೃತಜ್ಞತೆಗಳು ಸಲ್ಲುತ್ತವೆ. ಇದನ್ನು ಸುಂದರವಾಗಿ ಅಚ್ಚಿಸಿಕೊಟ್ಟ ಇಳಾ ಪ್ರಿಂಟರ್ಸ್‌ನ ಮಾಲೀಕರು ಮತ್ತು ಸಿಬ್ಬಂದಿವರ್ಗಕ್ಕೆ ಸಹ ನಮ್ಮ ನೆನಕೆಗಳು.

**ಡಾ॥ ಎಚ್. ಜೆ. ಲಕ್ಕಪ್ಪಗೌಡ**

ಅಧ್ಯಕ್ಷರು

## ಪ್ರಸ್ತಾವನೆ

ಕರ್ನಾಟಕ ಜಾನಪದ ಚರಿತ್ರೆಯಲ್ಲಿ 'ಹಲಸಂಗಿ ಗೆಳೆಯರ ಗುಂಪು' ಒಂದು ಮಹತ್ವದ ಸ್ಥಾನ ಪಡೆಯುತ್ತದೆ. ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಒಂದು ಹಳ್ಳಿ ಹಲಸಂಗಿ ಸ್ವಾತಂತ್ರ್ಯಪೂರ್ವದ ಕಾಲದಲ್ಲಿ ಅದೊಂದು ಕಾಡು ಹಳ್ಳಿ. ೧೯೨೦ರ ನಂತರ ಆ ಊರಿನ ಯುವಕರ ಕಾರ್ಯ ಚಟುವಟಿಕೆಗಳಿಂದ ಆ ಊರು ಇಂದು ಐತಿಹಾಸಿಕ ಮಹತ್ವವನ್ನು ಪಡೆದಿದೆ. ಒಂದರ್ಥದಲ್ಲಿ ಇದನ್ನು ಜಾನಪದ ಕ್ಷೇತ್ರದ 'ಫಿನ್‌ಲೆಂಡ್' ಎಂದು ಕರೆದರೂ ಅತಿಶಯೋಕ್ತಿ ಎನಿಸದು.

ಹಲಸಂಗಿಯ ಚೆನ್ನಮಲ್ಲಪ್ಪ, ಪಿ. ಧೂಲಾ, ಕಾಪಸೆ ರೇವಪ್ಪ, ಚಡಚಣದ ಸಿಂಪಿ ಲಿಂಗಣ್ಣ ಪ್ರಮುಖರಾಗಿ ಹಲಸಂಗಿಯ ಇನ್ನೂ ಕೆಲವು ಸ್ನೇಹಿತರು ಓಲೇಕಾರ ಮಾರಣ್ಣ, ವಾಲೀಕಾರ ರಾಮಚಂದ್ರಪ್ಪ ಮುಂತಾದವರು ಸೇರಿಕೊಂಡು, ಮಧುರಚೆನ್ನರ ನೇತೃತ್ವದಲ್ಲಿ 1922ರಲ್ಲಿ ಗೆಳೆಯರ ಗುಂಪು ಅಸ್ತಿತ್ವಕ್ಕೆ ಬಂದಿತು.

ಮಧುರಚೆನ್ನರಿಗೂ ಬೇಂದ್ರೆಯವರಿಗೂ ತೀರ ಅನೋನ್ಯ ಹಾಗೂ ಆತ್ಮೀಯವಾದ ಸಂಬಂಧ ಬೆಳೆದುದರಿಂದ ಧಾರವಾಡದಲ್ಲಿ ಬೇಂದ್ರೆಯವರ ನೇತೃತ್ವದಲ್ಲಿ 192[illegible]ರಲ್ಲಿ ಅಸ್ತಿತ್ವಕ್ಕೆ ಬಂದ ಗೆಳೆಯರ ಗುಂಪೂ ಹಲಸಂಗಿ ಗೆಳೆಯರ ಗುಂಪೂ – ಎರಡೂ ಒಂದೇ ಎನ್ನುವಷ್ಟು ಸಂಬಂಧ ಬೆಳೆಯಿತು. ಇದರಿಂದ ಅವರ ವಿಚಾರಗಳನ್ನು ಇವರು, ಇವರ ವಿಚಾರಗಳನ್ನು ಅವರು ಅನುಸರಿಸಲು ಕಾರಣ ವಾಯಿತು. ಒಟ್ಟು ಧ್ಯೇಯಗಳೆಲ್ಲ ಒಂದೇ ಆದವು. ಆದರೆ ಮೂಲಭೂತವಾಗಿ ಈ ಸಂಸ್ಥೆಗಳು ಬೇರೆ ಬೇರೆ ಎಂಬುದು ಸ್ಪಷ್ಟ.

ಹಲಸಂಗಿ ಗೆಳೆಯರ ಗುಂಪಿನ ಸದಸ್ಯರೆಲ್ಲ ಆದರ್ಶವಾದಿಗಳು, ಧ್ಯೇಯ ವಾದಿಗಳು, ಮೇಲಾಗಿ ಕವಿಗಳು, ಅತ್ಯುತ್ತಮ ಹಾಡುಗಾರರು, ಪಿ. ಧೂಲಾ ಸಾಹೇಬ, ಮಧುರಚೆನ್ನ, ಸಿಂಪಿ ಲಿಂಗಣ್ಣ, ಕಾಪಸೆ ರೇವಪ್ಪ ಇವರೆಲ್ಲ ಕವಿಗಳು. ದೇಶದ ಬಗೆಗೆ ಈ ಜನರೆಲ್ಲ ಅಭಿಮಾನವುಳ್ಳವರು. ಪಿ. ಧೂಲಾ ದೇಶ ಸ್ವಾತಂತ್ರ್ಯ ಆಗುವವರೆಗೆ ಮದುವೆಯೇ ಬೇಡವೆಂದು ಬ್ರಹ್ಮಚಾರಿಯಾಗಿ ಉಳಿದವರು. ಕಾಪಸೆ ರೇವಪ್ಪ ಹರ್ಡೇಕರ ಮಂಜಪ್ಪನವರ ಪ್ರಭಾವಕ್ಕೆ ಒಳಗಾಗಿ ಚಳುವಳಿಯಲ್ಲಿ ಧುಮುಕಿ ಜೇಲನ್ನು ಕಂಡವರು.

ಜಾನಪದಕ್ಕೆ ಸಂಬಂಧಿಸಿದ ಇವರ ಕೊಡುಗೆಗಳು ನವೋದಯ ಭಾವನೆಯ ಅತ್ಯುತ್ತಮ ಕೊಡುಗೆಗಳು. ಆಗಿನ ಕನ್ನಡ ಕವಿಗಳ ಮೇಲೆ ಇವು ಸಾಕಷ್ಟು ಪ್ರಭಾವ



ಬೀರಿದವು. 1931ರಲ್ಲಿ ಪ್ರಕಟವಾದ ಬೀಸುವ ಹಾಡಿನ ತ್ರಿಪದಿಗಳ ಸಂಗ್ರಹ "ಗರತಿಯ ಹಾಡು" ಕನ್ನಡ ಜಾನಪದದ ಅತ್ಯುತ್ತಮ ಮೊದಲ ಕೃತಿ. ಹಲಸಂಗಿ ಗೆಳೆಯರ ಗುಂಪಿನ ಸಾಮೂಹಿಕ ಶ್ರದ್ಧೆ - ಸಾಹಸದ ಫಲವಾಗಿ ಮೂಡಿ ಬಂದ ಸುಂದರವಾದ ಕೃತಿ ಪುಷ್ಪವಾಗಿದೆ. ಕನ್ನಡ ಜಾನಪದ ಗೀತ ಕ್ಷೇತ್ರದ ನಾಯಕ ಕೃತಿ. 1933ರಲ್ಲಿ ಶೃಂಗಾರ ಲಾವಣಿಗಳ ಸಂಗ್ರಹ 'ಜೀವನ ಸಂಗೀತ' ಪ್ರಕಟ ವಾಯಿತು. ಮತ್ತೆ 1935ರಲ್ಲಿ 'ಮಲ್ಲಿಗೆ ದಂಡೆ' ಹೆಣ್ಣು ಮಕ್ಕಳ ಶುಭಕಾರ್ಯದ ಹಾಡುಗಳ ಸಂಗ್ರಹ ಪ್ರಕಟವಾಯಿತು. ಜಾನಪದ ಸಾಹಿತ್ಯ ಕ್ಷೇತ್ರದ ಹೆಮ್ಮೆಯ ಅಗ್ರಗಣ್ಯ ಕೃತಿಗಳಲ್ಲಿ ಇವು ಸೇರುತ್ತವೆ.

ಸಂಗ್ರಹ ಮತ್ತು ಆಯ್ಕೆಯ ಜಾಣ್ಮೆಯೊಂದಿಗೆ ಸಂಪಾದನೆಯ ಕ್ರಮಗಳಿಂದಾಗಿ ಈ ಮೂರು ಗ್ರಂಥಗಳು ಇಂದಿಗೂ ಮಾದರಿ ಪುಸ್ತಕಗಳಾಗಿವೆ. ಕನ್ನಡ ಕಾವ್ಯಶ್ರೀಯ ಅತ್ಯುತ್ತಮ ಕೊಡುಗೆಗಳಾಗಿವೆ.

ಪ್ರಸ್ತುತ ಈ ಪುಸ್ತಕದಲ್ಲಿಯ ಲೇಖನಗಳು ದಿ. 18-12-1993ರಂದು ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಜಾನಪದ ಅಕಾಡೆಮಿಯ ಸಹಕಾರದೊಂದಿಗೆ ಹಮ್ಮಿಕೊಂಡ "ಹಲಸಂಗಿ ಗೆಳೆಯರು ಮತ್ತು ಜಾನಪದ" ಎಂಬ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧಗಳಾಗಿವೆ.

ಇಲ್ಲಿಯ ಪ್ರಬಂಧಕಾರರೆಲ್ಲ ಕನ್ನಡ ಜಾನಪದ ಕ್ಷೇತ್ರದಲ್ಲಿ ಸಾಕಷ್ಟು ಹೆಸರು ಮಾಡಿದ ವಿದ್ವಾಂಸರು. ಹಲಸಂಗಿ ಗೆಳೆಯರ ಗುಂಪಿನ ಬಗೆಗೆ ಮೂರು ರೀತಿಯ ಅಧ್ಯಯನ ಅವಶ್ಯ.

1. ಗೆಳೆಯರ ಗುಂಪು.
2. ಗೆಳೆಯರ ಗುಂಪಿನ ಸಾಧನೆ.
3. ಗೆಳೆಯರ ಗುಂಪಿನ ಜಾನಪದ ಕೊಡುಗೆಗಳು.

ಮೊದಲನೇಯದಾಗಿ ಗೆಳೆಯರ ಗುಂಪಿನ ಮಹತ್ವವನ್ನು ಆ ಕಾಲದಲ್ಲಿಟ್ಟು ನೋಡುವ ಕೆಲಸವನ್ನು ಡಾ॥ ದೇವೇಂದ್ರಕುಮಾರ ಹಕಾರಿ ಅವರು ಸಮರ್ಥವಾಗಿ ಮಾಡಿದ್ದಾರೆ. ಗೆಳೆಯರ ಗುಂಪಿನ ಸದಸ್ಯರಲ್ಲಿ ಮಧುರಚೆನ್ನ ಮತ್ತು ಸಿಂಪಿ ಲಿಂಗಣ್ಣ ಪ್ರಮುಖರು. ಆ ಇಬ್ಬರ ಬಗೆಗಿನ ಲೇಖನಗಳನ್ನು ಡಾ॥ ಎಂ. ಬಿ. ಹೊರಕೇರಿ, ಡಾ॥ ಎಂ. ಎಸ್. ವಾಲಿ ಅವರು ಸಾದ್ಯಂತವಾಗಿ ಬರೆದು ಕೊಟ್ಟಿದ್ದಾರೆ. ಗೆಳೆಯರ ಗುಂಪಿನ ಕೊಡುಗೆಗಳಾದ ಗರತಿಯ ಹಾಡು, ಜೀವನ ಸಂಗೀತ, ಮಲ್ಲಿಗೆ ದಂಡೆ ಕೃತಿಗಳ ಪರಿಚಯ ಮತ್ತು ಮಹತ್ವವನ್ನು ಹೇಳಿಕೊಡುವ ಲೇಖನಗಳು

ಕೊನೆಯಲ್ಲಿದ್ದೂ ಕ್ರಮವಾಗಿ ಡಾ॥ ಬಸವರಾಜ ಮಲಶೆಟ್ಟಿ, ಡಾ॥ ವೀರಣ್ಣದಂಡೆ, ಡಾ॥ ಎಚ್. ಜಿ. ಲಕ್ಕಪ್ಪಗೌಡ ತಮ್ಮ ಕೆಲಸವನ್ನು ನಿಷ್ಠೆಯಿಂದ ನಿರ್ವಹಿಸಿದ್ದಾರೆ. ಇದೆಲ್ಲಕ್ಕೂ ಹಿನ್ನೆಲೆಯಾಗಿ ಪ್ರಾರಂಭದಲ್ಲಿ ಗೆಳೆಯರ ಗುಂಪು ಹುಟ್ಟಿಕೊಂಡ ಮತ್ತು ಕೆಲಸ ಮಾಡಿದ ಕಾಲದಲ್ಲಿ ಜಾನಪದ ದೃಷ್ಟಿ-ಧೋರಣೆಗಳು ಏನಿದ್ದವು ಎಂಬ ಲೇಖನವನ್ನು ಡಾ॥ ಅಂಬಳಿಕೆ ಹಿರಿಯಣ್ಣ ಅವರು ಸಮಗ್ರವಾಗಿ ಬರೆದು ಮಂಡಿಸಿದ್ದಾರೆ.

ಒಟ್ಟಿನಲ್ಲಿ ಇಲ್ಲಿಯ ಎಲ್ಲ ಪ್ರಬಂಧಗಳು ಪ್ರೌಢವಾಗಿದ್ದು, ವಿದ್ವಾಂಸರು ತಮ್ಮ ಮಿತಿಯೊಳಗಡೆ ಪ್ರಬಂಧಗಳನ್ನು ರಚಿಸಿಕೊಟ್ಟಿದ್ದಾರೆ. ಜಾನಪದ ಕ್ಷೇತ್ರದಲ್ಲಿ ಇದೊಂದು ಹೊಸ ಸೇರ್ಪಡೆಯಾಗಲಿದೆ. ಈ ಕೃತಿಯು ಜಾನಪದ ಅಭ್ಯಾಸಿಗಳಿಗೆ ಹೆಚ್ಚು ಪ್ರಯೋಜನಕಾರಿಯಾಗಬಲ್ಲದು. ಇಲ್ಲಿ ಸಂಕಲಿಸಿರುವ ಲೇಖನಗಳು ಓದುಗರನ್ನು ಪ್ರೇರೇಪಿಸಿದರೆ ಈ ಶ್ರಮ ಸಾರ್ಥಕ.

—ಸಂಪಾದಕರು

# ಪರಿವಿಡಿ


1. ಅಧ್ಯಕ್ಷರ ಮಾತು .... 1

2. ಪ್ರಸ್ತಾವನೆ ....

3. ಸ್ವಾತಂತ್ರ್ಯಪೂರ್ವ ಜಾನಪದ ಅಧ್ಯಯನದ ದೃಷ್ಟಿ ಧೋರಣೆಗಳು
— ಡಾ॥ ಅಂಬಳಿಕೆ ಹಿರಿಯಣ್ಣ ....

4. ಹಲಸಂಗಿ ಗೆಳೆಯರು ಮತ್ತು 30ರ ದಶಕದ ಜಾನಪದ ಚಟುವಟಿಕೆಗಳು
— ಡಾ॥ ದೇವೇಂದ್ರಕುಮಾರ ಹಕಾರಿ ....

5. ಹಲಸಂಗಿ ಗೆಳೆಯರು - ಮಧುರಚೆನ್ನ
— ಡಾ॥ ಮೃತ್ಯುಂಜಯ ಹೊರಕೇರಿ ....

6. ಹಲಸಂಗಿ ಗೆಳೆಯರು - ಸಿಂಪಿ ಲಿಂಗಣ್ಣ
— ಡಾ॥ ಎಂ. ಎನ್. ವಾಲಿ ....

7. ಹಲಸಂಗಿ ಗೆಳೆಯರ ಗುಂಪಿನ ಕೊಡುಗೆ - ಗರತಿಯ ಹಾಡು
— ಡಾ॥ ಬಸವರಾಜ ಮಲಶೆಟ್ಟಿ ....

8. ಹಲಸಂಗಿ ಗೆಳೆಯರ ಗುಂಪಿನ ಕೊಡುಗೆ - ಜೀವನ ಸಂಗೀತ
— ಡಾ॥ ವೀರಣ್ಣ ದಂಡೆ ....

9. ಹಲಸಂಗಿ ಗೆಳೆಯರ ಗುಂಪಿನ ಕೊಡುಗೆ - ಮಲ್ಲಿಗೆ ದಂಡೆ
— ಡಾ॥ ಎಚ್. ಜಿ. ಲಕ್ಕಪ್ಪಗೌಡ ....

## ಸ್ವಾತಂತ್ರ್ಯಪೂರ್ವ ಜಾನಪದ ಅಧ್ಯಯನದ ದೃಷ್ಟಿ - ಧೋರಣೆಗಳು

○ ಡಾ|| ಅಂಬಳಿಕೆ ಹಿರಿಯಣ್ಣ

ಕನ್ನಡ ಜಾನಪದ ಜಗತ್ತು ವೈವಿಧ್ಯಪೂರ್ಣವಾದುದು ; ವಿಸ್ತಾರವಾದುದು. ಇಲ್ಲಿಯ ಜಾನಪದ ಅಧ್ಯಯನ ನಿಜವಾಗಿಯೂ ಆರಂಭಗೊಂಡುದು ೧೮೭೧ಕ್ಕೂ ಮೊದಲೇ. ಈ ನಿಟ್ಟಿನಲ್ಲಿ ವಿದೇಶಿ ಹಾಗೂ ದೇಶೀಯ ವಿದ್ವಾಂಸರ ಕೊಡುಗೆ ಅಪಾರ. ಈ ವಿದ್ವಾಂಸರು ಕನ್ನಡದಲ್ಲಿ ಈವರೆಗೆ ನಡೆಸಿದ ಅಧ್ಯಯನಗಳ ಸಮೀಕ್ಷೆ ಇಲ್ಲಿನ ಉದ್ದೇಶವಲ್ಲ. ಜೀಶಂಪ, ಸಿಪಿಕೆ, ಸೋಮಶೇಖರ ಇಮ್ರಾಪುರ, ನಂ. ತಪಸ್ವೀ ಕುಮಾರ್, ಅಂಬಳಿಕೆ ಹಿರಿಯಣ್ಣ, ಎ. ವಿ. ನಾವಡ, ವೀರಣ್ಣ ದಂಡೆ, ಪುರುಷೋತ್ತಮ ಬಿಳಿಮಲೆ, ಶ್ರೀ ರಾಮ ಇಟ್ಟಣ್ಣವರ್ ಇನ್ನು ಮುಂತಾದವರು ಈಗಾಗಲೆ ಈ ಕೆಲಸವನ್ನು ಸಾಕಷ್ಟು ಸಮರ್ಪಕವಾಗಿಯೇ ಮಾಡಿ ಮುಗಿಸಿದ್ದಾರೆ. ಆದುದರಿಂದ ಇಲ್ಲಿ ಸ್ವಾತಂತ್ರ್ಯಪೂರ್ವ ಅವಧಿಯ ಅಧ್ಯಯನದ ಸಮೀಕ್ಷೆ, ಅದರ ಮರುಪರಿಶೀಲನೆಗೆ ಕೈ ಹಾಕದೆ ಈ ಅವಧಿಯಲ್ಲಿ ವಿದೇಶಿ ಹಾಗೂ ದೇಶೀಯ ವಿದ್ವಾಸಂರ ಯತ್ನದಿಂದ ಕನ್ನಡ ಜಾನಪದ ಅಧ್ಯಯನ ರೂಪುಗೊಂಡ ಬಗೆ ಆ ಮೂಲಕ ಜಾನಪದ ಕುರಿತು ಆಯಾ ಕಾಲದ ವಿದ್ವಾಂಸರಲ್ಲಿ ಮೂಡಿದ ದೃಷ್ಟಿ ಧೋರಣೆಗಳನ್ನು ಅವರ ಸಾಧನೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಗುರುತಿಸುವ ಯತ್ನ ಮಾಡಿದೆ. ಈ ಬರಹದ ಉತ್ತರಾರ್ಧ ಈ ಅವಧಿಯ ಅಧ್ಯಯನಗಳ ಮತ್ತು ಅಧ್ಯಯನಕಾರರ ಇತಿಮಿತಿಗಳನ್ನು ಕುರಿತಿದೆ.

ಮೊದಲಿಗೆ ಕನ್ನಡದಲ್ಲಿ ಜಾನಪದ ಅಧ್ಯಯನ ರೂಪುಗೊಂಡ ಬಗೆ ಹೇಗೆಂಬುದನ್ನು ಸಾರಸಂಗ್ರಹ ರೂಪದಲ್ಲಿ ಹೀಗೆ ಪಟ್ಟಿ ಮಾಡಿ ಹೇಳಬಹುದು ;

೧. ಕರ್ನಾಟಕದಲ್ಲಿ ಜಾನಪದ ಸಂಗ್ರಹ ಹಾಗೂ ಅಧ್ಯಯನ ಕಾರ್ಯ ಜಗತ್ತಿನ ಇತರ ಭಾಗಗಳಲ್ಲಿ ಆರಂಭಗೊಂಡ ದಿನಗಳಲ್ಲೇ ನಡೆಯತೊಡಗಿದ್ದು ಗಮನಾರ್ಹ. ೧೯ನೆಯ ಶತಮಾನದ ಆದಿಯಲ್ಲೇ ಆರಂಭಗೊಂಡಿದ್ದಕ್ಕೆ ಆಧಾರ ಗಳಿವೆ. ಆಂಗ್ಲ ಆಡಳಿತ ಪದ್ಧತಿ ನೆಲೆಗೊಳ್ಳತೊಡಗಿದಂತೆ ಭಾರತೀಯ ಜನಪದ ಜೀವನದಿಂದ ಆಕರ್ಷಿತರಾಗಿ ಇಲ್ಲಿಯ ಜಾನಪದ ಸಾಮಗ್ರಿಯತ್ತ ಇಂಗ್ಲಿಷರು ವಿಶೇಷ ರೀತಿಯಲ್ಲಿ ಗಮನ ಹರಿಸಲಾರಂಭಿಸಿದರು. ಆರಂಭಿಕ ಅಧ್ಯಯನಕಾರರು

ಆಡಳಿತಾಧಿಕಾರಿಗಳಾಗಿ ಹಾಗೂ ಕ್ರೈಸ್ತ ಮಿಷನರಿಗಳಾಗಿ ಎರಡು ಗುಂಪುಗಳಲ್ಲಿ ಕಾಣಿಸಿಕೊಂಡರು.

೨. ಇಲ್ಲಿಯ ಜಾನಪದ ಅಧ್ಯಯನವನ್ನು ಅವರು ಮುಖ್ಯವಾಗಿ ಎರಡು ನೆಲೆಗಳಲ್ಲಿ ನಡೆಸಿದರು ; (ಅ) ಮತ ಪ್ರಚಾರ ಮತ್ತು ಮತಾಂತರದ ಕಾರಣಕ್ಕಾಗಿ ಇಲ್ಲಿಗೆ ಆಗಮಿಸಿದ ಮಿಷನರಿಗಳು ಆನುಷಂಗಿಕವಾಗಿ ಜಾನಪದ ಅಧ್ಯಯನಕ್ಕೆ ತೊಡಗಿದುದು (ಬ) ಆಡಳಿತಾಧಿಕಾರಿಗಳಾಗಿ ಕೆಲಸ ನಿರ್ವಹಿಸುತ್ತಿದ್ದ ಇಂಗ್ಲಿಷರು ಇಲ್ಲಿಯ ಸಂಸ್ಕೃತಿಯನ್ನು ಸಹಜ ಕುತೂಹಲದಿಂದ ಹಾಗೂ ಆಡಳಿತ ನಿರ್ವಹಣೆಯ ಸುಸೂತ್ರತೆಗಾಗಿ ಅಧ್ಯಯನ ನಡೆಸಿದುದು.

ವಾಸ್ತವವಾಗಿ ಧರ್ಮ ಬೋಧನೆ ಮತ್ತು ಕ್ರೈಸ್ತ ಧಾರ್ಮಿಕ ಗ್ರಂಥಗಳ ಪ್ರಾದೇಶಿಕ ಭಾಷಾನುವಾದಕ್ಕಾಗಿ ಮಿಷನರಿಗಳು ಪ್ರಾದೇಶಿಕ ಸಂಸ್ಕೃತಿಯ ಅಧ್ಯಯನಕ್ಕೆ ತೊಡಗಬೇಕಾಯಿತು. ಆಡಳಿತಾಧಿಕಾರಿಗಳಾಗಿ ನೇಮಕಗೊಂಡವರಿಗಂತೂ ಅಪರಿಚಿತ ನೆಲೆಯಲ್ಲಿ ಆಡಳಿತ ನಿರ್ವಹಣೆಯನ್ನು ಸುಗಮಗೊಳಿಸಿಕೊಳ್ಳುವುದಕ್ಕಾಗಿ ಸ್ಥಳೀಯ ಸಂಸ್ಕೃತಿಯ ಅರಿವನ್ನು ಹೊಂದುವುದು ಅನಿವಾರ್ಯವಾಯಿತು.

೩. ಕಳೆದ ಶತಮಾನದ ಆದಿಭಾಗದಲ್ಲಿ ಇಂಗ್ಲೆಂಡಿನ ಪ್ರಾಚೀನಾನ್ವೇಷಕರು ಜನಪದ ಸಂಸ್ಕೃತಿಯ ಮೂಲಸೆಲೆಯಿಂದ ಆಕರ್ಷಿತರಾಗಿ ಅದರ ಅಧ್ಯಯನಕ್ಕೆ ತೊಡಗಿದರು. ಪರಿಣಾಮವಾಗಿ ಭಾರತದಲ್ಲಿ ನೆಲೆಸಿದ್ದ ಕೆಲವು ಇಂಗ್ಲಿಷರು ತಮಗೆ ಜಾನಪದದ ಸ್ಪಷ್ಟ ಪರಿಕಲ್ಪನೆ ಇರದಿದ್ದರೂ ಮೌಖಿಕ ಪರಂಪರೆಯಲ್ಲಿ ಸಾಗಿ ಬಂದ ಅನೇಕ ವಿಷಯಗಳನ್ನು ಕುತೂಹಲದಿಂದ ನೋಡಿ ಅವುಗಳ ಸಂಗ್ರಹ ಮತ್ತು ಅಧ್ಯಯನದಲ್ಲಿ ತೊಡಗಿದರು.

೪. ಹೀಗೆ ಕನ್ನಡ ಸಂಸ್ಕೃತಿಯ ಬಗೆಗೆ ಪಾಶ್ಚಾತ್ಯರು ತಾಳಿದ ಆಸಕ್ತಿಯ ಫಲವಾಗಿ ಇಲ್ಲಿನ ಜಾನಪದವೂ ಅಭ್ಯಾಸಯೋಗ್ಯ ವಿಷಯವಾಯಿತು. ಕನ್ನಡ ಜಾನಪದ ಅಧ್ಯಯನದಲ್ಲಿ ತೀವ್ರ ಆಸಕ್ತಿ ತೋರಿದ ವಿದೇಶಿ ವಿದ್ವಾಂಸರುಗಳ ಪೈಕಿ ಬುಕಾನಿನ್, ಎಡ್ಗರ್ ಥರ್ಸ್ಟನ್, ಅಬ್ಬೆ ಡುಬೊಯ್ಸ್, ಕೆ. ಮೆಕೆಂಜೆ, ಲೇಡನ್, ಮೋಗ್ಲಿಂಗ್, ಮೇರಿ ಫ್ರೇರೆ, ಗೋವರ್, ಕಿಟೆಲ್ ಮತ್ತು ಫ್ಲೀಟ್ ಮುಖ್ಯರು.

೫. ಇವರಲ್ಲಿ ಮೇರಿ ಫ್ರೇರೆ, ಫ್ಲೀಟ್ ಮತ್ತು ಕಿಟ್ಟೆಲ್ ಅವರು ಕನ್ನಡ ಜಾನಪದ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅಸಾಧಾರಣವಾದುದು.

೬. ಕರ್ನಾಟಕ ಜಾನಪದವನ್ನು ಕನ್ನಡೇತರರಿಗೆ ಪರಿಚಯಿಸಿದ ಕೀರ್ತಿ ಈ ವಿದ್ವಾಂಸರಿಗೆ ಸಲ್ಲಬೇಕು. ಪ್ರಾಸಂಗಿಕವಾಗಿ ಇವರು ಜಾನಪದ ಕ್ಷೇತ್ರಕ್ಕೆ ಪ್ರವೇಶ ಹೊಂದಿದವರಾದರೂ ನೀಡಿದ ಕೊಡುಗೆಗಳು ಮಹತ್ವಪೂರ್ಣವಾದವು. ಫ್ಲೀಟ್ ತಾವು ಸಂಗ್ರಹಿಸಿದ ಲಾವಣಿಗಳಿಗೆ ಉಪಯುಕ್ತ ಟಿಪ್ಪಣಿಗಳನ್ನು ಒದಗಿಸಿರುವುದರೊಂದಿಗೆ ಕನ್ನಡ ರೂಪವನ್ನು ಕೊಟ್ಟು ಅನಂತರ ಇಂಗ್ಲಿಷ್ ಭಾಷಾಂತರವನ್ನು



ನೀಡಿರುವುದು ವಿಶೇಷ. ಹೀಗೆ ಸಂಗ್ರಹ ಸಂಪಾದನೆಯಲ್ಲಿ ಫ್ಲೀಟ್ ಒಂದು ಕ್ರಮವನ್ನು ಪಾಲಿಸಿದ್ದಾರೆ.

೭. ಸಂಗ್ರಹ ಸಂಪಾದನೆ ಅಧ್ಯಯನದಲ್ಲಿ ಕ್ರಮ ಬದ್ಧತೆಯನ್ನು ಮೆರೆದ ಫ್ಲೀಟ್ ಜಾನಪದಾಸಕ್ತರ ದೃಷ್ಟಿಯನ್ನು ಗೀತ ಸಾಹಿತ್ಯದತ್ತ ಸೆಳೆದರು. ಕನ್ನಡ ಜನಪದ ಗೀತೆಗಳ ಅಧ್ಯಯನಕ್ಕೆ ಹೊಸ ಆಯಾಮ ಕಲ್ಪಿಸಿದರು. ಅವರ ಪರಿಶ್ರಮದ ಫಲವಾಗಿ ಕರ್ನಾಟಕದಲ್ಲಿ ಗೀತ ಸಾಹಿತ್ಯದ ಅಧ್ಯಯನ ಬಿರುಸಿನಿಂದ ನಡೆಯಿತು.

೮. ೧೯ನೆಯ ಶತಮಾನದ ಉತ್ತರಾರ್ಧದಲ್ಲಿಯೇ ಭಾರತದ ಜನಪದ ಕತೆಗಳು, ಜನಪದ ಸಂಸ್ಕೃತಿಗಳಿಂದ ಆಕರ್ಷಿತರಾದ ಇಂಗ್ಲಿಷರು ಇಂಥ ಸಾಹಿತ್ಯವನ್ನು ಬರವಣಿಗೆಗೆ ಇಳಿಸತೊಡಗಿದರು. ವಿಶೇಷವಾಗಿ ಜನಪದ ಕತೆಗಳನ್ನು ಸಂಗ್ರಹಿಸಿದ್ದಲ್ಲದೆ ಅವನ್ನು ಇಂಗ್ಲಿಷಿಗೆ ಭಾಷಾಂತರಿಸಿ ಪ್ರಕಟಿಸಿದರು. ಮುಖ್ಯವಾಗಿ ಯುರೋಪಿಯನ್ನರಿಗೆ ಭಾರತೀಯ ಸಂಸ್ಕೃತಿಯನ್ನು ಪರಿಚಯ ಮಾಡಿಕೊಡುವ ಉದ್ದೇಶ ಅವರದಾಗಿತ್ತು.

೯. ಜನಪದ ಜೀವನ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಆರಂಭಿಕ ಘಟ್ಟದ ಬರಹಗಳು ಮಾನವಶಾಸ್ತ್ರಜ್ಞರ, ಮಾನವಕುಲ ವಿವರಣ ಶಾಸ್ತ್ರಜ್ಞರ ಹಾಗೂ ಕನ್ನಡ ಭಾಷೆ-ಸಾಹಿತ್ಯಗಳ ಚರಿತ್ರಕಾರರ ಪ್ರಯತ್ನಗಳೇ ಆಗಿವೆ. ಥರ್ಸ್ಟನ್, ಅನಂತಕೃಷ್ಣ ಅಯ್ಯರ್, ಎಲ್. ಎ. ಕೃಷ್ಣ ಅಯ್ಯರ್ ಮತ್ತಿತರರು ವಿವಿಧ ಕುಲ ಪಂಗಡಗಳಲ್ಲಿ ರೂಢಿಯಲ್ಲಿರುವ ನಂಬಿಕೆ ಸಂಪ್ರದಾಯಗಳನ್ನು, ಕಲಾ ಪ್ರದರ್ಶನಗಳನ್ನು ಉಲ್ಲೇಖಿಸಿದ್ದಾರೆ. ಈ ವಿದ್ವಾಂಸರು ಮಾನವಶಾಸ್ತ್ರೀಯ ನೆಲೆಯಲ್ಲಿ ವಿವರಗಳನ್ನು ಒದಗಿಸಿದ್ದರೂ ಅವು ಜಾನಪದ ಅಧ್ಯಯನಕ್ಕೆ ಉತ್ತಮ ಆಕರ ಸಾಮಗ್ರಿಗಳಾಗಿವೆ.

೧೦. ೧೯ನೆಯ ಶತಮಾನದ ಆದಿಯಲ್ಲೇ ವಿದೇಶಿಯರು ಕನ್ನಡ ನಾಡಿನ ಲಾವಣಿಗಳತ್ತ ಗಮನ ಹರಿಸಿದ ದಾಖಲೆಗಳಿವೆ. ಆದರೆ ಇದಕ್ಕೂ ಮೊದಲೇ ಕನ್ನಡದ ಪ್ರಾಚೀನ ಕವಿಗಳು ಜಾನಪದದ ಪ್ರಭಾವ ಪ್ರೇರಣೆಗಳಿಗೆ ಒಳಗಾಗಿ ಅವನ್ನು ಧಾರಾಳವಾಗಿ ತಮ್ಮ ಬರವಣಿಗೆಯಲ್ಲಿ ಮೈಗೂಡಿಸಿಕೊಂಡಿರುವುದು ಕಂಡುಬರುತ್ತದೆ. ವಡ್ಡಾರಾಧನೆಯಿಂದ ಆರಂಭಿಸಿ ಚಂಪೂ, ರಗಳೆ, ಷಟ್ಪದಿ ಹಾಗೂ ಸಾಂಗತ್ಯ ಕಾವ್ಯಗಳಲ್ಲಿ ಹೇರಳವಾದ ಜಾನಪದ ಸಾಮಗ್ರಿ ಇಡಿಕಿರಿದಿದೆ. ವಚನ ಸಾಹಿತ್ಯ ಹಾಗೂ ದಾಸ ಸಾಹಿತ್ಯಗಳಂತೂ ಜನಪದ ಜೀವನದ ಅನೇಕ ಮಜಲುಗಳ ಮೇಲೆ ಬೆಳಕು ಚೆಲ್ಲುತ್ತವೆ. ಆದರೂ ನೇರವಾದ ಜಾನಪದ ಸಂಗ್ರಹ ಕಾರ್ಯ ಹತ್ತೊಂಬತ್ತನೆಯ ಶತಮಾನದ ಆ ವಿಭಾಗದಿಂದಷ್ಟೇ ಆರಂಭವಾಯಿತು ಎಂದು ಹೇಳಬಹುದು.

೧೧. ಮಾಸ್ತಿ, ಬಿಎಂಶ್ರೀ, ತೀನಂಶ್ರೀ, ಬೆಟಗೇರಿ ಕೃಷ್ಣಶರ್ಮ ಇವರೇ ಮುಂತಾದವರು ಭಾರತೀಯ ಮತ್ತು ಅನ್ಯ ಭಾಷೆಗಳಲ್ಲಿ ಪ್ರಕಟಗೊಂಡಿದ್ದ

ಬರಹಗಳ ಮೂಲಕ ಕನ್ನಡ ಜಾನಪದದ ಸೊಗಸನ್ನು ಮನಗಂಡು ಸಂಪೂರ್ಣ ಸಾಹಿತ್ತಿಕ ಆಸಕ್ತಿಯಿಂದಲೇ ಕನ್ನಡ ಜಾನಪದದ ವಿವೇಚನೆಗೆ ತೊಡಗಿದರು. ಇದರ ಫಲವಾಗಿ ಕನ್ನಡ ಜನಪದ ಸಾಹಿತ್ಯ ಸಂಗ್ರಹಣೆ ಮತ್ತು ಪ್ರಕಟಣಾಕಾರ್ಯ ಚುರುಕುಗೊಂಡಿತು.

೧೨. ಕನ್ನಡ ಜನಪದ ಸಾಹಿತ್ಯದ ಬಗೆಗೆ ಮಾಸ್ತಿ, ಬೇಂದ್ರೆ, ಬಿಎಂಶ್ರೀ, ಶಿ. ಶಿ. ಬಸವನಾಳ, ಬೆಟಗೇರಿ ಕೃಷ್ಣಶರ್ಮ ಮುಂತಾದ ಹಿರಿಯರು ವ್ಯಕ್ತಪಡಿಸಿದ ಅಭಿಪ್ರಾಯಗಳು ನೀಡಿದ ಪ್ರೇರಣೆ ಪ್ರಚೋದನೆಗಳು ಮುಂದಿನ ಸಂಗ್ರಹಕರಿಗೆ ಚೇತೋಹಾರಿಯಾದವು.

೧೩. ೨೦ರ ದಶಕದಲ್ಲಿ ಜನಪದ ಸಾಹಿತ್ಯದ ಸೊಗಸನ್ನು ಅರಿಯತೊಡಗಿದ ನಮ್ಮವರು ಅದನ್ನು ಸಂಪಾದಿಸುವ ಕಾರ್ಯ ಕೈಕೊಂಡದ್ದು ಅದೇ ದಶಕದಲ್ಲಿ. ಆದರೆ ಪ್ರಪ್ರಥಮವಾಗಿ ಪುಸ್ತಕ ರೂಪದಲ್ಲಿ ಪ್ರಕಟಗೊಳಿಸಿದ್ದು ಮಾತ್ರ ಮೂವತ್ತರ ದಶಕದಲ್ಲಿ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಂಪಾದನಾಶಾಸ್ತ್ರ ವಿಮರ್ಶೆ-ವಿಶ್ಲೇಷಣೆಗಳು ರಸಾಸ್ವಾದನೆಯ ರೂಪದಲ್ಲಿ ಅಂಬೆಗಾಲಿಡುತ್ತಿದ್ದ ದಿನಗಳಲ್ಲಿ ಪದವೀಧರರೂ ಅಲ್ಲದ ಇಂಗ್ಲಿಷನ್ನು ಕಲಿತಿರದ ಹಲಸಂಗಿ ಗೆಳೆಯರು ಅಂಥ ಕಾರ್ಯವನ್ನು ನಿರ್ವಹಿಸಿದ್ದು ಸಾಮಾನ್ಯದ ಮಾತಲ್ಲ. ತಮ್ಮ ಅನುಭವದ ಪರಿಧಿಯೊಳಗಿನ ಸಮಷ್ಟಿ ಬದುಕಿನ ಚಿತ್ರಗಳನ್ನು ನೀಡುವುದರ ಮೂಲಕ ಸಾಂಸ್ಕೃತಿಕ ಇತಿಹಾಸವನ್ನು ದಾಖಲಿಸುವ ಕಡೆ ಅವರು ಹೆಚ್ಚು ಗಮನ ವಹಿಸಿದರು. ಒಟ್ಟಾರೆ ಈ ಅವಧಿಯಲ್ಲಿ ಕನ್ನಡ ಜನಪದ ಸಾಹಿತ್ಯಕ್ಕೆ ಶ್ರೀಮಂತಿಕೆಯನ್ನು ತಂದ ಮಹತ್ವ ಹಲಸಂಗಿ ಗೆಳೆಯರ ಕೊಡುಗೆಗಳಲ್ಲಿದೆ.

೧೪. ಭಾರತದ ಇತರೆಡೆಗಳಲ್ಲಿನಂತೆ ಕರ್ನಾಟಕದಲ್ಲೂ ಜಾನಪದ ಸಂಗ್ರಹ ಕುರಿತ ಆಸಕ್ತಿ ಕುದುರಿದುದು ನವೋದಯ ಚಳವಳಿಯ ಜೊತೆಯಲ್ಲಿಯೇ ಕನ್ನಡ ಸಾಹಿತ್ಯದಲ್ಲಾದ ನವೋದಯಕ್ಕೆ ಪಾಶ್ಚಾತ್ಯ ಸಾಹಿತ್ಯ ಸಂಕಲನ ಕಾರಣವಾದಂತೆ ಕರ್ನಾಟಕ ಜಾನಪದ ಅಧ್ಯಯನದ ಆರಂಭಕ್ಕೂ ಪಾಶ್ಚಾತ್ಯ ಅಧ್ಯಯನಕಾರರೇ ಕಾರಣರು.

೧೫. ಆದರ ಈ ಅಧ್ಯಯನ ರೂಪುಗೊಳ್ಳಲು ಬಹುಮಟ್ಟಿಗೆ ಕಾರಣರಾದವರು ನವೋದಯ ಪಂಥದ ಬರಹಗಾರರು. ಬದುಕನ್ನು ಇವರು ಆಪ್ತವಾಗಿ ನೋಡಲು ಆರಂಭಿಸಿದುದೇ ಅದಕ್ಕೆ ಕಾರಣ. ಜನಪದ ಸಾಹಿತ್ಯದ ಸೊಗಸಿಗೆ ಮಾರುಹೋದುದು ಮತ್ತೊಂದು ಕಾರಣ.

೧೬. ನವೋದಯದ ಸಂದರ್ಭದಲ್ಲಿ ಜನಪದ ಬದುಕಿನಲ್ಲಿ ಹಾಸುಹೊಕ್ಕಾಗಿ ಬೆರೆತಿದ್ದ ಜನಪದ ಸಾಹಿತ್ಯ ಕೆಲವರ ಗಮನ ಸೆಳೆದದ್ದು ಮಹತ್ವದ ಸಂಗತಿಯಾಗಿದೆ. ಒಂದು ಕಾಲದಲ್ಲಿ ಸಂಸ್ಕೃತದ ವ್ಯಾಮೋಹವಿದ್ದಂತೆ ನವೋದಯದ ಕಾಲದಲ್ಲಿ ಇಂಗ್ಲಿಷಿನ ವ್ಯಾಮೋಹ ವಿಪರೀತವಾಗಿತ್ತು. ಇದರಿಂದಾಗಿ ಕೃತಕ ನಾಗರಿಕ



ಜೀವನದಿಂದ ಸಹಜ ಜನಪದ ಜೀವನಕ್ಕೆ ಪದಾರ್ಪಣಗೈಯಲು ಒಂದಿಷ್ಟು ಸಮಯವೇ ಹಿಡಿಯಿತು. ಬೇರೆ ಬೇರೆ ಉದ್ದೇಶಗಳಿಗಾಗಿ ಪಾಶ್ಚಾತ್ಯ ಮಿಷನರಿಗಳು ಕನ್ನಡ ಜನಪದ ಸಾಹಿತ್ಯವನ್ನು ಸಂಗ್ರಹಿಸಿದುದು ಒಂದು ದಾಖಲೆಯಾಗಿದ್ದರೂ ಅದು ಸಾಹಿತ್ಯ ಸೌಂದರ್ಯ ದೃಷ್ಟಿಯ ರಸಾಸ್ವಾದನೆಯ ಆಕಾಂಕ್ಷೆಯ ಹಾಗೂ ಕನ್ನಡ ಸಂಸ್ಕೃತಿಯ ಅರಿವಿನ ಕಾರ್ಯವಾಗಿತ್ತೆಂದು ಹೇಳುವುದು ಕಷ್ಟ. ನಿಜವಾದ ಕಾಳಜಿಯಿಂದ ಈ ಕಾರ್ಯವನ್ನು ಕರ್ನಾಟಕದಲ್ಲಿ ಪ್ರಥಮ ಬಾರಿಗೆ ಸುಂದರ ತ್ರಿಪದಿ ಸಂಕಲನಗಳ ಮೂಲಕ ನಿರ್ವಹಿಸಿದವರು ಹಲಸಂಗಿ ಗೆಳೆಯರೇ. ಈ ಸಂಕಲನಗಳು ಕನ್ನಡ ಕವಿಗಳ ಮೇಲೆ ಪ್ರಭಾವ ಬೀರಿದವು; ನೇರ ಸಂಗ್ರಹ ಕಾರ್ಯಕ್ಕೆ ಪ್ರೇರಣೆ ಒದಗಿಸಿದವು.

೧೭. ಸ್ವಾತಂತ್ರ್ಯಪೂರ್ವದಲ್ಲಿ ಜಾನಪದ ಸಂಗ್ರಹ ಮಾಡಿದ ಆಸಕ್ತರೆಲ್ಲ ಮೂಲತಃ ಸಾಹಿತಿಗಳು. ಸಹಜವಾಗಿ ಅವರ ಒಲವೆಲ್ಲ ಹೆಚ್ಚಾಗಿ ಸಾಹಿತ್ಯಿಕ ಮಹತ್ವದಿಂದ ಕೂಡಿದ ಗೀತೆಗಳ ಕಡೆಗೂ ಇತ್ತು. ನವೋದಯ ಕಾಲದ ಭಾವಗೀತೆಯ ಬೆರಗು ಕನ್ನಡ ಸಾಹಿತ್ಯ ರಸಿಕರ ಮೇಲೆ ವಿಶೇಷ ಪ್ರಭಾವವನ್ನು ಬೀರುತ್ತಿದ್ದ ಆ ಕಾಲದಲ್ಲಿ ಆ ಸಾಹಿತ್ಯಕ್ಕೆ ಸಂವಾದಿಯಾಗಿ ಜನಪದ ಗೀತೆ, ಕಥನ ಗೀತೆಗಳನ್ನು ಆಯ್ದು ನೀಡುವುದು ಅವರ ಉದ್ದೇಶವಿದ್ದಂತೆ ತೋರುತ್ತದೆ.

೧೮. 20, 30, 40ರ ದಶಕಗಳಲ್ಲಿಂತೂ ಕಾಲಕಾಲಕ್ಕೆ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಗಳು, ಪರಿಷತ್ ಪತ್ರಿಕೆಯ ಬರಹಗಳು ಜಾನಪದ ಆಸಕ್ತರನ್ನು ಪ್ರಚೋದಿಸುವ ಪರಿಣಾಮಕಾರಿ ಸಂದರ್ಭಗಳಾಗಿದ್ದವು. (೧೯೨೩ರ ನವೆಂಬರ್‌ನಲ್ಲಿ ವಿಜಾಪುರದಲ್ಲಿ ಸೇರಿದ ಒಂಬತ್ತನೆಯ ಸಾಹಿತ್ಯ ಸಮ್ಮೇಳನದಲ್ಲಿ ಗೆಳೆಯರ ಗುಂಪಿನ ಹಿರಿಯರು ಮಂಡಿಸಿದ ಪ್ರಬಂಧಗಳು ಜನಪದ ಸಾಹಿತ್ಯಾಸಕ್ತರನ್ನು ಹುರಿದುಂಬಿಸುವ ಸಂದರ್ಭವಾಗಿತ್ತು). ಈ ಅವಧಿಯಲ್ಲಿ ಸಾಹಿತ್ಯ ಸಮ್ಮೇಳನದ ವೇದಿಕೆಗಳಲ್ಲಿ, ಪತ್ರಿಕೆಗಳಲ್ಲಿ ಸುಳಿದಾಡಿದ ಜಾನಪದ ನವೋದಯದ ಮುಂಬೆಳಗು ಗೀತರೂಪದ ಸಾಹಿತ್ಯಕ್ಕಷ್ಟೇ ಸೀಮಿತವಾಗದೆ ಸಮಗ್ರ ಜಾನಪದದ ಹಿನ್ನೆಲೆಯಲ್ಲಿ ನಡೆದುದು ಉಲ್ಲೇಖಾರ್ಹ.

೧೯. ಸ್ವಾತಂತ್ರ್ಯಪೂರ್ವ ಅವಧಿಯಲ್ಲಿ ಕನ್ನಡ ಜಾನಪದ ಕ್ಷೇತ್ರದಲ್ಲಿ ನೇರವಾಗಿ ಕೆಲಸ ಮಾಡಿದ ವಿದ್ವಾಂಸರು ಬೆರಳೆಣಿಕೆಯ ಮಂದಿ ಮಾತ್ರ. ಆ ವಿದ್ವಾಂಸರ ಪೈಕಿ ಮಾಸ್ತಿ, ನಡಿಕೇರಿಯಂಡ ಚಿಣ್ಣಪ್ಪ, ಅರ್ಚಕ ಬಿ. ರಂಗಸ್ವಾಮಿ ಹಲಸಂಗಿ, ಗೆಳೆಯರು, ಮತಿಘಟ್ಟ ಸೋದರರು, ಗೊರೂರು ರಾಮಸ್ವಾಮಿ ಅಯ್ಯಂಗಾರ್, ದೇವುಡು ನರಸಿಂಹಶಾಸ್ತ್ರಿ, ಬಿ. ಎನ್. ರಂಗಸ್ವಾಮಿ ಮುಖ್ಯರು.

೨೦. ಈ ಮಹನೀಯರು ಕನ್ನಡದ ರಸವತ್ತಾದ ಗೀತೆಗಳನ್ನು ಆಯ್ದು ಸಂಕಲಿಸಿ, ಪ್ರಕಟಿಸಿ ಕರ್ನಾಟಕದಲ್ಲಿ ಜಾನಪದದ ಬಗೆಗೆ ವಿಶೇಷವಾದ ಒಲವು ಮೂಡುವಂತೆ ಮಾಡಿದರು. ವಿಶೇಷವಾಗಿ ಉತ್ತರ ಕರ್ನಾಟಕ ಪ್ರದೇಶದ ರಚನೆಗಳು

ಕರ್ನಾಟಕದ ಉದ್ದಗಲಕ್ಕೂ ಜನಪ್ರಿಯವಾದವು; ಆಸಕ್ತರ ಗಮನವನ್ನು ಸೆಳೆದವು. ಸ್ವಾತಂತ್ರ್ಯಪೂರ್ವದ ಈ ಸಾಧನೆ ಗಮನಾರ್ಹ.

೨೧. ಕರ್ನಾಟಕ ಗೀತ ಸಾಹಿತ್ಯ ಸಂಕಲನ ಪ್ರಚಾರ ಕಾರ್ಯಕ್ಕೆ ನಾಂದಿ ಹಾಡಿದ ಶ್ರೇಯಸ್ಸು ಹಲಸಂಗಿ ಗೆಳೆಯರಿಗೇ ಸಲ್ಲಬೇಕು. ಇವರ 'ಗರತಿಯ ಹಾಡು' ಕನ್ನಡದ ಪ್ರಪ್ರಥಮ ಸಂಕಲನವಾಗಿದ್ದು ಗುಣದ ದೃಷ್ಟಿಯಿಂದ ಇಂದಿಗೂ ಮಹತ್ವದ ಸಂಕಲನವಾಗಿದೆ. ಇದಾದ ಮೇಲೆ ಹೊರಬಂದ ಕಾಪ್ಸೆ ರೇವಪ್ಪ ಅವರ 'ಮಲ್ಲಿಗೆ-ದಂಡೆ', ಸಿಂಪಿ ಲಿಂಗಣ್ಣ ಮತ್ತು ಧೂಲಾ ಸಾಹೇಬರ 'ಜೀವನ ಸಂಗೀತ' ಅರ್ಚಕ ರಂಗಸ್ವಾಮಿಗಳ 'ಹುಟ್ಟಿದ ಹಳ್ಳಿ', ಮತಿಘಟ್ಟ ಸೋದರರ 'ನಾಡ ಪದಗಳು' ಸ್ವಾತಂತ್ರ್ಯಪೂರ್ವ ಅವಧಿಯ ಮೈಲಿಗಲ್ಲುಗಳು ಎಂದೇ ಹೆಸರಾಗಿವೆ.

೨೨. ಹೀಗೆ ಸೀಮಿತ ಉದ್ದೇಶದಿಂದ ಆರಂಭಗೊಂಡ ಕನ್ನಡ ಜನಪದ ಸಾಹಿತ್ಯ ಸಂಗ್ರಹಗಳ ಸಾಲಿನಲ್ಲಿ ಸಾಹಿತ್ಯೇತರ ವಿಷಯಗಳ ಪ್ರಸ್ತಾಪ ಅಲ್ಲಲ್ಲಿ ಬಂದಿದ್ದರೂ ಅವು ಪ್ರಾಸಂಗಿಕವಾಗಿ ಮಾತ್ರ. ಆದರೂ ಸಮಗ್ರ ಜನಪದ ಜೀವನವನ್ನೇ ಅಭ್ಯಸಿಸಿ ಜಾನಪದದ ಹಿನ್ನೆಲೆಯಲ್ಲಿ ಜನಪದ ಗೀತೆಗಳ ಸೊಗಸು ಸ್ವಾರಸ್ಯವನ್ನು ಪ್ರತಿಪಾದಿಸುವ ಪ್ರಯತ್ನಗಳೂ ಇಲ್ಲದಿಲ್ಲ. ಚಿಣ್ಣಪ್ಪ, ಅರ್ಚಕ ರಂಗಸ್ವಾಮಿ, ದೇವುಡು ಅವರು ಮಾತ್ರ ಸಮಗ್ರ ಜಾನಪದದ ಹಿನ್ನೆಲೆಯಲ್ಲಿ ಗೀತ ಸಾಹಿತ್ಯವನ್ನು ವಿಶ್ಲೇಷಿಸುವ ಪ್ರಯತ್ನ ಮಾಡಿದರು.

೨೩. ಸ್ವಾತಂತ್ರ್ಯಪೂರ್ವದ ಸಂಗ್ರಹಗಳು ಆ ಕಾಲದ ವಿದ್ವಾಂಸರನ್ನೂ ಬಹುವಾಗಿ ಆಕರ್ಷಿಸಿದವು. ತೀನಂಶ್ರೀ ಅವರು ಈ ತ್ರಿಪದಿ ಸಂಕಲನಗಳ ಸಾಹಿತ್ಯಿಕ ಸೊಗಸಿಗೆ ಮಾರು ಹೋಗಿ ಕಾವ್ಯಮೀಮಾಂಸೆಯ ಒರೆಗೆ ಹಚ್ಚಿ ಈ ಸಾಹಿತ್ಯದ ಮರ್ಮವನ್ನು ತೋರಿಸಿಕೊಟ್ಟರು. ದೇವುಡು ಅವರು ವಿಧ ವಿಧದ ಹಾಡುಗಳನ್ನು ಆಧರಿಸಿ 'ಕರ್ಣಾಟಕ ಸಂಸ್ಕೃತಿ'ಯ ಅಧ್ಯಯನವನ್ನೇ ನಡೆಸಿದರು. ಒಟ್ಟಿನಲ್ಲಿ ನವೋದಯ ಕಾಲದ ಕನ್ನಡ ಜನಪದ ಸಾಹಿತ್ಯದೊಡನೆ ಬರಹಗಾರರೆಲ್ಲ ಸಂಬಂಧ ವಿರಿಸಿಕೊಂಡದ್ದು ಗಮನಕ್ಕೆ ಬರುತ್ತದೆ.

೨೪. ಈ ಅವಧಿಯ ಜಾನಪದ ಅಧ್ಯಯನ ಕ್ಷೇತ್ರದ ಮೇಲೆ ರೊಮ್ಯಾಂಟಿಕ್ ಹಾಗೂ ರಾಷ್ಟ್ರೀಯತಾ ಮನೋಭಾವಗಳ ಪ್ರಭಾವ ತೀವ್ರವಾಗಿತ್ತು. ನಾಟಕ, ನೃತ್ಯ, ಕ್ರೀಡೆ ಹಾಗೂ ವಿನೋದಗಳಂಥ ಕ್ರಿಯಾತ್ಮಕ ಬಗೆಗಳ ಸ್ಥೂಲ ಚರ್ಚೆ-ನಿರೂಪಣೆ ಆಗ ಸಾಮಾನ್ಯವಾಗಿತ್ತು.

೨೫. ಕೆಲವು ಬಿಡಿ ಬರಹಗಳು ಸೂಕ್ಷ್ಮಾತಿ ಸೂಕ್ಷ್ಮ ವಿವರಗಳಿಗೂ ಗಮನ ನೀಡಿದಂಥವಾಗಿದ್ದು ಈ ನಾಡಿನ ಜಾನಪದ ಪ್ರಕಾರಗಳಲ್ಲಿ ವ್ಯಾಪಕ ಸದಭಿರುಚಿ ಮೂಡಿಸಲು ಕಾರಣವಾಗಿವೆ. ಜನಪದ ಜೀವನ ಮತ್ತು ಸಂಸ್ಕೃತಿಗೆ ಸಂಬಂಧಿಸಿದ



ವಿವಿಧ ಮುಖಗಳ ಅಧ್ಯಯನ ಕ್ಷೇತ್ರದತ್ತ ಹೊಸ ಪ್ರತಿಭೆಗಳನ್ನು ಸೆಳೆದಿರುವುದು ಈ ಬರೆಹಗಳ ವಿಶೇಷ.

೨೬. ಈ ಅವಧಿಯಲ್ಲಿ ವೈಯಕ್ತಿಕ ಅಭಿರುಚಿಯಿಂದ ಜಾನಪದ ಸಂಗ್ರಹ ಸಂಪಾದನೆ ಅಧ್ಯಯನ ನಡೆಸಿದವರ ಸಂಖ್ಯೆಯೇ ದೊಡ್ಡದು. ಸಂಘ ಸಂಸ್ಥೆಗಳ ನೆರವಿಲ್ಲದೆ ಇವರು ಮಾಡಿರುವ ಕೆಲಸ ಲಕ್ಷ್ಯಾರ್ಹವಾದುದು.

೨೭. ನಡಿಕೇರಿಯಂಡ ಚಿಣ್ಣಪ್ಪ, ಅರ್ಚಕ ಬಿ. ರಂಗಸ್ವಾಮಿ, ದೇವುಡು ನರಸಿಂಹ ಶಾಸ್ತ್ರಿ, ಹಲಸಂಗಿ ಗೆಳೆಯರು, ಮತಿಘಟ್ಟ ಸೋದರರು, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಬಿ. ಎಸ್. ರಂಗಸ್ವಾಮಿ, ಕರೀಂಖಾನ್ ಇವರೇ ಮುಂತಾದವರು ಅತ್ಯಂತ ನಿಷ್ಠೆಯಿಂದ ಈ ಕ್ಷೇತ್ರದಲ್ಲಿ ದುಡಿದು ಕನ್ನಡದಲ್ಲಿ (ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ಜಾನಪದ ಸಾಮಗ್ರಿಯಲ್ಲಿ ಆಸಕ್ತಿ ಹುಟ್ಟಿಸಿ) ಜಾನಪದ ಅಧ್ಯಯನ ರೂಪುಗೊಳ್ಳಲು ಕಾರಣರಾಗಿದ್ದಾರೆ.

೨೮. ಹೀಗೆ ಸ್ವಾತಂತ್ರ್ಯಪೂರ್ವ ಅವಧಿಯ ಸಂಗ್ರಹಕರು ಕನ್ನಡ ಜಾನಪದ ಸಂಗ್ರಹ - ಸಂಪಾದನೆಯಲ್ಲಿ ತೋರಿದ ಶ್ರದ್ಧೆ, ಕಳಕಳಿ, ಪ್ರೀತಿ ಉತ್ಸಾಹಗಳಿಂದ ಪ್ರೇರೇಪಿತರಾಗಿ ಮುಂದಿನವರು ಜಾನಪದ ಅಧ್ಯಯನವನ್ನು ಇನ್ನಷ್ಟು ವ್ಯವಸ್ಥಿತವಾಗಿ ಮುನ್ನಡೆಸಿದರು.

* * *

ಸ್ವಾತಂತ್ರ್ಯಪೂರ್ವ ಅವಧಿಯಲ್ಲಿ ಕರ್ನಾಟಕದಲ್ಲಿ ನಡೆದ ಜಾನಪದ ಸಂಬಂಧವಾದ ಚಟುವಟಿಕೆಗಳನ್ನು ಗಮನಿಸುವಾಗ ಅವುಗಳ ಇತಿಮಿತಿಗಳನ್ನು ಪ್ರತ್ಯೇಕವಾಗಿಯೇ ಪರಿಶೀಲಿಸಬೇಕಾಗುತ್ತದೆ.

ಮಾನವ, ಅವನ ಪರಂಪರಾಗತ ಬದುಕು ಮತ್ತು ಸಂಸ್ಕೃತಿಯನ್ನು ಅರಿಯುವ ದೃಷ್ಟಿಯಿಂದ ಜಾನಪದ ಅಧ್ಯಯನಕ್ಕೆ ವಿಶೇಷ ಮಹತ್ವ ಪ್ರಾಪ್ತವಾಗಿದೆ. ಆದರೆ ಜಾನಪದದ ಹೆಸರಿನಲ್ಲಿ ಮಾನವಿಕ ವಿಭಾಗದ ಬೇರೆ ಬೇರೆ ಕ್ಷೇತ್ರಗಳ ವಿದ್ವಾಂಸರು ನಡೆಸಿರುವ ಸಂಗ್ರಹ - ಅಧ್ಯಯನಗಳು ಅವೈಜ್ಞಾನಿಕವಾಗಿವೆ; ಅಸಮಗ್ರವಾಗಿವೆ. ಈ ದೃಷ್ಟಿಯಿಂದಲೂ ಕನ್ನಡ ಜಾನಪದ ಸ್ವಾತಂತ್ರ್ಯಪೂರ್ವ ಅವಧಿಯಲ್ಲಿ ಒಂದು ಸಮರ್ಪಕ, ಸಾಮಾಜಿಕ ಶಿಸ್ತಾಗಿ ಶೈಶವಾವಸ್ಥೆಯಲ್ಲೇ ಇತ್ತು ಎಂದು ಹೇಳಬೇಕಾಗುತ್ತದೆ. ಅದರ ಈ ಅವಸ್ಥೆಗೆ ಮೂರು ಪ್ರಬಲ ಕಾರಣಗಳನ್ನು ಗುರುತಿಸಬಹುದು :

೧. ಪರಿಕಲ್ಪನೆಯ ತೊಡಕು. ಜನಪದ ಎಂದರೆ ಕೇವಲ ಹಳ್ಳಿಗಾಡಿನ ಒಂದು ಗುಂಪು ; ಜಾನಪದವೆಂದರೆ ಆ ಜನರಿಗೆ ಸೇರಿದ ಕಲಾ ಸಂಪತ್ತು ಎಂಬ ಸೀಮಿತ ಗ್ರಹಿಕೆಯೇ ಬೇರೂರಿತ್ತು. ಹೀಗಾಗಿ ಈ ಅವಧಿಯ ಸಂಗ್ರಹಕರೆಲ್ಲ ತಮ್ಮ ಗಮನವನ್ನು ಸಂಪೂರ್ಣವಾಗಿ ಹಳ್ಳಿಗಾಡುಗಳಿಗಷ್ಟೇ ಕೇಂದ್ರೀಕರಿಸಿದ್ದರು.

೨. ವಿವಿಧ ಮೂಲಗಳಿಂದ ಸಾಮಗ್ರಿಯನ್ನು ಸಂಗ್ರಹಿಸುವ ಅಗತ್ಯವನ್ನು ಮನಗಾಣದಿದ್ದುದು.

೩. ಸಂಗ್ರಹಿತ ಸಾಮಗ್ರಿಯನ್ನು ಯುಕ್ತ ವಿಶ್ಲೇಷಣೆ ಮತ್ತು ವ್ಯಾಖ್ಯಾನಕ್ಕೆ ಗುರಿ ಮಾಡದಿರುವುದು.

ಅದೇನೇ ಇರಲಿ, ಈ ಅವಧಿಯ ಸಂಗ್ರಹಕರು ಅನೇಕ ಇತಿಮಿತಿಗಳ ನಡುವೆ ಉತ್ತಮ ಸಾಧನೆಯನ್ನು ತೋರಿದ್ದರೂ ಅವರ ಸಂಗ್ರಹ ಅಧ್ಯಯನಗಳಲ್ಲಿ ಅನೇಕ ಕೊರತೆಗಳು, ನ್ಯೂನತೆಗಳು ನುಸುಳಿಕೊಂಡಿವೆ. ಅವುಗಳನ್ನು ಈ ಕೆಳಗೆ ಕಾಣಿಸಿದಂತೆ ಪಟ್ಟಿ ಮಾಡಿ ಹೇಳಬಹುದು :

೧. ಆರಂಭಿಕ ಘಟ್ಟದ ಅಧ್ಯಯನಕಾರರು ಇಲ್ಲಿನ ಜಾನಪದದ ಬಗೆಗೆ ಆಸಕ್ತಿ ತಳೆದದ್ದು ಅದು ಯಾವ ರೂಪದಲ್ಲಿದೆಯೊ ಆ ರೂಪದಲ್ಲೇ ಅದನ್ನು ಅರ್ಥ ಮಾಡಿಕೊಳ್ಳುವ ಉದ್ದೇಶದಿಂದಲ್ಲ. ಅದು ಏನನ್ನು ಹೇಳುತ್ತದೆ ಎಂಬ ಕುತೂಹಲದಿಂದಲೂ ಅಲ್ಲ. ಮುಖ್ಯವಾಗಿ ಸಾಹಿತ್ಯಿಕ, ಭಾವುಕ, ಧಾರ್ಮಿಕ, ರಾಷ್ಟ್ರೀಯ, ರಾಜಕೀಯ ಮುಂತಾದ ಕಾರಣಗಳಿಗಾಗಿ.[1]

೨. ಆರಂಭಿಕ ಸಂಗ್ರಹ - ಅಧ್ಯಯನಗಳಲ್ಲಿ ಜಾನಪದ ಎಂಬುದು ಕುತೂಹಲಕ್ಕಾಗಿ ನೋಡುವ ಒಂದು ಸಾಧಾರಣ ವಿಷಯವಾಗಿತ್ತು. ಕೇವಲ ಮೌಖಿಕ ಮೂಲದ ಸಾಹಿತ್ಯ ರೂಪಗಳಿಗೆ ಮಾತ್ರ ಅದು ಸೀಮಿತಗೊಂಡಿತ್ತು. ಮಾನವ ಸಂಸ್ಕೃತಿಯ ಎಲ್ಲ ಸ್ತರಗಳನ್ನೂ ಗುರುತಿಸುವ ಯತ್ನ ಇರಲೇ ಇಲ್ಲ.

೩. ಆರಂಭಿಕ ಘಟ್ಟದ ಅಧ್ಯಯನಕಾರರು ಜಾನಪದ ಅಧ್ಯಯನ ಎಂದರೆ ಸಂಗ್ರಹ ಕಾರ್ಯ ಎಂದಷ್ಟೇ ತಿಳಿದಿದ್ದರು. ಅಂತೆಯೇ ಅವರ ಅಧ್ಯಯನಗಳು ಆಗ ಯೂರೋಪಿನಲ್ಲಿ ಚಾಲ್ತಿಯಲ್ಲಿದ್ದ ಅಧ್ಯಯನ ವಿಧಾನಗಳನ್ನು ಲಕ್ಷ್ಯಕ್ಕೆ ತೆಗೆದುಕೊಂಡೇ ಇರಲಿಲ್ಲ. ಬಹುಪಾಲು ಸಂಗ್ರಹಗಳು ಮಾಹಿತಿ ಸಂಗ್ರಹದ ಸಾಮಾನ್ಯ ತತ್ವ ಮತ್ತು ಸಾಂಸ್ಕೃತಿಕ ವಿವರಗಳಿಗೆ ಲಕ್ಷ್ಯವನ್ನೇ ನೀಡಿಲ್ಲ.

೪. ಆರಂಭಿಕ ದಿನಗಳಲ್ಲಿ ಪ್ರಧಾನವಾಗಿ ನಡೆದಿರುವ ಜಾನಪದ ಚಟುವಟಿಕೆಯೆಂದರೆ ಮೌಖಿಕ ಜಾನಪದದ ಬಗೆಗಷ್ಟೇ ಅಧ್ಯಯನ ನಡೆಸಿರುವುದು. ಇದಕ್ಕೆ ಮುಖ್ಯ ಕಾರಣವೆಂದರೆ (ಅ) ಜಾನಪದದ ಹೆಚ್ಚಿನ ಭಾಗ ಮೌಖಿಕ ಸ್ವರೂಪದ್ದು. (ಕ) ಕಣ್ಮರೆಯಾಗುತ್ತಿರುವ ಪರಂಪರೆಯ ಬಗೆಗೆ ಒಲವು ತಳೆದ ವಿದ್ವಾಂಸರು ಜಾನಪದ ಅಧ್ಯಯನದಲ್ಲಿ ಆಸಕ್ತಿ ಹೊಂದಿದ್ದುದು. ಅದರಲ್ಲಿ ಬಹುಪಾಲು ಮಂದಿ

---

1. ಆರಂಭಿಕ ಸಂಗ್ರಹಕರ ಜಾನಪದ ಬಗೆಗಿನ ಧೋರಣೆ, ಅವರ ಸಂಗ್ರಹ ಅಧ್ಯಯನಗಳೇ ಅದನ್ನು ಸ್ಪಷ್ಟಪಡಿಸುತ್ತವೆ.



ಸಾಹಿತ್ಯ ಕ್ಷೇತ್ರದವರು. ಗ್ರಾಮೀಣ ಪ್ರತಿಮೆಗಳಿಂದ ತುಂಬಿದ ಮೌಖಿಕ ಕಾವ್ಯದಿಂದ ಅವರು ಆಕರ್ಷಿತರಾದುದು.

೫. ಆರಂಭಿಕ ಘಟ್ಟದಲ್ಲಿ ಶಿಷ್ಟರು ಕೂಡ ಪರಂಪರಾಗತ ಜ್ಞಾನವನ್ನು ಗೌರವಿಸುತ್ತಿದ್ದರು. ಮೌಖಿಕ ಜಾನಪದ, ಜನಪದ ನೃತ್ಯ, ಜನಪದ ನಾಟಕದ ಬಗೆಗೆ ತೀವ್ರ ಆಸಕ್ತಿ ಹೊಂದಿದ್ದರು. ಅಂತೆಯೇ ಜಾನಪದದ ಇತರ ಪ್ರಕಾರಗಳನ್ನು ಆದಿಮ ಚಟುವಟಿಕೆಗಳದು ಹಾಗೂ ತುಚ್ಛೀಕೃತ ಮೂಢನಂಬಿಕೆಗಳದ್ದೆಂದು ಪರಿಗಣಿಸುತ್ತಿದ್ದರು. ಆಧುನೀಕರಣ ಅವರು ಅದರಿಂದ ದೂರ ಸರಿಯುವಂತೆ ಮಾಡಿತು. ಜಾನಪದ ಅಧ್ಯಯನದ ದುಸ್ಥಿತಿಗೆ ಇದೂ ಒಂದು ಕಾರಣವಿರಬಹುದು. ಎರಡನೆಯದಾಗಿ ಜಾನಪದದ ಪೂರಕ ಶಿಸ್ತುಗಳಾದ ಮಾನವಶಾಸ್ತ್ರ, ಸಮಾಜಶಾಸ್ತ್ರ, ಮನೋವಿಜ್ಞಾನ ಮತ್ತು ಭಾಷಾವಿಜ್ಞಾನಗಳು ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಹೆಚ್ಚು ಬೆಳವಣಿಗೆ ಸಾಧಿಸಲಿಲ್ಲ. ಹಾಗಾಗಿ ಈ ಕ್ಷೇತ್ರ ನಿರ್ಲಕ್ಷಿತವಾಗಿಯೇ ಉಳಿಯಿತು. ಇದರ ಪರಿಣಾಮವಾಗಿ ವಿದ್ವಾಂಸರು ಇವುಗಳನ್ನು ಹೊಸ ಬೆಳಕಿನಲ್ಲಿ ನೋಡುವಲ್ಲಿ ಸಫಲರಾಗಲಿಲ್ಲ. ಜಾನಪದ ಅಧ್ಯಯನಕಾರರೆಂದು ಪರಿಗಣಿತರಾಗಿದ್ದ ಅನೇಕರು ಸಾಹಿತ್ಯ ಕ್ಷೇತ್ರಕ್ಕೆ ಸೇರಿದವರಾಗಿದ್ದರು. ಅವರು ಜಾನಪದವನ್ನು ರೂಢಿಬದ್ಧ ವಿಧಾನದಲ್ಲಿಯೇ ಪ್ರತಿಪಾದಿಸಿದರು. ಜಾನಪದದ ಮಹತ್ವ ಅರಿಯದ ಸಾಮಾನ್ಯರೇ ಅಲ್ಲದೆ ಅಷ್ಟೊ ಇಷ್ಟೋ ಅಧ್ಯಯನ ಮಾಡಿದವರೂ ಜಾನಪದವೆಂದರೆ ಜನಪದ ನೃತ್ಯನಾಟಕ, ಜನಪದ ಗೀತೆಗಳನ್ನೊಳಗೊಂಡಿರುವ ಜನಪದ ಕಲೆಗಳೆಂದೇ ನಂಬಿದರು.

೬. ಸ್ವಾತಂತ್ರ್ಯಪೂರ್ವ ಅವಧಿಯಲ್ಲಿ ವಿದೇಶೀಯರಂತೆ ಸಾಹಿತ್ಯ ಮತ್ತು ಸಾಹಿತ್ಯೇತರ ವಿಷಯಗಳಿಗೆ ಸಂಬಂಧಿಸಿದಂತೆ ಸಂಗ್ರಹ ಕಾರ್ಯವನ್ನು ದೇಶೀಯ ಸಂಗ್ರಹಕರೂ ನಿರ್ವಹಿಸಿದ್ದುಂಟು. ಆದರೆ ಸಾಮಾಜಿಕ ಅಂಶಗಳ ನೆಲೆಯಲ್ಲಿ ಜಾನಪದ ಸಮಾಲೋಚನೆ ನಡೆಸುವ ಪರಿ ಆರಂಭಗೊಂಡುದು ೧೯೧೮ರಿಂದ ಈಚೆಗೆ. ಅಂದಿನಿಂದ ಗಾದೆ, ಒಗಟುಗಳು, ಹಾಡುಗಳ ಸಂಗ್ರಹಗಳು ಹೊರಬರಲಾರಂಭಿಸಿದವು. ಆದರೆ ಆ ಪ್ರಯತ್ನಗಳಿಗೆ ಒಂದು ನಿಶ್ಚಿತ ಗುರಿ ಮಾರ್ಗದರ್ಶನ ಇರಲಿಲ್ಲ. ಅದಕ್ಕೆ ಕಾರಣ ; (ಅ) ಆರಂಭಿಕ ಹಂತದಲ್ಲಿ ಈ ಎಲ್ಲವೂ ಬಿಡಿ ಪ್ರಯತ್ನಗಳೇ ಆಗಿದ್ದುದು. (ಬ) ಅವು ಎಂದಿಗೂ ಸಮರ್ಪಕ, ಗಂಭೀರ ಹಾಗೂ ವಿದ್ವತ್ಪೂರ್ಣ ವಿವೇಚನೆಗೆ ಒಳಪಟ್ಟಿರಲಿಲ್ಲ. ಇಂಥ ಒಂದು ನಿರಾಶಾದಾಯಕ ಸನ್ನಿವೇಶದಲ್ಲಿ ಕೊಡಗಿನ ನಡಿಕೇರಿಯಂಡ ಚಿಣ್ಣಪ್ಪ ಬದಲಾವಣೆಯ ಹೊಸ ಅಲೆಯನ್ನೇ ಎಬ್ಬಿಸಿದರು. ಹೊಸ ಪರಂಪರೆಯನ್ನು ಅವರು ಹುಟ್ಟುಹಾಕಿದರೂ ಮೊಳಕೆಯಲ್ಲಿಯೇ ಅದು ಆಸರೆ ಕಳೆದುಕೊಂಡಿತು. ಒಟ್ಟಿನಲ್ಲಿ ಆ ಅವಧಿಯಲ್ಲಿ

ಬಿಡಿ ಬರಹಗಳ ರೂಪದಲ್ಲಿ ಅಭ್ಯಾಸಯೋಗ್ಯ 'ವೈಜ್ಞಾನಿಕ'[2] ಅಧ್ಯಯನ ಕ್ರಮವೊಂದು ಕಾಣಿಸಿಕೊಳ್ಳಲೇ ಇಲ್ಲ.

೭. ಮೂವತ್ತರ ದಶಕದಲ್ಲಿ ಕರ್ನಾಟಕ ಜಾನಪದ ಅಧ್ಯಯನ ಹೊಸ ರಭಸ ಕಂಡಿತು. ಆದರೆ ಈ ದಶಕವೂ ಕೇವಲ ಉತ್ತಮ ತ್ರಿಪದಿ ಸಂಗ್ರಹಗಳನ್ನು ಬಿಟ್ಟರೆ ಕ್ರಮಬದ್ಧವಾದ ಸಾಮುಗ್ರಿ ಸಂಗ್ರಹಣೆ, ವಿಭಜನೆ ಮತ್ತು ವಿಶ್ಲೇಷಣೆಯ ಒಂದು ವಿದ್ವತ್ಪೂರ್ಣ ಅಧ್ಯಯನ ಕ್ರಮದ ಹೊಸ ಪರಂಪರೆಯನ್ನೇನೂ ಹುಟ್ಟು ಹಾಕಲಿಲ್ಲ. ಅಧ್ಯಯನಗಳು ಬಹುಮಟ್ಟಿಗೆ ಸಾಹಿತ್ಯಿಕ ದೃಷ್ಟಿಗಷ್ಟೇ ಸೀಮಿತವಾಗಿದ್ದವು. ಬರಹಗಳು ಬಹುಮಟ್ಟಿಗೆ ಒಂದು ಗೊತ್ತಾದ ವರ್ಗದ ಓದುಗರಿಗಷ್ಟೇ ಮೀಸಲಾಗಿದ್ದವು. ಹೆಚ್ಚು ಒತ್ತು ನೀಡಿದ್ದುದು ವಿಷಯನಿಷ್ಠ ಭಾವನಾತ್ಮಕ ವಸ್ತುವಿಗೇ ಹೊರತು ವಸ್ತುನಿಷ್ಠ ವ್ಯಾಖ್ಯಾನ ಮತ್ತು ತತ್ವಗಳಿಗಲ್ಲ. ಮಕ್ಕಳು, ಮಹಿಳೆ, ಕುಟುಂಬ–ಹೀಗೆ ಕೌಟುಂಬಿಕ ಜೀವನದ ಅಧ್ಯಯನವೇ ಎಲ್ಲೆಡೆಯೂ ನಡೆದಿತ್ತು. ಅಧ್ಯಯನ ಧೋರಣೆಗಳೂ ಬಹುಮಟ್ಟಿಗೆ ಸಮತೂಕದ ಭಾವೋದ್ರೇಕದ್ದಲ್ಲದ ಬರವಣಿಗೆಯಾಗುವುದಕ್ಕಿಂತ ಒಂದು ರೀತಿಯ ಮತೀಯ ದೃಷ್ಟಿಯದಾಗಿತ್ತು. ವೈಭವೀಕೃತ ಶೈಲಿ ಆಗಿನ ವಿಶೇಷ ಎನಿಸಿತು. ಈ ಮನೋಧರ್ಮ ದುರ್ದೈವವಶಾತ್, ನವೋದಯ ಕಾಲದಲ್ಲಿ ಹೆಚ್ಚು ಪ್ರಚುರಕ್ಕೆ ಬಂದಿತು.

೮. ಸ್ವಾತಂತ್ರ್ಯಪೂರ್ವ ಅವಧಿಯಲ್ಲಿ ಕರ್ನಾಟಕದಲ್ಲಿ ನಡೆದ ಜಾನಪದ ಸಂಗ್ರಹ ಕಾರ್ಯಕ್ಕೆ ಕೆಲವು ಮಿತಿಗಳಿವೆ. ಅದರಲ್ಲಿ (ಅ) ಮೊದಲನೆಯದು, ಜಾನಪದದ ಒಂದು ಪ್ರಮುಖ ಅಂಗವಾದ ಗೀತ ಸಾಹಿತ್ಯಕ್ಕೆ ಮಾತ್ರ ಆಗಿನ ಸಂಗ್ರಹಕರು ಗಮನ ಹರಿಸಿದ್ದು. (ಬ) ಎರಡನೆಯದು, ಸಾಹಿತ್ಯಿಕ ಮೌಲ್ಯವನ್ನು ಮಾತ್ರ ಲಕ್ಷಿಸಿ ತಮ್ಮ ಸಂಕಲನಗಳನ್ನು ಅಣಿಗೊಳಿಸಿದ್ದು. ಆ ತಲೆಮಾರಿನ ವಿದ್ವಾಂಸರುಗಳೆಲ್ಲ ಸಾಹಿತಿಗಳಾಗಿದ್ದುದೇ ಅದಕ್ಕೆ ಕಾರಣ.

೯. ವಾಸ್ತವವಾಗಿ, ಈ ಅವಧಿಯಲ್ಲಿ ನಡಿಕೇರಿಯಂಡ ಚಿಣ್ಣಪ್ಪ ಅರ್ಚಕ ಬಿ. ರಂಗಸ್ವಾಮಿ ಮತ್ತು ದೇವುಡು ಅವರ ಹೊರತಾಗಿ ಬೇರೆ ಯಾರೂ ಜಾನಪದದ ಉಳಿದ ಅಂಗಗಳತ್ತ ಗಮನ ಹರಿಸಲೇ ಇಲ್ಲ. ಇದಕ್ಕೆ ಕಾರಣ ಆಗ ಜಾನಪದವೆಂದರೆ

---

2. ಕ್ಷೇತ್ರಕಾರ್ಯ, ವಿಷಯ ವಿಂಗಡಣೆ ಮತ್ತು ವ್ಯಾಖ್ಯಾನಗಳಿಗೆ ಸಂಬಂಧಿಸದಂತೆ ಬಳಸಲಾಗುವ ಪರಿಭಾಷೆಯೇ 'ವೈಜ್ಞಾನಿಕ'. ಇದು ಒಂದು ಗೊತ್ತಾದ ಕಾಲಕ್ಕೆ ಮಾತ್ರ ಅನ್ವಯಿಸುವ ಅರ್ಥವ್ಯಾಪ್ತಿಯನ್ನು ಪಡೆದಿರುತ್ತದೆ. ವೈಜ್ಞಾನಿಕ ಬೆಳವಣಿಗೆ ನಿರಂತರವಾದುದು. ಒಂದು ಕಾಲಕ್ಕೆ ವೈಜ್ಞಾನಿಕ ಎನ್ನಿಸಿದ್ದು ಮುಂದಿನ ಪೀಳಿಗೆಗೆ ಅವೈಜ್ಞಾನಿಕ ಎನ್ನಿಸಬಹುದು.



ಜನಪದ ಸಾಹಿತ್ಯ. ಜನಪದ ಸಾಹಿತ್ಯವೆಂದರೆ ಕೇವಲ ಗೀತೆಗಳು ಎನ್ನುವ ಕಲ್ಪನೆ ಇದ್ದುದು. ಅಲ್ಲದೆ ಆಗಿನ ಸಂಗ್ರಹಕರಿಗೆ ಜನಪದ ಸಾಹಿತ್ಯದ ಇತರ ಮುಖಗಳ ಪರಿಚಯ ಇಲ್ಲದುದು ಮತ್ತೊಂದು ಕಾರಣ. ಗಾದೆ, ಒಗಟು, ಕತೆ ಮುಂತಾದವು ಜನಪದ ಗೀತೆಗಳಂತೆ ಜನಮನವನ್ನು ಆಕರ್ಷಿಸದಿದ್ದುದು ಮತ್ತು ಅವೆಲ್ಲವೂ ಒಂದೇ ಗುಂಪಿನ ಜನರಲ್ಲಿ ಒಟ್ಟಿಗೆ ಒಮ್ಮೆಗೇ ದೊರೆಯದಿದ್ದುದು.

೧೦. ಈ ಅವಧಿಯ ಸಂಗ್ರಹ ಅಧ್ಯಯನ ವೈಜ್ಞಾನಿಕ ದೃಷ್ಟಿಯಿಂದ ಕಳಪೆ ಎನಿಸಲು ಇನ್ನೂ ಕೆಲವು ಕಾರಣಗಳಿವೆ. (ಕ) ಗೀತೆಗಳ ಸಂಗ್ರಹದ ಸುಲಭ ಮಾರ್ಗವನ್ನು ಕಂಡುಕೊಂಡು ಅದರ ಮೂಲಭೂತ ಸತ್ವವನ್ನು ಗ್ರಹಿಸದೆ ಅದನ್ನೊಂದು ಹೆಸರು ಗಳಿಕೆಯ ಸಾಧನವನ್ನಾಗಿ ಮಾಡಿಕೊಂಡದ್ದು. (ಬ) ಕೇವಲ ಸಾಹಿತ್ಯಿಕ ಆಸಕ್ತಿಯಿಂದಷ್ಟೇ ಸಂಗ್ರಹಣೆ ನಡೆಸಿದ್ದು. ಹೀಗೆ ಜನಪದ ಸಾಹಿತ್ಯದ ಕ್ರಮಬದ್ಧ ಅಧ್ಯಯನಕ್ಕೆ ತೊಡಕುಂಟಾಯಿತು.

೧೧. ಒಟ್ಟಾರೆ ಈ ಅವಧಿಯಲ್ಲಿ ಜಾನಪದ ಧೋರಣೆಯ ವೈಜ್ಞಾನಿಕ ದೃಷ್ಟಿಯ ಕುರುಹು ಇಲ್ಲದಿದ್ದರೂ ಕನ್ನಡ ಜನಪದ ಗೀತ ಸಾಹಿತ್ಯಕ್ಕೆ ಸಮೃದ್ಧಿಯನ್ನು ತಂದುಕೊಟ್ಟ ಸಂಕಲನಗಳೆಂದು ಗುರುತಿಸಲಾಗಿರುವ ಗರತಿಯ ಹಾಡು, ಮಲ್ಲಿಗೆ ದಂಡೆ, ಜೀವನ ಸಂಗೀತ–ಸಂಗ್ರಹಗಳು ಆಧುನಿಕ ದೃಷ್ಟಿಯಿಂದ ನೋಡಿದರೆ ನಮ್ಮ ಸಂಗ್ರಹಕರ ದೃಷ್ಟಿಯನ್ನು ಕೆಡಿಸುವುದರಲ್ಲಿ ಸಾಕಷ್ಟು ಮಹತ್ವದ ಪಾತ್ರವನ್ನೇ ವಹಿಸಿವೆ. ಈ ಸಂಕಲನಗಳು ಬಹುಮಟ್ಟಿಗೆ ಆಯ್ಕೆಗಳು, ತೀವ್ರವಾದ ಭಾವ, ಹೊಚ್ಚ ಹೊಸ ಪ್ರತಿಮೆಗಳೇ ಇರುವ ರಚನೆಗಳನ್ನು ಆಯ್ದುಕೊಟ್ಟಿದ್ದು ಒಂದು ಕಡೆ ; ನವೋದಯದ ಕನಸುಗಾರಿಕೆ, ಆದರ್ಶ, ಆವೇಶಗಳ ಕಾಲದಲ್ಲಿ ಅವು ಪ್ರಕಟವಾದುದು–ಅವನ್ನು ಕುರಿತಂತೆ ಬೇಂದ್ರೆ, ಮಾಸ್ತಿ, ಬಿಎಂಶ್ರೀಗಳ ಪ್ರಶಂಸೆಯ ಮಾತುಗಳು ಇನ್ನೊಂದು ಕಡೆ–ಇವು ಜಾನಪದವೆಂದರೆ ಪದ್ಯ, ಹಾಡುಗಳ ಸಾಹಿತ್ಯ ಎಂಬ ಭಾವನೆಯನ್ನು ಹುಟ್ಟುಹಾಕಿದವು.

೧೨. ಹೀಗೆ ಮೊದಮೊದಲು ಪ್ರಕಟಗೊಂಡ ಸಂಕಲನಗಳು ಹಾಡುಗಳಾಗಿದ್ದು ಜಾನಪದವನ್ನು ಪದ್ಯ ಸ್ವರೂಪದ ಸಾಮುಗ್ರಿಗಷ್ಟೇ ಮಿತಿಗೊಳಿಸಲಾಯಿತು. ಎಲ್ಲವನ್ನೂ ಸಾಹಿತ್ಯದ ದೃಷ್ಟಿಯಿಂದಲೇ ನೋಡುವ ಸಂಕುಚಿತ ದೃಷ್ಟಿ ಇನ್ನೊಂದು ಕಡೆ–ಜಾನಪದ ಸಾಮುಗ್ರಿಯನ್ನು ನೋಡುವ ದೃಷ್ಟಿಯ 'ಅಸಾಹಿತ್ಯೀಕರಣ'ಕ್ಕೆ ಅವಕಾಶ ಮಾಡಿಕೊಡಲೇ ಇಲ್ಲ.

೧೩. ಈ ಅವಧಿಯಲ್ಲಿ ಸಂಕಲನ ಕಾರ್ಯವನ್ನೇ ಜೀವನದ ಧ್ಯೇಯವಾಗಿಸಿಕೊಂಡ ನಿಷ್ಠಾವಂತ ಕಾರ್ಯಕರ್ತರಿದ್ದರು. ಆದರೆ ಸಂಗ್ರಹ ಕಾರ್ಯ ನಡೆದಷ್ಟು ಅದರ ವ್ಯಾಖ್ಯಾನ ನಡೆಯಲಿಲ್ಲ. ಸಾಹಿತ್ಯವಲ್ಲದ ಗಾದೆ, ಒಗಟು ಒಡಪುಗಳನ್ನು

ಸಾಹಿತ್ಯವಾಗಿ ಮೆರೆಸುವ, ಅವುಗಳಲ್ಲಿ ಕಾವ್ಯಾಂಶಗಳನ್ನು ತಡಕಾಡುವ ವಿಫಲ ಯತ್ನಗಳೇ ಜಾನಪದ ಅಧ್ಯಯನವನ್ನು ಅವೈಜ್ಞಾನಿಕಗೊಳಿಸಿದವು.

೧೪. ಈ ಅವಧಿಯ ಸಂಗ್ರಹಕರಿಗೆಲ್ಲ ಹಾಡು ಮುಖ್ಯವಾಯಿತೇ ಹೊರತು ಹಾಡುವ ಪ್ರಕ್ರಿಯೆ ಮುಖ್ಯವಾಗಲಿಲ್ಲ. ಎಂದರೆ ಆ ಹಾಡುಗಳನ್ನು ಅವು ಹುಟ್ಟಿಕೊಂಡ ಸಂದರ್ಭದಿಂದ ಬೇರ್ಪಡಿಸಿ ನೋಡಿದರು. ಇದು ಜಾನಪದವನ್ನು ಅಖಂಡವಾಗಿ ಗ್ರಹಿಸುವ ರೀತಿಯಲ್ಲ. ಒಬ್ಬ ಕಲಾವಿದ ಹಾಡುತ್ತಿದ್ದಾನೆಂದರೆ ಅವನು ಅದೇ ವೇಳೆಯಲ್ಲಿ ಇನ್ನೊಂದು ಕೆಲಸ ನಿರ್ವಹಿಸುತ್ತಿದ್ದಾನೆಂದೇ ಅರ್ಥ :

(ಅ) ಹಾಡುತ್ತಾ ಹಾಡಿನ ಪರಂಪರೆಯನ್ನು ಉಳಿಸುವ ಕೆಲಸ ಮಾಡುತ್ತಿರುತ್ತಾನೆ.

(ಬ) ಅದೇ ಕಾಲಕ್ಕೆ ಹಿಂದೆ ಇರದ ಹೊಸ ಅಂಶಗಳನ್ನು ಸೃಷ್ಟಿಸುವ ಕೆಲಸ ಮಾಡುತ್ತಿರುತ್ತಾನೆ. ಇದನ್ನು ಸ್ವಾತಂತ್ರ್ಯಪೂರ್ವ ಅವಧಿಯ ಸಂಗ್ರಹಕರು ಮನಗಾಣಲೇ ಇಲ್ಲ.

೧೫. ಒಟ್ಟಿನಲ್ಲಿ ಈ ಅವಧಿಯಲ್ಲಿ ಹಾಡುಗಳನ್ನು ಸಂಗ್ರಹಿಸುವ ಅವಸರವೇ ಎದ್ದು ಕಾಣುತ್ತದೆ. ಕಾವ್ಯ ಜೀವನೋಪಯೋಗಿ ಕಲೆಯಾಗಿದ್ದ ಕಾಲದಲ್ಲಿ ಈ ಸಾಹಿತ್ಯ ಹುಟ್ಟಿಕೊಂಡಿತು.[3] ಅದು ಹುಟ್ಟಿಕೆದಳ್ಳಲು ಕಾರಣವಾದ 'ಜನಪದ' ಈಗ ಇಲ್ಲ. ಅದರ ನೆನಪು ಮಾತ್ರ ಮಸಕು ಮಸಕಾಗಿ ಉಳಿದಿದೆ. ಆದ್ದರಿಂದಲೇ ಅವುಗಳನ್ನು ಕೊನೆಯ ಪಕ್ಷ ಸಂಗ್ರಹಿಸುವ ಅವಸರ ಕಂಡು ಬಂದಿದೆ.

೧೬. ಒಟ್ಟಾರೆ ಕನ್ನಡದಲ್ಲಿ ಜನಪದ ಸಾಹಿತ್ಯ ಸಂಗ್ರಹಣೆ ಗೀತ ಸಾಹಿತ್ಯದಿಂದಲೇ ಎಂಬುದು ಸ್ಪಷ್ಟ. ಈ ಧೋರಣೆಗೆ ತಕ್ಕಂತೆ ಈ ಅವಧಿಯಲ್ಲಿ ಬಂದ ಬರಹಗಳೂ ಜನಪದ ಗೀತ ಸಾಹಿತ್ಯವನ್ನೇ ಕುರಿತಿವೆ. ಈ ಸೀಮಿತ ಧೋರಣೆಯನ್ನು ಗಮನಿಸಿದ ದೇವುಡು 'ಕರ್ಣಾಟಕ ಸಂಸ್ಕೃತಿ' ಎಂಬ ಗ್ರಂಥ ರಚಿಸಿ ಜಾನಪದ ವ್ಯಾಪ್ತಿಗೊಳಪಡುವ ಸಾಮಗ್ರಿಗಳ ಬಗೆಗೆ ಹಾಗೂ ಜನಪದ ಸಂಸ್ಕೃತಿಯ ಬಗೆಗೆ ವಿಶೇಷವಾಗಿ ವಿವೇಚಿಸಿದ್ದು ಕನ್ನಡ ಜಾನಪದ ಅಧ್ಯಯನದ ದೃಷ್ಟಿಯನ್ನು ಬದಲಿಸುವಲ್ಲಿ ಪ್ರಮುಖ ಪಾತ್ರವಹಿಸಿತು.

೧೭. ಈ ಅವಧಿಯ ಸಂಗ್ರಹಕರಲ್ಲಿ ಕೆಲವರು (ಉದಾ. ಬೆಟಗೇರಿ) ತಮ್ಮ ಪ್ರದೇಶದ ಆಡುಮಾತಿನ ಗತ್ತು ಗಮ್ಮತ್ತುಗಳನ್ನು ಯಥಾವತ್ತಾಗಿ ಉಳಿಸಿಕೊಳ್ಳದೆ ತಮ್ಮ ಶೈಲಿಗೆ ತಕ್ಕಂತೆ ರೂಪಾಂತರಿಸಿದ್ದಾರೆ. ಇದು ಜನಪದ ಸಾಹಿತ್ಯವನ್ನು ಅದರ ಮೂಲ ಸ್ವರೂಪದಲ್ಲಿ ದಾಖಲಿಸಬೇಕು ಎನ್ನುವ ತತ್ವಕ್ಕೆ ವಿರುದ್ಧವಾದುದು.

3. 'ಜನಪದ ಸಾಹಿತ್ಯವನ್ನು ಸೃಷ್ಟಿಸಿದವರ ಭಾವ ಪ್ರಪಂಚಕ್ಕೂ ನಮ್ಮದಕ್ಕೂ ವ್ಯತ್ಯಾಸ ವಿರುವುದರಿಂದ ಇವುಗಳಿಗೂ ನಮಗೂ ಅಂತರ ಇದ್ದೇ ಇರುತ್ತದೆ.'



೧೮. ಜನಪದ ಸಾಹಿತ್ಯದ ಅಧ್ಯಯನಕ್ಕೆ ಆವಶ್ಯಕವಾದ ಕ್ಷೇತ್ರಕಾರ್ಯ ವಿಧಾನಗಳ ಪರಿಚಯ ಈ ಅವಧಿಯ ವಿದ್ವಾಂಸರಿಗಿರಲಿಲ್ಲ. ಒಬ್ಬಿಬ್ಬರು ಮಾತ್ರ ಸ್ಥೂಲವಾಗಿ ಒಂದು ನಿರ್ದಿಷ್ಟ ಕ್ರಮ ಅನುಸರಿಸಿರುವುದು ಕಂಡುಬರುತ್ತದೆ (ಉದಾ. ಅರ್ಚಕ ರಂಗಸ್ವಾಮಿ ಮತ್ತು ಎಲ್. ಗುಂಡಪ್ಪ)

೧೯. ತಾಂತ್ರಿಕ ಸಾಮಗ್ರಿಗಳ ಬಳಕೆ ವೈಜ್ಞಾನಿಕ ಅಧ್ಯಯನಕ್ಕೆ ಸಹಕಾರಿ ಎಂಬುದು ತಿಳಿದ ವಿಷಯ. ಆದರೆ ಸ್ವಾತಂತ್ರ್ಯಪೂರ್ವ ಅವಧಿಯಲ್ಲಿ ಈ ತಾಂತ್ರಿಕ ಸಾಮಗ್ರಿಗಳ ಬಳಕೆಯಾಗಿರುವುದಕ್ಕೆ ಆಧಾರಗಳೇ ಇಲ್ಲ. ಧ್ವನಿಮುದ್ರಣ, ಛಾಯಾ ಚಿತ್ರೀಕರಣ, ವೀಡಿಯೋಕರಣ-ಇವುಗಳ ತಿಳಿವಳಿಕೆಯೇ ಇದ್ದಂತೆ ಕಾಣುವುದಿಲ್ಲ.

೨೦. ಒಟ್ಟಿನಲ್ಲಿ ಕ್ಷೇತ್ರಕಾರ್ಯಕ್ಕೆ ಸಂಬಂಧಿಸಿದಂತೆ ಈ ಅವಧಿಯ ಸಂಗ್ರಹಕರಿಗೆ ಪ್ರಾಥಮಿಕ ತಿಳಿವಳಿಕೆಯೂ ಇರಲಿಲ್ಲ ಎಂದು ತೋರುತ್ತದೆ. ಜಾನಪದದ ಯಾವುದೇ ಮೌಲ್ಯದ ಕಲ್ಪನೆಯಿಲ್ಲದೆ ಕ್ಷೇತ್ರಕಾರ್ಯದಲ್ಲಿ ತೊಡಗಿದ್ದ ಸಾಧಾರಣ ಸಂಗ್ರಹಕ ಕೆಲಸವೇ ಉದ್ದಕ್ಕೂ ಗೋಚರಿಸುತ್ತದೆ. ವಕ್ತೃವನ್ನು ಆಯ್ದುಕೊಳ್ಳುವಾಗ ಸಂಶೋಧನೆಯ ನೆಲೆಗಳನ್ನು ಗುರುತಿಸಿಕೊಳ್ಳುವಾಗ ಮಾಡಿಕೊಳ್ಳಬೇಕಾದ ಪೂರ್ವಸಿದ್ಧತೆಗಳ ಬಗೆಗೂ ಅವರಿಗೆ ಅರಿವಿರಲಿಲ್ಲ. ಬಹುಮಟ್ಟಿಗೆ ವಕ್ತೃ ವಿವರಗಳಿಲ್ಲದ ಸಂಕಲನಗಳೇ ಪ್ರಕಟಗೊಂಡಿರುವುದು ಅದಕ್ಕೆ ಆಧಾರ.

೨೧. ಹೀಗೆ ಜಾನಪದ ಕ್ಷೇತ್ರಕಾರ್ಯದ ಕಲ್ಪನೆಯೇ ಇಲ್ಲದ ಅನನುಭವಿ ಸಂಗ್ರಹಕರೇ ಈ ಸಾಹಿತ್ಯವನ್ನು ಸಂಕಲ್ಪಿಸಿರುವ ನಿದರ್ಶನಗಳು ಕಂಡುಬರುತ್ತವೆ. ಜಾನಪದದ ಸಾಮಾನ್ಯ ಪರಿಜ್ಞಾನವೂ ಇಲ್ಲದೆ ಸುಲಭವಾಗಿ ಲಭ್ಯವಾಗುವ ಸಾಮಗ್ರಿಯನ್ನು ಮನಬಂದಂತೆ ಸಂಕಲಿಸಿ ಪ್ರಕಟಿಸಿದ್ದೇ ಹೆಚ್ಚು. ಇಲ್ಲಿ ಜಾನಪದ ಕ್ಷೇತ್ರಕ್ಕೆ ಆಗುವುದಕ್ಕಿಂತ ಸಂಕಲನಕಾರರಿಗೇ ಹೆಚ್ಚು ಪ್ರಯೋಜನವಾಗಿದೆ. ಇಂಥ 'ಮಹಾನುಭಾವರ' ಕೈಯಲ್ಲಿ ಅಧ್ಯಯನ ಕಳೆಗುಂದಿತು. ಈ ಹಿನ್ನೆಲೆಯಲ್ಲಿ ಜಾನಪದ ಅಧ್ಯಯನಕ್ಕೆ ಸಂಬಂಧಿಸಿದಂತೆ ಕೆಲವು ಪ್ರವೃತ್ತಿಗಳನ್ನು ಗುರುತಿಸಬಹುದು.

(ಅ) ಜಾನಪದಕ್ಕೆ ತೀರ ಅಗತ್ಯವಾದ ಕ್ಷೇತ್ರಕಾರ್ಯಾನುಭವವಾಗಲಿ ಅಧ್ಯಯನದ ಹಿನ್ನೆಲೆಯಾಗಲಿ ಇಲ್ಲದೆ ಕೇವಲ ಭಾವುಕ ಉತ್ಸಾಹದಿಂದ ಕೆಲಸ ಮಾಡುವುದು.

(ಬ) ಸಂಗ್ರಹ ಸಂಪಾದನೆಗಳನ್ನು ಯಾರು ಬೇಕಾದರೂ ಹೇಗೆ ಬೇಕಾದರೂ ಮಾಡಬಹುದೆಂದು ತಿಳಿದಿರುವುದು.

(ಪ) ಸಂಘಟಿತ ಯೋಜನೆಯಂತೆ ಅಧ್ಯಯನ ನಡೆಸದೆ ಇದ್ದುದು.

೨೨. ಸ್ವಾತಂತ್ರ್ಯಪೂರ್ವ ಅವಧಿಯ ಅಧ್ಯಯನದ ಬಹುದೊಡ್ಡ ಲೋಪವೆಂದರೆ ಮಾಹಿತಿ ಶರೀರದ ಪೂರ್ಣ ಪ್ರಮಾಣದ ಬಳಕೆ ಆಗಿಲ್ಲದಿರುವುದು. ಇದು ವಿಶ್ಲೇಷಣಾಕಾರನ ಪ್ರಾಮಾಣಿಕತೆಗೆ ಸಂಬಂಧಿಸಿದ ವಿಚಾರವೂ ಹೌದು.

ಕ್ಷೇತ್ರದಲ್ಲಿ ಸಂಗ್ರಹಿಸಿದ ಬೃಹತ್ ಮಾಹಿತಿ ಶರೀರದ ಎಲ್ಲ ಅಂಶಗಳನ್ನು ವಿಶ್ಲೇಷಣೆಯಲ್ಲಿ ಬಳಸಿಕೊಂಡಾಗ ಮಾತ್ರ ಅದು ವೈಜ್ಞಾನಿಕವಾಗುತ್ತದೆ.

೨೩. ಈ ಅವಧಿಯ ಬಿಡಿ ಬರಹಗಳಲ್ಲಿ ಸರಳ ಸುಂದರ ವರ್ಣನಾತ್ಮಕ ನಿರೂಪಣೆಯೇ ವಿಜೃಂಭಿಸಿದೆ. ಜನಪದ ಜೀವನ ಮತ್ತು ಸಂಸ್ಕೃತಿ ಬಗೆಗೆ ಮೇರೆ ಮೀರಿದ ಉತ್ಸಾಹ ವ್ಯಕ್ತಗೊಂಡಿದೆ.

೨೪. ಈ ಸಂಕಲನಗಳಲ್ಲಿ ವಿವರಣೆ, ವಿವೇಚನೆ, ವಿಭಜನೆ ಮತ್ತು ಅಧ್ಯಯನ ದೃಷ್ಟಿಗಳು ಗೋಚರವಾಗುವುದು ಅತ್ಯಲ್ಪ. ಜಾನಪದ ಶಕೆಯೊಂದನ್ನು ಆರಂಭ ಮಾಡುತ್ತಿರುವ ಉತ್ಸಾಹ, ಹೆಮ್ಮೆ ಮಾತ್ರ ಗೋಚರವಾಗಿದೆ.

೨೫. ಸಂಗ್ರಹಕಾರ್ಯದೊಂದಿಗೆ ತೌಲನಿಕ ಅಧ್ಯಯನ, ವಿಶ್ಲೇಷಣೆ, ಸಂಪಾದನೆ ಮತ್ತು ವಿಶ್ಲೇಷಣೆ ನಡೆಯಲೇ ಇಲ್ಲ. ಅವು ಸಮಾಜದ ಹಾಗೂ ದೇಶದ ಆರೋಗ್ಯಕ್ಕೆ, ಐಕ್ಯಕ್ಕೆ, ಪ್ರಗತಿಗೆ ಎಷ್ಟರ ಮಟ್ಟಿಗೆ ಸಹಾಯಕ ಎನ್ನುವುದನ್ನು ಸ್ಪಷ್ಟಪಡಿಸಿಲ್ಲ.

೨೬. ಈ ಅವಧಿಯ ಸಂಗ್ರಹಕರು ಜಾನಪದವನ್ನು ಸಾಮಗ್ರಿ ರೂಪದಲ್ಲಷ್ಟೇ ಪರಿಭಾವಿಸುತ್ತಾರೆ. ಜಾನಪದ ಎಂದರೆ ಇವರಿಗೆ ಪಳೆಯುಳಿಕೆಯ ಸಂಗ್ರಹ, ಸಂಪಾದನೆ ಮತ್ತು ವರ್ಗೀಕರಣ ಎಂದೇ ಅರ್ಥ.

೨೭. ಈ ಅವಧಿಯ ಅಧ್ಯಯನದಲ್ಲಿ ಎದ್ದುಕಾಣುವ ನ್ಯೂನತೆ ಎಂದರೆ ಜಾನಪದವನ್ನು ವಿಸ್ಮಯ, ಪ್ರಶಂಸೆ, ಆರಾಧನಾ ಮನೋಭಾವಗಳಿಂದ ಸೌಂದರ್ಯಾತ್ಮಕ ದೃಷ್ಟಿಯಿಂದ ನೋಡುವುದು. ಹೆಚ್ಚು ಶ್ರಮ ವಹಿಸದೆ ಪ್ರಕಟಣೆಗಳನ್ನು ಹೊರತರುವುದು-ಜಾನಪದ ಸಂಗ್ರಹ ಅಧ್ಯಯನ ಶಿಸ್ತಾಗಿ ಬೆಳೆಯಲು ಅಡ್ಡಿಯಾದವು. ಸಾಹಿತ್ಯವನ್ನು ಕೇವಲ ಸಾಹಿತ್ಯವಾಗಿ, ಕಲೆಯಾಗಿ ಮಾತ್ರ ನೋಡಿದ್ದು ಕೂಡ ಸಮಂಜಸವಾಗಿ ಕಾಣುವುದಿಲ್ಲ.

೨೮. ಈ ಅವಧಿಯಲ್ಲಿ ನಡೆಸಿರುವ ಬಹುಪಾಲು ಅಧ್ಯಯನಗಳಲ್ಲಿ ಅಲ್ಲಲ್ಲಿ ವಿವರಣೆಗಳಿದ್ದರೂ ಸಾಮಾಜಿಕ ಅರಿವಿನ ಲೇಪದ ವಿಶ್ಲೇಷಣೆ ಎಲ್ಲಿಯೂ ಕಂಡು ಬರುವುದಿಲ್ಲ. ಕ್ಷೇತ್ರಕಾರ್ಯ ಮತ್ತು ವಿಷಯ ವಿಭಜನೆ ವೈಜ್ಞಾನಿಕವಾಗಿ ನಡೆದಾಗ ಮಾತ್ರ ವಿಶ್ಲೇಷಣೆಯೂ ವೈಜ್ಞಾನಿಕವಾಗಿ ನಡೆಯುವುದು ಸಾಧ್ಯ. ಸೈದ್ಧಾಂತಿಕ ಗ್ರಹಿಕೆಯೇ ಇಲ್ಲದೆ ವಿಶ್ಲೇಷಣೆ ವೈಜ್ಞಾನಿಕ ಆಗಲಾರದು.

೨೯. ವಿಶ್ಲೇಷಣಾಕಾರನಿಗೆ ತನ್ನ ಕಾಲದ ಅಧ್ಯಯನದ ವಿಧಿ ವಿಧಾನಗಳ, ಸಿದ್ಧಾಂತಗಳ ಅರಿವು ಅಗತ್ಯವಿದ್ದಂತೆ ಅವನ ಕಾಲದ ಸಮಾಜದ ಅಗತ್ಯಗಳ ಬಗ್ಗೆಯೂ ತಿಳಿವಳಿಕೆ ಇರಬೇಕಾಗುತ್ತದೆ. ಆಗ ಮಾತ್ರ ಅವನ ಅಧ್ಯಯನ



ಪ್ರಸ್ತುತವಾಗುತ್ತದೆ. ಮಾತ್ರವಲ್ಲ ಅವನ ವಿಶ್ಲೇಷಣೆಗೆ ಸಾಂಸ್ಕೃತಿಕ ಆಯಾಮವೂ ದೊರೆಯುತ್ತದೆ.

೩೦. ಈ ಅವಧಿಯಲ್ಲಿ ಸಂಗ್ರಹಕರು ಕಾವ್ಯದ ದೃಷ್ಟಿಯಿಂದಲೇ ಜಾನಪದವನ್ನು ಪರಿಗಣಿಸಿದ್ದರಿಂದ ವ್ಯಾಪಕವಾದ ಸಂಗ್ರಹಕಾರ್ಯ ನಡೆಯಲೇ ಇಲ್ಲ. ಸಾಹಿತ್ಯ ಕೃಷಿಯೇ ಪ್ರಧಾನವಾದುದರಿಂದ ಜಾನಪದದ ಆಳ ವಿಸ್ತಾರಗಳತ್ತ ಯಾರೂ ಗಮನ ಹರಿಸಲಿಲ್ಲ.

೩೧. ಒಟ್ಟಿನಲ್ಲಿ ಜಾನಪದ ಧೋರಣೆಯ ವೈಜ್ಞಾನಿಕ ದೃಷ್ಟಿಯ ಕೊರತೆಯೇ ಸ್ವಾತಂತ್ರ್ಯಪೂರ್ವ ಜಾನಪದ ಅಧ್ಯಯನದಲ್ಲಿ ಕಂಡುಬರುತ್ತದೆ. (ಅ) ಅತ್ಯಂತ ಕಡಿಮೆ ಸಂಖ್ಯೆಯ ಸಂಕಲನಗಳು ಹೊರ ಬಂದಿದ್ದರೂ ಅವುಗಳ ಸಂಗ್ರಹ ಸಂಪಾದನೆಯೂ ಕ್ರಮಬದ್ಧವಾಗಿಲ್ಲ. (ಕ) ಸಂಗ್ರಹಣೆಯಲ್ಲಿ ಹೆಚ್ಚು ವೈವಿಧ್ಯವಿಲ್ಲ. (ಚ) ಸಾಮಗ್ರಿಯ ವಿಶ್ಲೇಷಣೆಯಲ್ಲಿ ಆಧುನಿಕ ದೃಷ್ಟಿ ಧೋರಣೆಗಳಿಲ್ಲ. (ಟ) ಎಲ್ಲಕ್ಕಿಂತ ಮುಖ್ಯವಾಗಿ ವ್ಯಾಪಕವಾಗಿ ಕ್ಷೇತ್ರಕಾರ್ಯ ನಡೆಸಿಲ್ಲ. ಹೀಗಾಗಿ ಈ ಅವಧಿಯಲ್ಲಿ ಪ್ರಕಟಗೊಂಡಿರುವ ಜನಪದ ಸಾಹಿತ್ಯ ಅಸಮಗ್ರ ಎನಿಸಿದೆ. ಉತ್ತಮ ಸಂಗ್ರಹಗಳನ್ನು ಕೊಟ್ಟ ಸಂಗ್ರಹಕರೇ ಆ ಸಾಹಿತ್ಯದ ಅಧ್ಯಯನಕ್ಕೆ ಅಗತ್ಯವಾದ ಪೂರಕ ಮಾಹಿತಿಯನ್ನು ದೊರಕಿಸಿಕೊಟ್ಟಿಲ್ಲ. ಒಟ್ಟಾರೆ ಜನಪದ ಸಾಹಿತ್ಯವನ್ನು ಜಾನಪದದ ಸಮಗ್ರ ಧೋರಣೆಯಲ್ಲಿ ಕಾಣದ ಮನೋಭಾವವೇ ಸ್ವಾತಂತ್ರ್ಯಪೂರ್ವ ಅವಧಿಯ ಸಂಗ್ರಹಕರಲ್ಲಿ ಎದ್ದು ಕಾಣುತ್ತದೆ.

**ಪರಾಮರ್ಶನ ಗ್ರಂಥಗಳು**

ಅರ್ಚಕ ಬಿ. ರಂಗಸ್ವಾಮಿ, 1971, ಹುಟ್ಟಿದಹಳ್ಳಿ, ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ. ಮೈಸೂರು - ೬

ಚಂದ್ರಶೇಖರ ಕಂಬಾರ, 1980, ನಮ್ಮ ಜಾನಪದ, ಅಭಿಜಾತ ಗ್ರಂಥ ಮಾಲೆ, ಬೆಂಗಳೂರು

ಚಿದಾನಂದಮೂರ್ತಿ ಎಂ. 1984, ಪಗರಣ ಮತ್ತು ಸಂಪ್ರಬಂಧಗಳು, ಪುಸ್ತಕ ಚಿಲುಮೆ, ಮೈಸೂರು – ೨೧

ಜವರೇಗೌಡ ದೇ., 1977, ಜಾನಪದ ಸೌಂದರ್ಯ. ಸಹ್ಯಾದ್ರಿ ಪ್ರಕಾಶನ, ಮೈಸೂರು - ೧೨

ತಪಸ್ವೀಕುಮಾರ್ ನಂ., 1981, ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ, ಕ ಸಾ ಪ, ಬೆಂಗಳೂರು - ೧೮

ನಾವಡ ಎ. ವಿ., 1993, ಜಾನಪದ ಸಮಾಲೋಚನ, ಕ ಜಾ ಮತ್ತು ಯ ಅ, ಬೆಂಗಳೂರು - ೨

ಪರಮಶಿವಯ್ಯ ಜೀ ಶಂ. ವಿಲಿಯಂ ಎಂ. ಮಾಡ್ತ (ಸಂ) 1989, ಕರ್ನಾಟಕ ಜಾನಪದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು - ೨

ಪುರುಷೋತ್ತಮ ಬಿಳಿಮಲೆ, 1992, ಜಾನಪದ : ವೈಜ್ಞಾನಿಕ ವಿಶ್ಲೇಷಣೆ- ಜಾನಪದ ಗಂಗೋತ್ರಿ, ಸಂ. ೫, ಸಂ. ೨, ಕ ಜಾ ಯ ಅ, ಬೆಂಗಳೂರು

ಲಕ್ಕಪ್ಪಗೌಡ ಎಚ್. ಜೆ., ಬಸವರಾಜ್ ನೆಲ್ಲಿಸರ (ಸಂ) 1993 ಚೈತ್ರಶ್ರೀ ೯೩, ಮಲ್ಲಿಗೆ ಮೊಗ್ಗು ಸುರಿದಾವೆ ಚಿಕ್ಕಮಗಳೂರು ಜಿಲ್ಲೆ ಸ್ಮರಣ ಸಂಪುಟ, ತರೀಕೆರೆ

ವೀರಣ್ಣದಂಡೆ, 1993, ಕನ್ನಡ ಜಾನಪದ ಪ್ರಜ್ಞೆ, ಕವಿಮಾರ್ಗ ಪ್ರಕಾಶನ, ಕಲಬುರ್ಗಿ - ೫೮೫೧೦೬

ಸೋಮಶೇಖರ ಇಮ್ರಾಪುರ, 1979, ನಮ್ಮ ಜಾನಪದ ಸಮೀಕ್ಷೆ, ಚೇತನಾ ಪ್ರಕಾಶನ, ಧಾರವಾಡ

ಶಂಕರನಾರಾಯಣ ತೀ. ನಂ. (ಸಂ) 1985, ದ್ರಾವಿಡ ಜಾನಪದ, ಕನ್ನಡ ವಿಭಾಗ, ಮೈ.ವಿ.ವಿ. ಸ್ನಾತಕೋತ್ತರ ಕೇಂದ್ರ, ಬಿ. ಆರ್. ಪ್ರಾಜೆಕ್ಟ್

ಹಿರಿಯಣ್ಣ ಅಂಬಳಿಕೆ, 1987, ಜಾನಪದ ವೀಕ್ಷಣೆ, ಪ್ರಜ್ವಲ ಪ್ರಕಾಶನ, ಮೈಸೂರು - ೨೩

1988, ಕರ್ನಾಡಕ ಜಾನಪದ ಸಂಶೋಧನೆ : ಮುಂದೇನು ?

ಮಾನವಿಕ ಕರ್ನಾಟಕ, ಸಂ. ೧೮, ಸಂ. ೨, ೩ (ಸಂಯುಕ್ತ) ಮೈ.ವಿ.ವಿ.


# ಹಲಸಂಗಿ ಗೆಳೆಯರು ಮತ್ತು 30ರ ದಶಕದ ಜಾನಪದ ಚಟುವಟಿಕೆಗಳು - ಒಂದು ಟಿಪ್ಪಣಿ

○ ಡಾ|| ದೇವೇಂದ್ರಕುಮಾರ ಹಕಾರಿ

ಕನ್ನಡ ಜಾನಪದ ಅಧ್ಯಯನ ಕ್ಷೇತ್ರದ ದೃಷ್ಟಿಯಿಂದ 'ಹಲಸಂಗಿ ಗೆಳೆಯರ ಗುಂಪು' ಒಂದು ಮಾಂತ್ರಿಕ ಆಶಯವಿದ್ದ ಹಾಗೆ.

ಜನಪದ ಕಥೆಯ ಒಂದು ಮಾಂತ್ರಿಕ ಆಶಯದಲ್ಲಿ ವಿವಿಧ ಪರಿಸರ ಸಂದರ್ಭ ಪಾತ್ರ ಕ್ರಿಯೆಗಳು ಸುರುಳಿ ಸುರುಳಿಯಾಗಿ ಬಿಚ್ಚಿಕೊಂಡು ಬೆರಗುಗೊಳಿಸುವ ಹಾಗೆ 'ಹಲಸಂಗಿ ಗೆಳೆಯರ ಗುಂಪು' ಕುರಿತ ವಿವರಗಳನ್ನು ಗಮನಿಸಿದಾಗ ವಿವಿಧ ಸ್ಥಳ, ಜನಪದ ಕಲಾವಿದರು, ಚಮತ್ಕಾರದ ಘಟನೆಗಳು ವಿಸ್ಮಯಕಾರಿ ಸಂಗತಿಗಳು ಒಂದೊಂದಾಗಿ ಅನಾವರಣಗೊಳ್ಳುತ್ತವೆ. ಅಂದು ಹಲಸಂಗಿ ಗೆಳೆಯರ ಗುಂಪು ಮಾಡಿದ ಕಾರ್ಯದ ಸ್ವರೂಪ, ವೈವಿಧ್ಯ, ಒಂದು ಕ್ಷಣ ನಮ್ಮನ್ನು ಚಕಿತ ಗೊಳಿಸುತ್ತವೆ.

1920-1930ರ ದಶಕದಲ್ಲಿ ಬಿಜಾಪುರ ಜಿಲ್ಲೆಯ ಹಲಸಂಗಿಯನ್ನು ಕೇಂದ್ರವಾಗಿಟ್ಟುಕೊಂಡು ಕಾರ್ಯಪ್ರವೃತ್ತವಾದ ಈ ಗುಂಪಿನ ವಿವಿಧ ಚಟುವಟಿಕೆ ಕುರಿತು ಆಗಾಗ ಅಲ್ಲಲ್ಲಿ ಆನುಷಂಗಿಕ ಉಲ್ಲೇಖ ಬಂದಿರುವುದಾದರೂ, ಇತ್ತೀಚೆಗೆ ಸಾಹಿತ್ಯ ಸಂಸ್ಕೃತಿಗಳ ಬೇರೆ ಬೇರೆ ವಲಯಗಳಲ್ಲಿ, ಹಲಸಂಗಿ ಗೆಳೆಯರ ಗುಂಪಿನ ಸಾಧನೆಯ ಬಗೆಗೆ ಗಂಭೀರ ಚರ್ಚೆಯಾಗುತ್ತಿದೆ. ಸಂಶೋಧನೆ ನಡೆದಿದೆ ; ನಡೆಯುತ್ತಲಿದೆ. 1976ರಲ್ಲಿ ಈ ಗುಂಪಿನ ಮುಖ್ಯ ಚೇತನ ದಿ|| ಮಧುರಚೆನ್ನರ ಜೀವನ ಹಾಗೂ ಕೃತಿಗಳ ಸಮೀಕ್ಷೆ ಎನ್ನುವ ಪಿಎಚ್.ಡಿ. ಮಹಾಪ್ರಬಂಧ ಪ್ರಕಟ ವಾಯಿತು. ಡಾ|| ಗುರುಲಿಂಗ ಕಾಪಸೆ ತಮ್ಮ ಈ ಮಹಾಪ್ರಬಂಧದಲ್ಲಿ 'ಹಲಸಂಗಿ ಗೆಳೆಯರ ಗುಂಪು ಹಾಗೂ ಅದರ ವ್ಯಾಪ್ತಿ' ಎನ್ನುವ ಒಂದು ಪ್ರತ್ಯೇಕ ಅಧ್ಯಾಯವನ್ನೇ ಬರೆದಿದ್ದಾರೆ. ಅದರಲ್ಲಿ ಈ ಗುಂಪಿನ ವ್ಯಕ್ತಿಗಳು, ಅದು ಕೈಕೊಂಡ ಕಾರ್ಯಸ್ವರೂಪ, ವ್ಯಾಪ್ತಿ, ಬೇರೆ ಬೇರೆ ಸಾಹಿತ್ಯ ಸಂಸ್ಕೃತಿಗಳ ಆಸಕ್ತಿಯಿಂದಾಗಿ ಹಲಸಂಗಿಯ ಗುಂಪಿನ ಜೊತೆ ಸಂಪರ್ಕ ಪಡೆದ ಕನ್ನಡ ನಾಡಿನ ವಿವಿಧ ಪ್ರದೇಶದ ಗಣ್ಯ ಕವಿ ವಿಚಾರವಾದಿ ಪ್ರತಿಭಾನ್ವಿತ ವ್ಯಕ್ತಿಗಳು ಇತ್ಯಾದಿ ಸಂಗತಿಗಳ ವಿವರಣೆ ಹಿರಿಮೆಗಳನ್ನು ವಿವೇಚಿಸಲಾಗಿದೆ. ಈ ಮಹಾಪ್ರಬಂಧದ ಕೊನೆಯಲ್ಲಿ ಮಧರಚೆನ್ನರ ಅಪ್ರಕಟಿತ ಬರಹಗಳ ಒಂದು ವಿಸ್ತೃತವಾದ ಪಟ್ಟಿಯನ್ನೇ ಕೊಡಲಾಗಿದೆ. ಆ

ಪಟ್ಟಿಯ ವಿಷಯ ವೈವಿಧ್ಯಗಳನ್ನು ಗಮನಿಸಿದವರಿಗೆ ಈ ಬರಹಗಳು ಎಂದಾದರೂ ಪ್ರಕಟವಾಗಬಹುದೇ ? ಎನ್ನುವ ಕುತೂಹಲ ಉಂಟಾಗಿತ್ತು. ಕನ್ನಡ ವಿಶ್ವ ವಿದ್ಯಾಲಯ ತೀರ ಇತ್ತೀಚೆಗೆ 1993ರಲ್ಲಿ 'ಮಧುರಚೆನ್ನರ ಲೇಖನಗಳು' ಎನ್ನುವ ಹೊತ್ತಿಗೆ ಪ್ರಕಟಿಸಿ ಕನ್ನಡ ಅಭ್ಯಾಸಿಗಳಿಗೆ ಮಹದುಪಕಾರ ಮಾಡಿದೆ. ಅದರ ಸಂಪಾದಕ ಡಾ. ಗುರುಲಿಂಗ ಕಾಪಸೆ, ಸಂಶೋಧನೆ, ಭಾಷಾಶಾಸ್ತ್ರ, ಜನಪದ ಸಾಹಿತ್ಯ ಮುಂತಾದ ಹತ್ತು ಭಾಗಗಳನ್ನು ರೂಪಿಸಿ ಸುಮಾರು 600 ಪುಟದ ಮಧುರಚೆನ್ನರ ಸಂಪ್ರಬಂಧಗಳ ಒಂದು ಕೈಗನ್ನಡಿ ಕೊಟ್ಟಿದ್ದಾರೆ. ಇದರಿಂದಾಗಿ, ಹಲಸಂಗಿ ಗೆಳೆಯರ ಗುಂಪು, ವಿಶೇಷತಃ ಮಧುರಚೆನ್ನರ ಸಾಹಿತ್ಯಿಕ ಅಧ್ಯಯನದ ಹರಹು, ಕಾವ್ಯಪ್ರತಿಭೆಯ ಆಳದಲ್ಲಿ ಪ್ರವಹಿಸುತ್ತಿದ್ದ ಆಧ್ಯಾತ್ಮಿಕ ಭವ್ಯತೆ ಮತ್ತು ನಾನು ನುಡಿ ರಾಷ್ಟ್ರೀಯತೆ ಮುಂತಾದ ಅವರ ಸಾಂಸ್ಕೃತಿಕ ಕಾಳಜಿಗಳ ಮೇಲೆ ಹೊಸ ಬೆಳಕು ಮೂಡಿದೆ ; ವಿಶೇಷ ಅಧ್ಯಯನದ ಹೆಬ್ಬಾಗಿಲು ತೆರೆದಿದೆ.

ಆ) ಹಲಸಂಗಿ ಗೆಳೆಯರ ಗುಂಪು ಮತ್ತು 30ರ ದಶಕದ ಜಾನಪದ ಚಟುವಟಿಕೆ ಕುರಿತಂತೆ ಆಲೋಚನೆ ಮಾಡುವಾಗ ನಮಗೆ ಹೆಚ್ಚು ಪ್ರಸ್ತುತವಾಗುವ ಅಂಶಗಳು ಎರಡು ನಿಟ್ಟಿನಿಂದ ಲಭ್ಯವಾಗುತ್ತವೆ. ಒಂದು : 'ಹಲಸಂಗಿ ಗೆಳೆಯರ ಗುಂಪಿನ' ಗೆಳೆಯರಲ್ಲಿ ಹೆಚ್ಚಿನವರು ಮಾಡಿದ ಕಾರ್ಯ ಜಾನಪದಕ್ಕೆ ಸಂಬಂಧಿಸಿದ್ದು ; ಎರಡು : ಅಲ್ಲಿ ಇಲ್ಲಿ ಕೇವಲ ಉಲ್ಲೇಖಗಳಲ್ಲಿ ಮಾತ್ರ ಲಭ್ಯವಿದ್ದ ಮಧುರಚೆನ್ನರ ಸಮಕಾಲೀನ ಜನಪದ ಚಟುವಟಿಕೆ ಜನಪದ ಸಾಹಿತ್ಯ, ಜನಪದ ಕಲಾವಿದರನ್ನು ಕುರಿತು ಮೂರು ಮಹತ್ವದ ಲೇಖನಗಳು, ಈಗ ಮಧುರಚೆನ್ನರ ಲೇಖನ ಸಂಪುಟದ ಮೂಲಕ ಒಂದೆಡೆಗೆ ದೊರೆಯುವುದು. ಹಾಗೆ ನೋಡಿದರೆ ಹಲಸಂಗಿ ಗೆಳೆಯರ ಗುಂಪಿನ ಧ್ಯೇಯ ಬಹುಮುಖವಾದುದು. ಸಾಹಿತ್ಯಾಸಕ್ತಿ, ಬೆಳವಣಿಗೆ, ಸಾಹಿತ್ಯಾಧ್ಯಯನ–ರಾಷ್ಟ್ರೀಯತೆ, ಆಧ್ಯಾತ್ಮ, ಜನಪದ ಸಾಹಿತ್ಯ ಸಂಗ್ರಹ, ಜನಪದ ಕಲಾವಿದರ ಹಿರಿಮೆ–ಸೋವು, ಕನ್ನಡ ಜನಸಂಘಟನೆ, ಜನಜಾಗೃತಿ, ಗ್ರಾಮೀಣ ಪರಿಸರ ಮೊದಲುಗೊಂಡು, ಕರ್ನಾಟಕದ ಕವಿ ವಿಚಾರವಾದಿ ಮೀಮಾಂಸಕರ ನಿಕಟ ಪರಿಚಯ ಸ್ನೇಹ ಇವೆಲ್ಲವುಗಳ ಫಲಸ್ವರೂಪವಾಗಿ ಒಟ್ಟು ಸಂಸ್ಕೃತಿಯ ಪುನರುಜ್ಜೀವನ. ಈ ಬಗೆಯ ಚಟುವಟಿಕೆಗಳು ಹಲಸಂಗಿಯಲ್ಲಿ ಗೆಳೆಯರ ಗುಂಪಿನ ಮೂಲಕ ನಡೆದುದನ್ನು, ಕೇಳಿ ತಿಳಿದು, ಅಲ್ಲಿಗೇ ಹೋಗಿ, ಗುಂಪಿನ ಗೆಳೆಯರ ಮಧುರ ಸ್ನೇಹ ಸಹವಾಸಗಳಲ್ಲಿ ಕೆಲವು ದಿನ ಕಳೆದು, ತಮ್ಮ ಸೃಜನಶೀಲತೆಗೆ, ತಮ್ಮ ಕತೆ, ಕವಿತೆ ಕಾದಂಬರಿಗಳಿಗೆ ಸ್ಫೂರ್ತಿ ಪಡೆದವರು, ಒಂದಲ್ಲ ಒಂದು ಬಗೆ ಅವರ ಜೊತೆ ಸಂಪರ್ಕ ಹೊಂದಿದವರು ಅನೇಕರು. ಶಿವರಾಮ ಕಾರಂತ, ಮಿರ್ಜಿ ಅಣ್ಣಾರಾಯ, ಬೇಂದ್ರೆ, ಮುಗಳಿ, ಹಳಕಟ್ಟಿ, ನಂದೀಮಠ, ಶಂಬಾ ಜೋಶಿ, ಪ್ರಹ್ಲಾದ ನರೇಗಲ್ಲ, ಜಿ.ಬಿ. ಜೋಶಿ, ವಿನೀತ ರಾಮಚಂದ್ರರಾಯ, ಗೋಕಾಕ, ಮಾಳವಾಡ ದಂಪತಿಗಳು, ಗಿಡ್ನವರ, ದೊಡ್ಡಮೇಟಿ, ತಲ್ಲೂರು ರಾಯನಗೌಡ,



ಕಣವಿ ಮುಂತಾದ ಇನ್ನೂ ಅನೇಕರು. ಈ ವಿಷಯ ಕುರಿತ ಡಾ. ಕಾಪಸೆ ಹೇಳುವ ಮಾತು ತುಂಬ ಸಾಂಕೇತಿಕವಾಗಿದೆ : "ಅದನ್ನು ನಿಲುಕಿಸಲು ಹತ್ತಿರ ಹತ್ತಿರ ಹೋದಂತೆ ಕ್ಷಿತಿಜದಂತೆ ಅದು ವಿಸ್ತಾರವಾಗುತ್ತ ಹೋಗುತ್ತದೆ. ಹಲಸಂಗಿ, ಅದರ ಸುತ್ತಮುತ್ತಲಿನ ಹಳ್ಳಿ ಪಟ್ಟಣ, ಧಾರವಾಡ ಅದರ ಅಗಲಕ್ಕೆ ಹಚ್ಚಿದ ಪ್ರದೇಶ, ಪಾಂಡಿಚೇರಿ, ಅದರ ಬಿಂದುವಿನಿಂದ ಹೊರಟ ತ್ರಿಜ್ಯಗಳು....ಒಂದರಿಂದ ಒಂದು ಬೆಳೆಯುತ್ತಲೇ ಹೋಗುತ್ತವೆ. (ಮಧುರಚೆನ್ನರ ಜೀವನ ಹಾಗೂ ಕೃತಿಗಳ ಸಮೀಕ್ಷೆ, ಪು. 163) ಗೋಕಾಕರಂಥವರು ಹಲಸಂಗಿಯನ್ನು ಕೇಂದ್ರವನ್ನಾಗಿಟ್ಟು ಕೊಂಡು ಅಲ್ಲಿ ನಡೆಯುತ್ತಿದ್ದ ಸಾಂಸ್ಕೃತಿಕ ಚಟುವಟಿಕೆಗಳನ್ನು ಗಮನಿಸಿ, ಹಲಸಂಗಿಯನ್ನು 'ಉತ್ತರ ಕರ್ನಾಟಕದ ಅಗಸಿ' ಎಂದು ಕರೆದರು. ಪುತ್ತೂರಿನ ದೂರದಿಂದಲೂ ಅಂದು, ಕಾರಂತ ಮುಂತಾದವರು ಈ 'ಅಗಸಿ' ಒಳಗೆ ಬಂದು ಹೋದ ದಾಖಲೆ ಗಮನಿಸಿದರೆ ಹಲಸಂಗಿ ಮತ್ತು ಹಲಸಂಗಿ ಗೆಳೆಯರ ಗುಂಪಿನ ಕಾರ್ಯ ಕರ್ನಾಟಕದ ಒಳಗಡಿಗಳನ್ನು ದಾಟುತ್ತ, ಎಲ್ಲ ಕಡೆಗೂ ತನ್ನ ಸ್ನೇಹದ ದಾಂಗುಡಿ ಹರಡಿತ್ತು ಎನ್ನುವುದು ಸೂಚ್ಯವಾಗುತ್ತದೆ. ಈ ಟಿಪ್ಪಣಿ, ಹಲಸಂಗಿ ಗೆಳೆಯರ ಬಹುಮುಖದ ಚಟುವಟಿಕೆಗಳಲ್ಲಿ ಒಂದಾದ ಮತ್ತು ಈ ಗೆಳೆಯರ ಪ್ರಮುಖ ಹವ್ಯಾಸಕ್ಕೆ ಪ್ರೇರಕವಾದ ಜಾನಪದಕ್ಕೆ ಮಾತ್ರ ಸೀಮಿತವಾಗಿದೆ.

ಇ) ಹಲಸಂಗಿ ಗೆಳೆಯರು ಮಾಡಿದ ಜಾನಪದ ಕಾರ್ಯವಿವರ ತಿಳಿಯುವ ಮೊದಲು 1930ರ ಆಚೆ ಈಚೆಗಿನ ಕಾಲಾವಧಿಯಲ್ಲಿ ನಡೆದ ವಿವಿಧ ಭಾಗಗಳ ಜಾನಪದ ಚಟುವಟಿಕೆಗಳನ್ನು ಅರಿತುಕೊಳ್ಳುವುದು ಹೆಚ್ಚು ಸೂಕ್ತ. ಆಗ ಹಲಸಂಗಿ ಗೆಳೆಯರ ಗುಂಪು ಮಾಡಿದ ಜಾನಪದ ಗೆಯ್ಮೆಯ ವೈಶಿಷ್ಟ್ಯ ಗುರುತಿಸಲು ಸಾಧ್ಯವಾಗುತ್ತದೆ.

19ನೆಯ ಶತಮಾನದಲ್ಲಿ ಕನ್ನಡ ಜಾನಪದ ವಿವಿಧ ಪ್ರಕಾರದ ಸಾಹಿತ್ಯ ಸಂಗ್ರಹ ಪ್ರಕಟನೆಯ ಕಾರ್ಯ ಒಂದು ನಿರ್ದಿಷ್ಟ ರೂಪ ತಾಳುವುದಕ್ಕೆ ಪೂರಕ ವಾಗಿರುವ ಈಗಾಗಲೇ ದಾಖಲಿತವಾಗಿರುವ ಕೆಲವು ಸಂಗತಿಗಳನ್ನು ಗಮನಿಸುವುದು ಕೂಡ ಅಗತ್ಯ. 1803ರಲ್ಲಿ ಜಾನ್‌ಲೇಡನ್ ಪ್ರಕಟಿಸಿದ ಶ್ರೀರಂಗಪಟ್ಟಣದ ಕೆಡುಗಾಲ ಕುರಿತ ಲಾವಣಿ, ಅಬ್ಬಿದುಬಾಯ್ (1816 ಹಿಂದು ಮ್ಯಾನರ್ಸ್, ಕಸ್ಟಮ್ಸ್ ಮತ್ತು ಸೆರೆಮೊನೀಜ್) ಪ್ರಸ್ತಾಪಿಸಿದ ಕನ್ನಡ ಜನಪದ ಗಾದೆ, ಕಥೆ ಮತ್ತು ನಂಬಿಕೆಗಳು, 1859ರಲ್ಲಿ ಮೋಗ್ಲಿಂಗ್ ಹೊರತಂದ ಕನ್ನಡ ಗಾದೆಗಳ ಪ್ರಥಮ ಸಂಗ್ರಹ (ಕರ್ನಾಟಕ ಜಾನಪದ, ಪು. 65, ಅಂಬಳಿಕೆ 1989), ಮುಂತಾದ ಚದುರಿದ ಚಟುವಟಿಕೆಗಳು ಪಾಶ್ಚಾತ್ಯರ ವಿಶಿಷ್ಟ ಆಸಕ್ತಿಗೆ ಉದಾಹರಣೆ. ಈ ಶತಮಾನದ ಕೊನೆಕೊನೆಗೆ ಜಾನಪದ ಸಂಗ್ರಹ ಕಾರ್ಯಕ್ಕೆ ಒಂದು ನೆಲೆ ದೊರೆತಂತೆ ತೋರುತ್ತದೆ.

ಇಂಡಿಯನ್ ಅಂಟಿಕ್ವೆರಿ ಪತ್ರಿಕೆಯಲ್ಲಿ ಜಾನ್ ಫ್ಲೀಟ್ (ಸಂ. 14, ಪು. 265–1885) ಸಂಗ್ರಹಿಸಿ ಪ್ರಕಟಿಸಿದ ಐದು ಲಾವಣಿಗಳು, 1894ರಲ್ಲಿ ರೆ. ಕಿಟ್ಟೆಲ್ ಕನ್ನಡ ಕೋಶದಲ್ಲಿ ಸೇರ್ಪಡೆಯಾದ ಸು. 4, 260 ಗಾದೆಗಳು, ಒಂದು ಅರ್ಥದಲ್ಲಿ ಜಾನಪದ ಅಧ್ಯಯನಕ್ಕೆ ಪ್ರೇರಕವಾದುವು. ಕನ್ನಡೇತರರಿಗೆ ಕನ್ನಡ ಜಾನಪದವನ್ನು ಪರಿಚಯಿಸುವ ಮತ್ತು ಕನ್ನಡದ ಲಿಖಿತ ಪರಂಪರೆಯ ಶಿಷ್ಟಪದ ಸಾಹಿತಿಗಳ ಮತ್ತು ಇತರ ಸಾಹಿತ್ಯಾಸಕ್ತ ಕನ್ನಡಿಗರಿಗೆ ತಮ್ಮದೇ ಆದ ಮೌಖಿಕ ಪರಂಪರೆಯಲ್ಲಿ ಜೀವಂತವಾಗಿದ್ದ ಜನಪದ ಸಾಹಿತ್ಯದ ಗುಣ ಲಕ್ಷಣಗಳನ್ನು ತೆರೆದು ತೋರಿಸುವಲ್ಲಿ ಈ ದಶಕ (1885–1895) ಸಫಲವಾಯಿತು. ಫ್ಲೀಟ್ ತಮ್ಮ ಲಾವಣಿ ಸಂಗ್ರಹ ಕಾರ್ಯದಲ್ಲಿ ಅನುಸರಿಸಿದ ವಿಧಾನ—ಲಾವಣಿ ಹಾಡುವ ಕ್ರಮ, ವಸ್ತು ಕುರಿತ ಟಿಪ್ಪಣಿಗಳು— ಜನಪದ ಸಾಹಿತ್ಯ ಸಂಗ್ರಹ ಕಾರ್ಯವನ್ನು ಕೈಗೆತ್ತಿಕೊಂಡ ಅನೇಕರಿಗೆ ಮಾರ್ಗದರ್ಶಿಯಾದುವು ; ಅಧ್ಯಯನ ಮಾಡುವವರಿಗೆ ದಿಕ್‌ಸೂಚಿಯಾದುವು. ಆದರೆ ಈ ಕಾರ್ಯಕ್ಕೆ ವಿಶೇಷ ಪ್ರೇರಣೆ ಕಾಣಿಕೆ ಸಲ್ಲಿಸಿದವರು ನವೋದಯ ಕಾಲದ ಮಹತ್ವದ ಕವಿ ಲೇಖಕರು. ಜನಪದ ಹಾಡುಗಳ ನಾದ, ಲಯ, ಛಂದಸ್ಸುಗಳಿಗೆ ಮಾರುಹೋದ ಕೆಲವರಂತೂ ತಮ್ಮ ರಚನೆಗಳಿಗಾಗಿ ಇವುಗಳನ್ನು ಧಾರಾಳವಾಗಿ ಬಳಸಿಕೊಂಡರು ; ಹೊಸ ಸ್ಫೂರ್ತಿ ಪಡೆದರು. ಅದೇ ಒಂದು ಪ್ರತ್ಯೇಕ ವಿಷಯವಾದುದರಿಂದ ಅದನ್ನು ಇಲ್ಲಿ ಪ್ರಸ್ತಾಪಿಸುವ ಗೋಜಿಗೆ ಹೋಗಿಲ್ಲ. ಆದರೆ ಜನಪದ ಸಾಹಿತ್ಯ ಸಂಗ್ರಹ—ವಿವೇಚನೆ ಅಧ್ಯಯನಗಳಿಗೂ ಕನ್ನಡ ನವೋದಯ ಸಾಹಿತ್ಯದ ಪ್ರತಿಭಾವಂತರಿಗೂ ಕೂಡಿ ಬಂದ ನಂಟು ಕಾಲಾನಂತರದ ಜಾನಪದ ಅಧ್ಯಯನದ ರೂಪ ಸ್ವರೂಪಗಳಿಗೆ ಒಂದು ಬುನಾದಿಯಾದುವು ಎನ್ನುವುದು ವಾಸ್ತವ ಸತ್ಯ.

ಈ) ಕನ್ನಡ ಸಾಹಿತ್ಯ ಪರಿಷತ್ತು 1915ರಲ್ಲಿ ಜನಪದ ಸಾಹಿತ್ಯದ ಪುನರುಜ್ಜೀವನ ಕುರಿತು ದೀರ್ಘವಾದ ಆಲೋಚನೆ ಮಾಡಿತು. 1919ರ ಐದನೆಯ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಹನುಮಂತಗೌಡ ಎನ್ನುವವರು ಓದಿದ 'ಹೈದರಾಬಾದಿನ ಲಾವಣಿ', ಲಾವಣಿ ಕುರಿತ ಪ್ರಬಂಧ, 1921ರ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯ ಜುಲೈ ಸಂಚಿಕೆಯಲ್ಲಿ ಪ್ರಕಟವಾದ 'ಕನ್ನಡ ಗಾದೆಗಳ ಜೀರ್ಣೋದ್ಧಾರ' ಲೇಖನ, ಇದೇ ಅವಧಿಯಲ್ಲಿ ಮಂಗಳೂರು ಬಾಸೆಲ್ ಮಿಷನ್ ಬುಕ್ ಡಿಪೋ ಪ್ರಕಟಿಸಿದ 'ಕನ್ನಡ ಗಾದೆಗಳು', ಬಿಜಾಪುರದಲ್ಲಿ ಜರುಗಿದ 9ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ 1923 ನವೆಂಬರ್ ಅಧಿವೇಶನದಲ್ಲಿ ಮಧುರಚೆನ್ನರು ಪ್ರಸ್ತುತಪಡಿಸಿದ 'ಹಳ್ಳಿಯ ಹಾಡುಗಳು' ಪ್ರಬಂಧ, 1924ರಲ್ಲಿ ನಡಕೇರಿಯಂಡ ಚಿಣ್ಣಪ್ಪ ಪ್ರಕಟಿಸಿದ 'ಪಟ್ಟೋಲೆ ಪಳಮೆ', 1925ರಲ್ಲಿ ಮುದ್ರಿತವಾದ ಮಾಸ್ತಿಯವರ 'ಕನ್ನಡ ಲಾವಣಿ (ಸಾಹಿತ್ಯ)' ಸಾಂಗತ್ಯ (?), ಮುಂತಾದುವು ಜನಪದ ಸಾಹಿತ್ಯದ ಅಧ್ಯಯನದ ಬೆಳವಣಿಗೆಯ ಹಿನ್ನೆಲೆಯಲ್ಲಿ



ಉಲ್ಲೇಖನಾರ್ಹ. ಆರಂಭ ಕಾಲದ ಇಂಥ ಬರವಣಿಗೆಗಳಲ್ಲಿ ಅತಿ ಮೆಚ್ಚುಗೆಯ ಮಾತುಗಳಿರುವುದು ನಿಜ. ಆದರೆ ಇಂಥ ಪ್ರಯತ್ನಗಳನ್ನು ಕೇವಲ ಜನಪದ ಸಾಹಿತ್ಯದ ಪ್ರಶಂಸಾತ್ಮಕ ಉದ್ಗಾರಗಳೆಂದು ಅಲಕ್ಷಿಸುವುದು, ಗೌಣವೆಂದು ಪರಿಭಾವಿಸುವುದು ಸರಿಯಲ್ಲ. ಏಕೆಂದರೆ ಇಂಥ ಪ್ರಯತ್ನಗಳೇ ಹಂತಹಂತವಾಗಿ ತನ್ನ ದೃಷ್ಟಿ ಧೋರಣೆಗಳನ್ನು ಬದಲಿಸಿಕೊಂಡ ಜಾನಪದ ಅಧ್ಯಯನ ಸ್ವರೂಪಕ್ಕೆ ತಳಹದಿಯಾಗಿ ನಿಂತುವು. ಈ ಹಂತದಲ್ಲಿ ನಡೆದ ಅಭ್ಯಾಸ, ಸಂಗ್ರಹಗಳ ಧೋರಣೆ ಸೀಮಿತವಾಗಿದ್ದರೂ ನಿರ್ಲಕ್ಷಿಸುವಂಥದಲ್ಲ. ವಾಕ್ ಪರಂಪರೆಯಲ್ಲಿ ತಲೆಮಾರಿನಿಂದ ತಲೆಮಾರಿಗೆ ಸಾಗಿ ಬಂದ ಜಾನಪದದ-ಜನಪದ ಸಾಹಿತ್ಯ ಮತ್ತು ಸಾಹಿತ್ಯೇತರ ಜಾನಪದ ಕುರಿತ ವಿವೇಚನೆ, ಸಂಗ್ರಹಗಳನ್ನು ಲಿಖಿತ ರೂಪಕ್ಕೆ ಒಳಪಡಿಸುವಾಗ ಅದನ್ನು ಕುರಿತು ಸಂಗ್ರಹಕಾರ-ಸಂಪಾದಕ-ತಾನು ಸಂಗ್ರಹಿಸಿದ ಸಾಹಿತ್ಯ ಕುರಿತು ಟಿಪ್ಪಣಿ ಅರ್ಥವಿವರಣೆ ಮುಂತಾದವುಗಳನ್ನು ಕೊಡಬೇಕಾಗುತ್ತದೆ. ಪ್ರಪಂಚದ ಶ್ರೇಷ್ಠ ಸಂಗೀತಜ್ಞ ಯೆಹೂದಿ ಮೆನುಹಿನ್ ವಾಕ್ ಪರಂಪರೆ ಕುರಿತು ಹೇಳುವ ಮಾತು ತುಂಬ ಅರ್ಥಪೂರ್ಣ. "ವಾಕ್ ಪರಂಪರೆ ಎನ್ನುವುದು, ಅರ್ಥ ಮತ್ತು ಉದ್ದೇಶಗಳನ್ನು ಜೀವಂತ ಮತ್ತು ಗ್ರಾಹ್ಯವಾಗಿ ಉಳಿಸಿಕೊಂಡು ಬಂದ ಒಂದು ಅದ್ಭುತ ವಸ್ತು. ಮುದ್ರಿತ ರೂಪಕ್ಕೆ ಆ ವಿಚಾರಗಳನ್ನು ಒಳಪಡಿಸಿದಾಗ ಅವುಗಳ ಬೀಗ ತೆರೆಯಲು ಒಬ್ಬ ಅರ್ಥವಿವರಣಕಾರನ ಅಗತ್ಯವಿರುತ್ತದೆ."[1]

ಈ ಮಾತುಗಳನ್ನು, ಸಂಗೀತ ಗ್ರಹಣದ ಹಿನ್ನೆಲೆಯಲ್ಲಿ ಹೇಳಲಾಗಿದ್ದರೂ, ಶತಮಾನಗಳವರೆಗೆ ವಾಕ್ ಪರಂಪರೆಯ ಮೂಲಕವಾಗಿಯೇ ಸಾಗಿಬಂದ ಜಾನಪದ ಸಾಹಿತ್ಯ ವಿಷಯ ಸಂಗ್ರಹಣ ಮತ್ತು ಅಧ್ಯಯನಕ್ಕೂ ಅನ್ವಯಗೊಳ್ಳುವಂಥವು.

ಆದರೆ ಕನ್ನಡ ಜಾನಪದ ಅಧ್ಯಯನದ ಆರಂಭದ ಕಾಲಾವಧಿ ಸಾಹಿತ್ಯಿಕ ದೃಷ್ಟಿಕೋನದಿಂದಲೇ ಪ್ರೇರಿತವಾಗಿದ್ದು, ನಡಿಕೇರಿಯಂಡ ಚಿಣ್ಣಪ್ಪ ಅವರ 'ಪಟ್ಟೋಲೆ ಪಳಮೆ' (1924) ಕೃತಿ ಜಾನಪದ ಅಧ್ಯಯನದ ವಿವಿಧ ಮುಖಗಳ–ಸಾಂಸ್ಕೃತಿಕ ಅನ್ವೇಷಣೆಯ ಅಗತ್ಯತೆಯನ್ನು ಎತ್ತಿ ತೋರಿಸಿತು.

1930ರ ಕಾಲಾವಧಿಗೆ ಕಾಲಿರಿಸುವ ಮೊದಲು ಕನ್ನಡದಲ್ಲಿ ಅಲ್ಲಲ್ಲಿ ಪ್ರಕಟವಾದ ಜನಪದ ಸಾಹಿತ್ಯ ಕೃತಿಗಳ ಒಂದು ಪಟ್ಟಿ ಹೀಗಿದೆ :

1. "An oral tradition is a wonderful thing, keeping meaning and purpose alive and accessible. As soon as an idea is confined to the printed page, an interpreter is required to unlook it." 'Understanding Indian Music, 'Yehudi Menuhin, *Span* July 1978, P. 13.

| ಕ್ರ.ಸಂ. | ಕಾಲ | ಸಂಕಲನ ಶೀರ್ಷಿಕೆ | ಸ್ಥಳ |
|---|---|---|---|
| 1 | 1891 | ಲಾವಣಿ ಪದ ಸಂಗ್ರಹವು | ಮದರಾಸು |
| 2 | 1896 | ಅರ್ಜುನ ಜೋಗೀ ಹಾಡು | ಮೈಸೂರು |
| 3 | 1902 | ತುರಾ ಲಾವಣಿ ಜವಾಬುಗಳು | ಮೈಸೂರು |
| 4 | 1906 | ಸಾಮತಿ ಸಂಗ್ರಹ | ಬೆಳಗಾಂವಿ |
| 5 | 1912 | ಲಾವಣೀ ಪದಗಳು | ಬಳ್ಳಾರಿ |
| 6 | 1912 | ಎ ಹ್ಯಾಂಡ್ ಬುಕ್ ಆಫ್ ಕ್ಯಾನರೀಜ್ ಪ್ರಾವ್ಹರ್ಬ್ಸ್ | ಮಂಗಳೂರು |
| 7 | 1915 | ಲಾವಣಿ ಪದಗಳು | ಬಳ್ಳಾರಿ |
| 8 | 1918 | ಯುರೋಪ ಖಂಡದ ಮಹಾ ಯುದ್ಧದ ಲಾವಣಿ ಪದಮಾಲಿಕೆ | ಬೆಳಗಾಂವಿ |
| 9 | 1919 | ಕನ್ನಡ ನಾಣ್ಣುಡಿಗಳಲ್ಲಿ ಅರ್ಥ ಗಂಟೆಯ ಕಲಾಕ್ಷೇಪ | ಬೆಂಗಳೂರು |
| 10 | 1927 | ಸಾವಿರ ಮಾತಿನ ಸರದಾರ | ಹಳ್ಳೀಗುಡಿ (ಗದಗ) |
| 11 | 1929 | ತುರಾ ಲಾವಣಿ | ಮೈಸೂರು[1] |

ಈ ಕೆಲವು ಸಂಕಲನಗಳನ್ನು ಗಮನಿಸಿದರೆ ಅಂದಿನ ಸಂಗ್ರಹಕಾರರು ಜನಪದ ಸಾಹಿತ್ಯದ ಲಾವಣಿ ಪ್ರಚಾರಕ್ಕೆ ಒತ್ತುಕೊಟ್ಟಿರುವುದು ಸ್ಪಷ್ಟ. ಲಾವಣಿಗಳ ಜೊತೆಗೆ ಗಾದೆ, ನಾಣ್ಣುಡಿ, ಒಗಟು ಮುಂತಾದವುಗಳ ಕಡೆಗೂ ಲಕ್ಷ್ಯ ಹರಿಸಲಾಗಿದೆ. ಅಂದಿನ ಪರಿಮಿತ ಧೋರಣೆಯ ಹಿನ್ನೆಲೆಯಲ್ಲಿಯೂ ಈ ಸಂಕಲನಗಳಲ್ಲಿ ಪ್ರಾಸಂಗಿಕ ಪೀಠಿಕೆ, ಪ್ರಸ್ತಾವನೆ ಬರೆದು ಚರ್ಚೆ ಮಾಡಿರುವುದು ವಿಶೇಷ.

'ಕಲ್ಗಿ', ತುರಾದ ಲಾವಣಿ, ಅರ್ಜುನ ಜೋಗಿಯ ಪೌರಾಣಿಕ ಕಥಾನಕ, 'ಪೆರಿಯಾಪಟ್ಟಣ' ಯುರೋಪು ಖಂಡದ ಮಹಾಯುದ್ಧದ ಐತಿಹಾಸಿಕ ಘಟನೆಗಳ ವರೆಗೆ ರಚನೆಗಳ ವಸ್ತು ವೈವಿಧ್ಯ.

ಈ ಅವಧಿಯಲ್ಲಿ ಮಾಸ್ತಿ, ದೇವುಡು, ಮತಿಘಟ್ಟ ಕೃಷ್ಣಮೂರ್ತಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮುಂತಾದ ಕೆಲವರು ಜನಪದ ಸಾಹಿತ್ಯ ಸಂಗ್ರಹಕಾರ್ಯ ಮತ್ತು ಜನಪದ ಸಾಹಿತ್ಯ ವಿಮರ್ಶೆಯ ಕಾರ್ಯ ಮುಂದುವರೆಸಿದರು. 1925ರಲ್ಲಿ ಪ್ರಕಟಗೊಂಡ ಮಾಸ್ತಿಯವರ ಲಾವಣಿ ಕುರಿತ ಲೇಖನ, 1928ರಲ್ಲಿ ತ್ರಿಪದಿ ಕುರಿತು ಜಯ ಕರ್ನಾಟಕ ಪತ್ರಿಕೆ ಪ್ರಕಟಿಸಿದ ಪ್ರಹ್ಲಾದ ನರೇಗಲ್ಲ ಅವರ ತ್ರಿಪದಿ ಛಂದಸ್ಸಿನ

1. ಕನ್ನಡ ಜಾನಪದ ಗ್ರಂಥಸೂಚಿ, ಪು. 63, ಸಂ : ಡಾ॥ ಹಾ. ಮಾ. ನಾಯಕ, 1974.



ವಿವೇಚನೆ, 1930ರಲ್ಲಿ ಬೆಟಗೇರಿ ಕೃಷ್ಣಶರ್ಮ ಬರೆದ 'ಹಳ್ಳಿಯ ಹಾಡು' ಬರೆಹ ಮುಂತಾದುವು ಕರ್ನಾಟಕದ ವಿವಿಧ ಭಾಗಗಳ ಸಾಹಿತ್ಯಾಸಕ್ತರ ಮನಸ್ಸು, ಜನಪದ ಸಾಹಿತ್ಯ ಅದರ ವೈಶಿಷ್ಟ್ಯ ಕುರಿತು ಗಂಭೀರ ಆಲೋಚನೆಯಲ್ಲಿ ತೊಡಗಿತ್ತು ಎನ್ನುವುದನ್ನು ಎತ್ತಿ ತೋರಿಸುತ್ತದೆ. ಜನಪದ ಸಾಹಿತ್ಯದಿಂದ ಧಾರಾಳ ಸ್ಫೂರ್ತಿ ಪಡೆದ ಬೆಟಗೇರಿ ಕೃಷ್ಣಶರ್ಮರು ಪ್ರಕಟಿಸಿದ 'ಹಳ್ಳಿ ಹಾಡು' ಲೇಖನದಲ್ಲಿ, ಸುಮಾರು ಅರವತ್ತೈದು ತ್ರಿಪದಿಗಳನ್ನು ಉಲ್ಲೇಖಿಸಿ ಜನಪದ ಬದುಕಿನ ಸ್ವಾರಸ್ಯಕರ ಪ್ರಸಂಗಗಳನ್ನು ನಿರೂಪಿಸಿದ್ದಾರೆ. ಕಾಲಮಾನದ ದೃಷ್ಟಿಯಿಂದ ಇದು ಒಂದು ಮಹತ್ವದ ವಿವೇಚನೆ.

1930ರ ದಶಕದಲ್ಲಿ ನಡೆದ ಈ ಎಲ್ಲ ಸಂಗತಿಗಳನ್ನು ಗಮನಿಸಿ ಹಲಸಂಗಿ ಪ್ರದೇಶಕ್ಕೆ ಬಂದರೆ ನಮಗಾಗಿ ಕಾದಿರುವ ಅಚ್ಚರಿ ಅಪರಿಮಿತ. ಏಕೆಂದರೆ ಮೇಲು ನೋಟಕ್ಕೆ ಗಡಿಭಾಗವೆಂದು ತೋರುವ ಸುದೂರದ ಹಳ್ಳಿ ಹಲಸಂಗಿ ಗೆಳೆಯರ ಗುಂಪಿನ ಎಲ್ಲ ಸದಸ್ಯರು ಅಪ್ಪಟ ಜನಪದರೇ.

ಉ) ಓಲೆಕಾರ ಮಾದಣ್ಣ, ಚೆನ್ನಮಲ್ಲಪ್ಪ ಗಲಗಲಿ 'ಮಧುರಚೆನ್ನ', ಕಾಪಸೆ ರೇವಪ್ಪ, ಸಿಂಪಿ ಲಿಂಗಣ್ಣ, ಚೆನ್ನಪ್ಪ ಸರಸಂಬಿ, ಆದಮ್ ಮುಸಳಿ, ಗುರುಬಸಪ್ಪ, ಪಿ. ಧೂಲಾ ಇವರೆಲ್ಲ ಹಲಸಂಗಿ ಮಣ್ಣಿನ ಮಕ್ಕಳೇ; ಜೊತೆಗೆ ನಾಡಿನ ಸೇವೆ, ರಾಷ್ಟ್ರೀಯ ನಿರ್ಮಾಣ, ಆಧ್ಯಾತ್ಮಿಕ ಸಾಧನೆಗಳಿಗಾಗಿ ತಮ್ಮ ಜೀವನವನ್ನು ಮುಡಿಪಿಟ್ಟ ಆದರ್ಶವಾದಿಗಳು. ಎಲ್ಲಕ್ಕೂ ಮೇಲಾಗಿ ಎಲ್ಲರೂ ಸಾಹಿತ್ಯಪ್ರಿಯರು; ಜನಪದ ಸಾಹಿತ್ಯ ಸಂಗೀತಗಳನ್ನು ಅಂತರ್ಗತ ಮಾಡಿಕೊಂಡವರು ಮತ್ತು ಸೃಜನಶೀಲರು. ಜನಪದ ಆಳವನ್ನು ಅರಿತ ಮಧುರಚೆನ್ನರು ಆಧ್ಯಾತ್ಮಿಕ ಭವ್ಯತೆಯನ್ನು ಗರ್ಭೀಕರಿಸಿಕೊಂಡು ನವೋದಯ ಕಾವ್ಯಕ್ಕೆ ಚಿರಸ್ಥಾಯಿ ಕಾಣಿಕೆ ನೀಡಿದ ಮಹಾಚಿಂತನಶೀಲರು ಸಾಧಕರು. ಇವರ ಜೊತೆ ಜೊತೆ ಹೆಜ್ಜೆಯಿರಿಸಿದ ಪಟೇಲ ಧೂಲಾ ಜನಪದ ಗೀತ ಸಂಗೀತಗಳಲ್ಲಿ ಉಸಿರಾಡಿಸುತ್ತ 'ಜೀವನ ಸಂಗೀತ' ದರ್ಶನ ಮಾಡಿಸಿದ ಮಹಾನುಭಾವರು.

ಚಿತ್ರಕಲಾವಿದರೂ ಆಗಿದ್ದ ಹಲಸಂಗಿಯ ಕಾಪಸೆ ರೇವಪ್ಪ ಜನಪದ ಹಾಡು ಕವಿತೆಗಳ ರಮ್ಯತೆಗೆ ಮನಸೋತ ಸೃಜನಶೀಲ ವ್ಯಕ್ತಿ. ಮಧುರಚೆನ್ನರ ಜೊತೆ ಜೊತೆಗೆ ಭಾವನಾತ್ಮಕವಾಗಿ ಸ್ಪಂದಿಸಿದ ಇವರು ಕತೆ, ಕಾದಂಬರಿ ಕವಿತೆಗಳನ್ನು ರಚಿಸುತ್ತ ಜನಪದ ಹಾಡುಗಳ ಸಂಗ್ರಹ ಮಾಡಿ, ಕನ್ನಡ ಜಾನಪದ ಸರಸ್ವತಿಗೆ 'ಮಲ್ಲಿಗೆ ದಂಡೆ' ಮುಡಿಸಿದ ಮಹಾನುಭಾವ.

ಮತ್ತೊಬ್ಬ ಮಹತ್ವದ ವ್ಯಕ್ತಿ ಸಿಂಪಿ ಲಿಂಗಣ್ಣ, ಮಧುರಚೆನ್ನರ ಹೆಜ್ಜೆಯಿಟ್ಟು ಅರವಿಂದರ ಆಧ್ಯಾತ್ಮಪಥದ ಸಾಧಕರಾಗಿ ಕತೆ, ಪತ್ರ, ಹಾಸ್ಯಲೇಖನ, ಸ್ವರ್ಗದೋಲೆ ಗಳನ್ನು ರಚಿಸುತ್ತ ಜನಪದ ರಂಗಭೂಮಿ, ಒಗಟು ಗಾದೆ ಇತ್ಯಾದಿಗಳ ಕಲಾತ್ಮಕತೆ,

ವ್ಯಂಜಕ ಗುಣಗಳನ್ನು ಕಾಪಿಟ್ಟುಕೊಂಡು, ಗರತಿಯ ಬಾಳಿನ ಗರಿಮೆಯನ್ನು ಗುರುತಿಸಿ, 'ಜನಾಂಗದ ಜೀವಾಳ' ತೆರೆದು ತೋರಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ ಅಲಂಕರಿಸಿದ ಸಿಂಪಿ ಲಿಂಗಣ್ಣ ನಿಜವಾದ ಅರ್ಥದಲ್ಲಿ ಜನಪದ ಸಂಸ್ಕೃತಿಯ ಜೀವಂತ ಪ್ರತೀಕವಾಗಿದ್ದರು. 'ಹಲಸಂಗಿ ಗೆಳೆಯರ ಗುಂಪು' ವಾಸ್ತವವಾಗಿ ಜಾತಿ ಮತ ಪಂಥಗಳ ಗೋಡೆಗಳನ್ನು ಕೆಡವಿ ಸ್ನೇಹದ ಬಯಲಲ್ಲಿ ಸ್ವಚ್ಛಂದವಾಗಿ ನಲಿದ ಅಪೂರ್ವ ಕೂಟವಾಗಿತ್ತು. ಹಲಸಂಗಿಯ ಓಲೆಕಾರ ಮಾದಣ್ಣ, ಪಟೇಲ ಧೂಲಾ ಈ ಗುಂಪಿನ ಅವಿಭಾಜ್ಯ ಅಂಗವಾಗಿದ್ದುದೇ ಅದಕ್ಕೆ ನಿದರ್ಶನ.

ಮೇಲೆ ವಿವರಿಸಿದ ಹಲಸಂಗಿ ಗೆಳೆಯರಲ್ಲಿ ಪ್ರತಿಯೊಬ್ಬರ ಜನಪದ ಸಾಹಿತ್ಯ ಕಾಣಿಕೆ ಕುರಿತು ಪ್ರತ್ಯೇಕ ಅಧ್ಯಯನ ನಡೆಯುವಷ್ಟು ವ್ಯಾಪಕ ಕಾರ್ಯ ಇವರಿಂದ ನಡೆದಿದೆ.

ಊ) ಕರ್ನಾಟಕದಲ್ಲಿ 1930ರ ವರೆಗೆ ನಡೆದ ವಿವಿಧ ಜನಪದ ಸಾಹಿತ್ಯ ಕಾರ್ಯ ಚಟುವಟಿಕೆಗಳ ಹಿನ್ನೆಲೆಯಲ್ಲಿ ವೀಕ್ಷಿಸಿದಾಗ, ಹಲಸಂಗಿ ಗೆಳೆಯರು ಈ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಮತ್ತು ಮಾಡಿದ ಸಾಧನೆ ಕನ್ನಡ ಜಾನಪದ ಸಾಹಿತ್ಯ ಚರಿತ್ರೆಯಲ್ಲಿ ಚಿರಸ್ಮರಣೀಯ ಅನಿಸುತ್ತದೆ.

ಈ ಕಾಲಾವಧಿಯಲ್ಲಿ ಮಧುರಚೆನ್ನರು ಬರೆದ ಮೂರು ಜನಪದ ಸಾಹಿತ್ಯ, ಗೀತೆ ಕುರಿತ ಲೇಖನಗಳು ಕನ್ನಡ ಜನಪದ ಅಧ್ಯಯನದ ರೋಮಾಂಚಕ ವಿರಳ ದಾಖಲೆಗಳಾಗಿವೆ.

ಮಧುರಚೆನ್ನರ 'ಹಳ್ಳಿಯ ಹಾಡುಗಳು' ಲೇಖನದಲ್ಲಿ ಅವರು ಅಂದು ಗಮನಿಸಿದ ಅನಂತ ಫಂದಿ ಮುಂತಾದವರ ಲಾವಣಿ ಸಾಹಿತ್ಯ ಮತ್ತು ಬಂಗಾಳದ ಢಾಕಾ ಪರಿಷತ್ತು ಮಾಡಿದ ಕಾರ್ಯಗಳ ಉಲ್ಲೇಖ ಬರುತ್ತದೆ. ಕಳೆದ ದಶಕದಲ್ಲಿ ಉತ್ತರ ಕರ್ನಾಟಕದ ಜನಪದ ಹಾಡುಗಳ ವರ್ಗೀಕರಣ ಮಾಡಿದ ಡಾ॥ ಎಂ. ಎಂ. ಕಲಬುರ್ಗಿ 'ಗಂಡಸರ ಹಾಡುಗಳು', 'ಹೆಂಗಸರ ಹಾಡುಗಳು' ಮುಂತಾಗಿ ವಿವರಿಸಿದ್ದಾರೆ. ಈ ವರ್ಗೀಕರಣವನ್ನು 1923ರ ವಿಜಾಪುರದ 9ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕಾಗಿ ಮಧುರಚೆನ್ನರು ಪ್ರಸ್ತುತಪಡಿಸಿದ ತಮ್ಮ 'ಹಳ್ಳಿಯ ಹಾಡುಗಳು' ಪ್ರಬಂಧದಲ್ಲಿಯೇ ವಿವರಿಸಿದ್ದಾರೆ. ಈ ವರ್ಗೀಕರಣದ ವೈಜ್ಞಾನಿಕ ವಿವೇಚನೆ ಇಲ್ಲಿ ಅಪ್ರಸ್ತುತ. ಆದರೆ ಯಾವುದನ್ನು ಇಂದಿನ ಜಾನಪದ ಆಸಕ್ತರು ವಿವೇಚಿಸುತ್ತಾರೆಯೋ ಅದನ್ನು ಅರ್ಧ ಶತಕದಷ್ಟು ಮೊದಲೇ ಮಧುರಚೆನ್ನರು ಮಾಡಿದ್ದರು ಎನ್ನುವುದು ಗಮನಾರ್ಹ. ಮಧುರಚೆನ್ನರು, ತಮ್ಮ ಹಲಸಂಗಿ ಗೆಳೆಯರು ಮತ್ತು ಹಲಸಂಗಿಯ ಸುತ್ತಮುತ್ತಣ ಅಪರೂಪದ ವ್ಯಕ್ತಿಗಳ ಜೊತೆ ಜೊತೆಗೆ, ಚಡಚಣ, ಸಾಲೋಟಗಿ, ಇಂಡಿ, ಯಮುಕನಮರಡಿ, ಅಥರ್ಗಾ,



ಬಿಜಾಪುರ, ಬಾಗಲಕೋಟೆ, ಧಾರವಾಡ ಹೀಗೇ ಪುತ್ತೂರುವರೆಗಿನ ಅನೇಕ ವ್ಯಕ್ತಿಗಳು, ಸಂಘ ಸಂಸ್ಥೆಗಳನ್ನು ತಮ್ಮ ಸ್ನೇಹ ವಲಯದ ಕಕ್ಷೆಯಲ್ಲಿ ಸೆಳೆದು ಕೊಂಡರು. ಇದನ್ನು ಕುರಿತ ವಿವರಗಳನ್ನು ಡಾ॥ ಕಾಪಸೆ ಆಗಲೇ ದಾಖಲೆ ಗೊಳಿಸಿದ್ದಾರೆ. ಆದರೆ ಮಧುರಚೆನ್ನರು ತಮ್ಮ ಗೆಳೆಯರನ್ನು ಕಂಡ ದೃಷ್ಟಿ ಬೆರಗುಗೊಳಿಸುತ್ತದೆ. ಅಣ್ಣಂದಿರು, ತಾಯಂದಿರು, ತಂಗಿಯರು ಹೀಗೆ ಕಳ್ಳ ಬಳ್ಳಿಯ ಪದಗಳಿಂದಲೇ ಅವರ ಜೊತೆಗಿನ ಸಂಬಂಧದ ಹಂದರ ಹರಡುತ್ತಾರೆ. ಅದರಲ್ಲೂ ಹಲಸಂಗಿಯ ಅಧ್ಯಯನಶೀಲರನ್ನು ಓದಾಳಿ ಹಾಡುಗಾರರನ್ನು 'ಅಗಾಧ ಜೀವಗಳು' ಎಂದು ಕರೆಯುತ್ತಾರೆ.

ಎ) 'ರಮ್ಯ ಜೀವನ' ಎನ್ನುವ ಮತ್ತೊಂದು ಲೇಖನ ಬಿಜಾಪುರ ಪ್ರದೇಶದ ಸುತ್ತಮುತ್ತಣ ಭಾಗಗಳಲ್ಲಿ ಈಗ ಸುಮಾರು ಒಂದು ಶತಮಾನದ ಹಿಂದೆ ಇದ್ದ ಅನೇಕ ಬಗೆಯ ಅಪೂರ್ವ ಲಾವಣಿಕಾರರ ಮಾಹಿತಿಗಳನ್ನು ಒಳಗೊಂಡಿದೆ. ಲಾವಣಿಗಳಾಗಲಿ, ಜನಪದ ಸಾಹಿತ್ಯದ ಇತರ ಯಾವುದೇ ಪ್ರಕಾರಗಳಾಗಲಿ, ಇಂದಿನ ದಿನಮಾನಗಳಲ್ಲಿ ಅವುಗಳ ಸಂಗ್ರಹ ದಾಖಲಾತಿಗಳಿಗಾಗಿ ಕ್ಷೇತ್ರಕಾರ್ಯ ಕೈಕೊಳ್ಳು ವುದು ಒಂದು ಅನಿವಾರ್ಯ ಪ್ರಕ್ರಿಯೆ. ಆದರೆ 1930ರ ದಶಕದಲ್ಲಿ – ಅದೂ ಕರ್ನಾಟಕದಲ್ಲಿ – ಕ್ಷೇತ್ರಕಾರ್ಯ ಎನ್ನುವುದೊಂದು ಪ್ರತ್ಯೇಕವಾದ ಜಾನಪದ ಅಧ್ಯಯನದ ಧೋರಣೆ ರೂಪುಗೊಂಡಿರಲಿಲ್ಲ. ಇದಕ್ಕೆ ಕಾರಣ ಅಂದಿನ ಎಲ್ಲ ಜನಪದ ಸಂಗ್ರಾಹಕರು, ಗ್ರಾಮೀಣ ಪ್ರದೇಶದಲ್ಲಿ ಸಮೃದ್ಧ ಜೀವಂತ ಜನಪದ ಪರಿಸರ ದಲ್ಲಿಯೇ ಕಣ್ದೆರೆದು ಉಸಿರಾಡಿಸಿ ಬೆಳೆದವರು. ಒಂದಲ್ಲ ಒಂದು ಜನಪದ ಪ್ರಕಾರದ ಪ್ರದರ್ಶನ ನಿರೂಪಣೆಗಳಲ್ಲಿ ಪ್ರತ್ಯಕ್ಷ ಭಾಗಿಗಳಾದವರು. ಆದರೆ ಇಂದಿನ ಜಾನಪದ ಆಸಕ್ತರು, ಪದವಿ ಪಟ್ಟ ಪಡೆದ ಜಾನಪದ ತಜ್ಞ - ಪರಿಣತರು, ಆ ಪರಿಸರದಿಂದ ಸರಿದು, ವಿವಿಧ ಸಮೂಹ ಸಂವಹನಗಳ ಪ್ರಭಾವಕ್ಕೆ ಒಳಗಾಗಿರುವುದರಿಂದ, ಅಂಥ ವರಿಗೆ ನಮ್ಮ ಹಳ್ಳಿಗಳ ಯಾವುದೇ ರೀತಿಯ ಜನಪದ ಹಾಡು, ವಾದ್ಯಮೇಳ, ಕಲಾಪ್ರದರ್ಶನ ಆಚರಣೆಗಳು, ಅವುಗಳ ಲಯ ಮಟ್ಟು, ದಾಟಿ, ವಾದ್ಯ, ವೇಷ-ಭೂಷಣ ಪ್ರತಿಯೊಂದು ಅಂಶವೂ - ಅನೇಕಸಲ - ಹೊಚ್ಚ ಹೊಸದಾಗಿ ಕಾಣುವುದು ಮತ್ತು ಈ ಕಾರಣಕ್ಕಾಗಿ ಪ್ರತಿಯೊಂದನ್ನೂ - ಸ್ಥಳ, ವಕ್ತೃ, ವಿವರಣೆ, ಕಾಲ ಇತ್ಯಾದಿ - ದೃಶ್ಯಚಿತ್ರ, ಮುದ್ರಣ - ದಾಖಲಾತಿಗೊಳಿಸುವುದು ಅನಿವಾರ್ಯ. ಈಗ ಸುಮಾರು ಅರ್ಧ ಶತಮಾನಗಳ ಮೊದಲು, ಇಂದು ನಮ್ಮಲ್ಲಿ ಖ್ಯಾತಿ ಪಡೆದಿರುವ ಅನೇಕ ವ್ಯಕ್ತಿಗಳು ಬೇರೆ ಬೇರೆ ಜನಪದ ಸಾಹಿತ್ಯ ಕಲಾಪ್ರಕಾರಗಳ ಚಲಿಸುವ ಭಂಡಾರವಾಗಿದ್ದರು ; ಇಂದಿಗೂ ಕೆಲವರು ಅಲ್ಲಲ್ಲಿ ಉಸಿರಾಡಿಸುತ್ತಿದ್ದಾರೆ. ಶಿವರಾಮ ಕಾರಂತ, ಬೆಟಗೇರಿ ಕೃಷ್ಣಶರ್ಮ, ಮತಿಘಟ್ಟ, ಗೊರೂರು, ಸಿಂಪಿ ಲಿಂಗಣ್ಣ, ಕರೀಂಖಾನ್, ಕೃಷ್ಣ ಪಾರಿಜಾತದ ಅಪ್ಪಾಲಾಲ್, ದೇಶಪಾಂಡೆ, ಚಿಟ್ಪಾಣಿ ರಾಮಚಂದ್ರ, ಹಾಸ್ಯಗಾರ, ಸಾಧನಿ, ಮೋನಪ್ಪ ಮುಂತಾದವರ ಒಂದು ದೊಡ್ಡ

ಪಟ್ಟಿಯನ್ನೇ ಕೊಡಬಹುದು. ಅಂದಿನ ದಶಕಗಳಲ್ಲಿ ಇಂಥವರು ತಮ್ಮ ಆಯ್ಕೆಯ ಜನಪದ ಕಲಾಪ್ರಕಾರ ಕುರಿತು ಹೇಳಬೇಕಾದಾಗ ವಕ್ತೃವಿಗಾಗಿ, ಮಾಹಿತಿ ವಿವರಗಳಿಗಾಗಿ ಇತರರನ್ನು ಹುಡುಕಿಕೊಂಡು, ಆಯಾ ಪ್ರದೇಶಗಳಿಗೆ ಹೋಗುವ ವಿಶೇಷ ಅಗತ್ಯ ಬೀಳುತ್ತಿರಲಿಲ್ಲ. ಅವರೇ ವಕ್ತೃ, ಪ್ರದರ್ಶನ ವಿಧಾನ ಪರಿಣತ ಮಾಹಿತಿ ಕೋಶ ಕಲಾವಿದ ಎಲ್ಲವೂ ಆಗಿದ್ದರು. ಹಾಗೆಂದು ನಾನು ಇಂದಿನ ಕ್ಷೇತ್ರಕಾರ್ಯದ ಮಹತ್ತ್ವವನ್ನು ಅಲ್ಲಗಳೆಯುತ್ತೇನೆ ಎಂದು ಖಂಡಿತ ಭಾವಿಸಕೂಡದು. ಏಕೆಂದರೆ ಕ್ಷೇತ್ರಕಾರ್ಯದಲ್ಲಿ ವೈಜ್ಞಾನಿಕ ದೃಷ್ಟಿ ಧೋರಣೆ, ಜಾನಪದ ಅಧ್ಯಯನದ ಒಂದು ಅಗತ್ಯ ಮತ್ತು ಅನಿವಾರ್ಯ ಪ್ರಕ್ರಿಯೆ. ಜಾನಪದ ಇಂದಿಗೂ ಭಾರತದಲ್ಲಿ, ಕರ್ನಾಟಕದಲ್ಲಿ ಒಂದು ಜೀವಂತ ನಿಧಿಯಾಗಿದೆ. ಎಷ್ಟು ಮುಖದಲ್ಲಿ ಎಷ್ಟು ವೇಗದಲ್ಲಿ ಕ್ಷೇತ್ರಕಾರ್ಯ ನಡೆಯುತ್ತದೆಯೋ ಅಷ್ಟು ತೀವ್ರ ಫಲಕಾರಿ. ಮಧುರಚೆನ್ನರು 1934ರಲ್ಲಿ ಬರೆದ ಒಂದು 'ರಮ್ಯ ಜೀವನ' ಲೇಖನದ ಪ್ರಸ್ತಾಪ ಮಾಡುತ್ತ, ಈ ಮೇಲಿನ ಕೆಲವು ಮಾತುಗಳನ್ನು ಆನುಷಂಗಿಕವಾಗಿ ವಿವರಿಸಲಾಯಿತು.

ಕ್ಷೇತ್ರಕಾರ್ಯವನ್ನು ಕುರಿತಂತೆ, ಇತ್ತೀಚೆಗೆ ಪುರುಷೋತ್ತಮ ಬಿಳಿಮಲೆ ತಮ್ಮ ಒಂದು ಪುಸ್ತಿಕೆಯಲ್ಲಿ[1] ಜಾನಪದ ಕ್ಷೇತ್ರಕಾರ್ಯದ ರೀತಿ ನೀತಿಗಳನ್ನು ಚರ್ಚಿಸುತ್ತ, "ಜನಪದ ವಿದ್ವಾಂಸನು ತಲುಪುವ ನೆಲೆ ಯಾವುದೇ ಇರಲಿ, ಆತ ಹೊರಡುವುದು ಮಾತ್ರ ಕ್ಷೇತ್ರದ ಮಾಹಿತಿಗಳ ಮೂಲಕವೇ ಆಗಿದೆ. ಜಾನಪದ ಅಧ್ಯಯನದಲ್ಲಿ ಮಾಹಿತಿಗಳ ಸಂಗ್ರಹವೇ ನಿರ್ಣಾಯಕವಾದುದು' ಎಂದು ವಿವರಿಸಿದ್ದಾರೆ. ಮಧುರಚೆನ್ನರ 'ರಮ್ಯಜೀವನ' ಪ್ರಬಂಧ ಅಂಥ ಅಪೂರ್ವ ಮಾಹಿತಿಗಳ ದಾಖಲೆಯಾಗಿದೆ. ಇದರಲ್ಲಿ ಲಾವಣಿಕಾರರಾದ ಸಂಗಣ್ಣ, ಶಿವಲಿಂಗ, ಖಾಜಾಭಾಯಿ, ಸಂಗೂರ ರಾಯಪ್ಪ, ಮುಂತಾದವರ ಲಾವಣಿ ರಚನಾ ಪರಿಣತಿ ಹೇಳಲಾಗಿದೆ.

ಮಧುರಚೆನ್ನರ ಮಾತಿನಲ್ಲಿ ಹೇಳುವುದಾದರೆ, "ಆ ಕಾಲದಲ್ಲಿ ನಮ್ಮ ಈ ಭಾಗದೊಳಗೆ ಪ್ರಸಿದ್ಧ ಲಾವಣಿಕಾರರೆಂದರೆ ಹದರಿಯ ಬಡೇಶಾ, ಚಾಣಕೊಟಗಿಯ ನಬೀಶಾ ಮತ್ತು ಕ್ವಾರಳ್ಳಿಯ ರಾಮಚಂದ್ರ ಮುಂತಾದವರೇ."[2] ಅಂದು ಲಾವಣಿ ಹಾಡುವವರ ರೀತಿ, ಶೈಲಿ, ಕಲಾವಿದರ ಪರಿಣತಿ, ಪೈಪೋಟಿ, ಅಂದಿನ ಇಬ್ಬರು ಸುವಿಖ್ಯಾತ ಲಾವಣಿ ಕವಿ-ಕಲಾವಿದ ಬಡೇಶಾ ಮತ್ತು ಖಾಜಾಭಾಯಿ ಇವರ ಜನಪದ ಲಾವಣಿ ಸ್ಪರ್ಧೆ, ಹದರಿ ಜಾತ್ರೆಯ ಮೇಲಾಟ, "ಹಾಡಿನ ತಾಲೀಮು",

1. ಪುರುಷೋತ್ತಮ ಬಿಳಿಮಲೆ : ಜಾನಪದ ಕ್ಷೇತ್ರಕಾರ್ಯ - ಆಧುನಿಕ ವಿಧಾನಗಳು, ಪು. 4 ಕನ್ನಡ ವಿಶ್ವವಿದ್ಯಾಲಯ, 1993.
2. ಗುರುಲಿಂಗ ಕಾಪಸೆ : ಮಧುರಚೆನ್ನರ ಲೇಖನಗಳು, ಪು. 256, ಕನ್ನಡ ವಿಶ್ವವಿದ್ಯಾಲಯ 1993.



ತೆಲ್ಲಣಗಿ ಊರಲ್ಲಿ ಇವರಿಬ್ಬರ ನಡುವೆ ನಡೆದ ಲಾವಣಿ ಹಾಡುಗಳ ಪೈಪೋಟಿ, ಅದನ್ನು ಕೇಳಲು ಸುತ್ತುಮುತ್ತಲಿನ ಹತ್ತು ಹರದಾರಿಯ ಸಾವಿರಾರು ಸಂಖ್ಯೆಯ ಜನ ಕೂಡಿದುದು, ಹಾಡಿನ ಕರಾರು, ಸತತ ಏಳು ದಿನ ಹಗಲಿರುಳು ನಡೆದ ಹಾಡಿಕೆ, ಇವೆಲ್ಲ ಒಂದೊಂದೂ ರೋಚಕ ಸಂಗತಿಗಳೇ; ಲಾವಣಿ ಹಾಡಿನ ಚರಿತ್ರೆಯ ರೋಮಾಂಚಕ ಮಾಹಿತಿಗಳೇ !

ಹದರಿ ಬಡೇಶಾ ಮತ್ತು ಹಲಸಂಗಿ ಖಾಜಾಭಾಯಿ ಅವರ ನಡುವೆ ತೆಲ್ಲಣಗಿಯಲ್ಲಿ ಲಾವಣಿ ಸ್ಪರ್ಧೆ ಏರ್ಪಡುವ ಮೊದಲು ಅಲ್ಲಿ ನೆರೆದ ಸಾವಿರಾರು ಜನರ ಎದುರು ಮಾಡಿದ ಬಿನ್ನಹ, ಅಂದಿನ ಕಾಲದಲ್ಲಿ ನಡೆಯುತ್ತಿದ್ದ ಜನ್ನಪದ ಕ್ಷೇತ್ರದ ಚಟುವಟಿಕೆಗಳ ಬೆರಗು ಮೂಡಿಸುವ ದಾಖಲೆಯಾಗಿದೆ. ಕುತೂಹಲಕ್ಕಾಗಿ ಖಾಜಾಭಾಯಿ ಮಾಡಿದ ಬಿನ್ನಹ ಕೇಳಬಹುದು "ಬಡೇಸಾಹೇಬನು ನಾನು ಹೋದ ಹೋದಲ್ಲೆಲ್ಲಾ ಏನಾದರೂ ನೆವನ ಮಾಡಿ ತಪ್ಪಿಸಿಕೊಂಡು ಹೋಗುತ್ತಿದ್ದಾನೆ. ಇಲ್ಲಿ ಒಂದೇ ಸವನೆ ಏಸುದಿನ ಹಾಡಿಕೆ ನಡೆಯುವದೋ ನಡೆಯಲಿ, ಕೊನೆಗೆ ಯಾರು ಸೋಲುವರೋ ಅವರು ಮುಂದೆ ಜನ್ಮದಲ್ಲಿ ಎಂದೂ ಹಾಡಿಕೆಯನ್ನೆ ಮಾಡಲಾಗದೆಂದು ಕಾಗದ ಬರೆದು ಕೊಡಬೇಕು."[1]

ಇದು ಜನಪದ ಸಮುದಾಯದ ಎದುರು ಪರಸ್ಪರರು ಮಾಡಿಕೊಂಡ ಕರಾರು. ಈ ಇಬ್ಬರ ಜೀವನದ ವಿಶಿಷ್ಟ ಘಟನೆಗಳು ಕೂಡ ಇಲ್ಲಿ ನಿರೂಪಿತವಾಗಿವೆ.

ಅಂದು ಲಾವಣಿ ಕುರಿತು ಕೆಲವರಲ್ಲಿದ್ದ ಉಪೇಕ್ಷಾ ಮನೋಭಾವ, ಶೃಂಗಾರ ರಸಪೂರ್ಣ ಲಾವಣಿಗಳ ಮಹತ್ವ ಇತ್ಯಾದಿ ಸಂಗತಿಗಳ ಜೊತೆಗೆ ಮಧುರಚೆನ್ನರು 'ಹರದೇಶಿ' 'ನಾಗೇಶಿ' 'ಕಲ್ಗಿ' 'ತುರಾ'ಗಳ ಪರಿಕಲ್ಪನೆಯ ಸ್ವರೂಪವನ್ನು ಸ್ಪಷ್ಟಪಡಿಸಿದ್ದಾರೆ.

1. ಹೆಣ್ಣಿನ ಪಕ್ಷದ ವಾಡಿಕೆ → ನಾಗೇಶಿ = ಕಲ್ಗಿ
2. ಗಂಡಿನ ಪಕ್ಷದವರು → ಹರದೇಶಿ = ತುರಾ

'ನಾಗೇಶಿ ಅಥವಾ ಕಲ್ಗಿ ಲಾವಣಿಕಾರರು ತಮ್ಮ ಹಾಡುಗಳಲ್ಲಿ ಹೆಣ್ಣು, ಕತ್ತಲ, ಸಂಸಾರ, ದೇಹ ಮುಂತಾದ ವಿಷಯಗಳ ಪರವಾಗಿ ವಾದಿಸುವರು. ಆದರೆ ಗಂಡಿನ ಪಕ್ಷದ ಹರದೇಶಿ ಅಥವಾ ತುರಾ ಲಾವಣಿಯವರು ಗಂಡು ಬೆಳಕು, ವೈರಾಗ್ಯ ಆತ್ಮ ಮುಂತಾದವುಗಳ ಪರವಾಗಿ ವಾದಿಸುವರು."[2]

1. ಡಾ॥ ಕಾಪಸೆ, ಮಧುರಚೆನ್ನರ ಲೇಖನಗಳು, ಪು. 255, 257, 258. ಕನ್ನಡ ವಿಶ್ವವಿದ್ಯಾಲಯ, 1993.
2. ಅದೇ.

ಲಾವಣಿ ಹಾಡುಗಳ ಪ್ರಸ್ತುತಿ, ಪರಂಪರೆ, ಪರಿಕಲ್ಪನೆ ಮುಂತಾದ ವಿಷಯ ಕುರಿತು ದೊರೆಯುವ ಈ ವಿವರಗಳು ಲಾವಣಿ ಪರಂಪರೆಯ – ಜನಪದ ಗೀತ ಸಂಸ್ಕೃತಿಯ ಸ್ವರೂಪ ನಿರ್ಮಾಣದ ಎಂಥ ಅಪೂರ್ವ ಮಾಹಿತಿಗಳಾಗಿವೆ ! 'ಅಂದಿನ ಜನಪದ ಚಟುವಟಿಕೆಗಳಲ್ಲಿದ್ದ ಅಜ್ಞಾತವಾಗಿ ಕಳಚಿ ಹೋದ ಎಂಥ ವಿರಳ ಜೀವ ಸರಪಳಿಗಳ ದಾಖಲೆಗಳಾಗಿವೆ.' ಮಧುರಚೆನ್ನರ ಈ ಲೇಖನವೇ ಒಂದು ಅದ್ಭುತ ರಮ್ಯ, ಸೃಷ್ಟಿ. ಜನಪದ ಕ್ಷೇತ್ರಕ್ಕೆ ಜನಪದ ಅಧ್ಯಯನ ವಿಶ್ಲೇಷಣೆಗಳಿಗೆ ಅಧಿಕೃತ ಮತ್ತು ಸ್ವೋಪಜ್ಞ ವಕ್ತೃವಿನಂತಿರುವ ಈ ಬರವಣಿಗೆ ಒಬ್ಬ ಸೃಜನಶೀಲ ಬರಹಗಾರನ ಪ್ರತಿಭೆಯ ಪ್ರತಿಸೃಷ್ಟಿಗಾಗಿ ಕಾಯುತ್ತಿರುವಂಥದು.

ಏ) ಮತ್ತೊಂದು ಮಧುರಚೆನ್ನರ ಲೇಖನ(1936) 'ಹೆಣ್ಮಕ್ಕಳ ಗಾದೆಗಳು' ಎನ್ನುವುದು. ಅದಕ್ಕೂ ಮೊದಲು ಪ್ರಕಟವಾಗಿದ್ದ ಈ ಪ್ರಕಾರದ ಎರಡು ಕೃತಿಗಳನ್ನು ಅವರು ಗಮನಿಸಿದ್ದರು. (1. ಮಂಗಳೂರಿನಿಂದ ಪ್ರಕಟವಾಗಿದ್ದ 'ಲೋಕೋಕ್ತಿ ನಿಧಾನ' ಹೆಸರಿನ ಹದಿನೈದುನೂರು ಗಾದಗಳ ಸಂಗ್ರಹ; 2. ಸಾವಿರ ಮಾತಿನ ಸರದಾರ).

ಈ ಗಾದೆಗಳನ್ನು ಕುರಿತು ಜನಪದ ಸಂಗ್ರಹದಲ್ಲಿ ಕೆಲವೊಮ್ಮೆ ಜನಪದ ವೇಷ ಧರಿಸಿದ ಖೊಟ್ಟಿ ರೂಪಗಳೂ ಪ್ರವೇಶ ಪಡೆಯುವ ಸಂಗತಿಯನ್ನು ಮಧುರಚೆನ್ನರು ಬಹು ಸೂಕ್ಷ್ಮವಾಗಿ ಅಂದು ಗಮನಿಸಿದ್ದರು ಎನ್ನುವುದು ಅವರ ಮಾತುಗಳಲ್ಲಿ ಸ್ಪಷ್ಟವಿದೆ.

"....ಸಾವಿರ ಮಾತಿನ ಸರದಾರ ಎಂಬ ಪುಸ್ತಕವೊಂದು ಹೊರಬಿದ್ದಿದೆ. ಇದರ ಸಂಪಾದಕರು 'ಲೋಕೋಕ್ತಿ ನಿಧಾನ'ವನ್ನು ಕಂಡಿಲ್ಲವೆಂದು ತೋರುತ್ತದೆ. ಅಂತೇ ಸಾವಿರ ಗಾದೆಗಳನ್ನು ಬಾಯಿಗೂಡಿಸುವುದಕ್ಕಾಗಿ ಕೆಲಕೆಲವನ್ನು ಸ್ವತಃ ರಚಿಸಿಯೇ ಸೇರಿಸಿದ್ದಾರೆಂಬುದು ಸಾವಿರಮಾತಿನ ಸರದಾರದ ಕೊನೆಯ ಭಾಗವನ್ನು ನೋಡಿದರೆ ತಿಳಿದುಬರುವುದು." [1]

ಹಲಸಂಗಿ ಗೆಳೆಯರ ಗುಂಪಿನ ಚೈತನ್ಯ ಸೂತ್ರವಾಗಿದ್ದ ನವೋದಯ ಕಾವ್ಯದ ಅನುಭಾವ ಕವಿ ಮಧುರಚೆನ್ನರ ಪ್ರತಿಭೆಯ ಮೂಲ ಸೆಲೆ ಜಾನಪದವೇ. ಅವರ ವ್ಯಕ್ತಿತ್ವದ ವೈಶಿಷ್ಟ್ಯವೆಂದರೆ ಜೊತೆಗಿದ್ದ ಎಲ್ಲರನ್ನೂ ಕೂಡಿಕೊಂಡೇ ಬೆಳೆದದ್ದು – ಅರಳಿದ್ದು.

ಐ) 1930ರ ಬೆನ್ನಿಗೇ ಬಂದ 1931ರ ಬೆಳಗು, ಕರ್ನಾಟಕ ಜಾನಪದ

1. ಡಾ. ಗುರುಲಿಂಗ ಕಾಪಸೆ, 'ಮಧುರಚೆನ್ನರ ಲೇಖನಗಳು', ಪು. 266
ಕನ್ನಡ ವಿಶ್ವವಿದ್ಯಾಲಯ, 1993.



ಕ್ಷೇತ್ರದ ಒಂದು ಅಪೂರ್ವ ಹೊಂಬೆಳಗು. 1931ರಲ್ಲಿ ಹಲಸಂಗಿಯ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ ಈ ಮೂವ್ವರು ಕೂಡಿ ತಮಗೆ ಉತ್ತಮವೆಂದು ತೋರಿದ ತ್ರಿಪದಿಗಳನ್ನು, ಸಂಗ್ರಹಿಸಿ 'ಗರತಿಯ ಹಾಡು' ಹೆಸರಿನಲ್ಲಿ ಪ್ರಕಟಿಸಿದರು.

'ಗರತಿಯ ಹಾಡು' ಸಂಕಲನ ಏಕಕಾಲಕ್ಕೆ ಕನ್ನಡ ನಾಡಿನ ವಿವಿಧ ಭಾಗದ ವಿದ್ವಾಂಸರ ಗಮನ ಸೆಳೆಯಿತು. ಬಿ.ಎಂ.ಶ್ರೀ., ಅಂಬಿಕಾತನಯದತ್ತ, ಮಾಸ್ತಿ ಮುಂತಾದವರು 'ಗಗತಿಯ ಹಾಡು'ಗಳ ಮೋಡಿಗೆ ಒಳಗಾದರು.

'ಗರತಿಯ ಹಾಡು' ಕೃತಿಗೆ ಪ್ರಸ್ತಾವನೆ ಬರೆದ ಬಿ.ಎಂ.ಶ್ರೀ. "ಜನವಾಣಿ ಬೇರು, ಕವಿವಾಣಿ ಹೂವು" ಎಂದು ಹೇಳಿದರೆ, ಇದರ ಪರಿಚಯ ಮಾಡಿದ ಬೇಂದ್ರೆ "ಜೀವನವೇ ದೇವತೆಯಾದ ತ್ರಿಪದಿ ಛಂದದಲ್ಲಿ ಹೊರಹೊಮ್ಮಿದ ಗರತಿ ಹಾಡಿನ ಋಷಿಗಳು ಹೆಣ್ಣುಮಕ್ಕಳು : ನಮ್ಮ ತಾಯಿ ತಂಗಿಯರು, ಅಮ್ಮ ಅಕ್ಕಂದಿರು, ಮಡದಿ ಮಕ್ಕಳು. ಹಾಗೆ ವಿಚಾರಿಸಿ ನೋಡಿದರೆ ಅವರದೇ ನಿಜವಾದ ಕಾವ್ಯ. ಉಳಿದುದು ಕಾವ್ಯದ ಛಾಯೆ" ಎಂದು ವಿವರಿಸುತ್ತ "ಬೀದರ ಹೈದ್ರಾಬಾದಗಳ ಉತ್ತರದ ತುದಿಯಿಂದ ನೀಲಗಿರಿ ಕೊಯಿಮತ್ತೂರಿನ ದಕ್ಷಿಣದ ತುದಿಯವರೆಗೆ ಹಬ್ಬಿರುವ ಕರ್ನಾಟಕವು ಒಂದೆಂಬುದಕ್ಕೆ ಒಂದು ನಿದರ್ಶನ ಈ ಹಾಡುಗಳಲ್ಲಿದೆ" ಎಂದು ಕನ್ನಡ ಕರುಳನುಡಿ ದಾಂಗುಡಿಯಿಟ್ಟು ಹಬ್ಬಿದ ರೀತಿಯನ್ನು ಗುರುತಿಸಿದರು.

'ಗರತಿಯ ಹಾಡು'ಗಳಿಗೆ ಹರಕೆಯಿತ್ತ ಮಾಸ್ತಿ "ಈ ಪದಗಳ ಸಮುಚ್ಚಯವು.... ಕನ್ನಡ ನುಡಿಯ ಗೆಲವಿನ ಕಳೆ, ಕನ್ನಡದ ಹೊಸ ಕವಿತೆಯ ಪೈರಿಗ್ ರಸ" ಎಂದು ವಿವೇಚಿಸಿದರು.

ಈ ಕೃತಿ ಕುರಿತು 'ಅರಿಕೆ' ಮಾಡಿಕೊಂಡ ಸಿಂಪಿ ಲಿಂಗಣ್ಣ, "ಇದು ಜೀವನದ ಜೀವಾಳವಾಗಿದೆ; ಸುಖದ ಸೆಲೆಯಾಗಿದೆ" ಎಂದು ನುಡಿದಿದ್ದಾರೆ.

ಕರುಳನ್ನು ಮಿಡಿಯುವ ಈ ಹಾಡು ಕನ್ನಡ ಸಂಸ್ಕೃತಿ ಪರಂಪರೆಯ ವಂಶವಾಹಿ ಸಂಪತ್ತು ಎಂದು ಮನಗಂಡ ಅನೇಕ ಪ್ರತಿಭಾವಂತರು 'ಗರತಿಯ ಹಾಡು' ಕುರಿತು ಗಂಭೀರವಾಗಿ ಚರ್ಚಿಸಿದರು. ಈ ಸಂಕಲನದ ಕನ್ನಡ ಜನಪದ ಹಾಡುಗಳ-ತ್ರಿಪದಿ-ಒಂದು ಅತ್ಯುತ್ತಮ ಸಂಕಲನವಾಗಿದ್ದು ಇದು ಜನಪದ ಸಾಹಿತ್ಯ ಕ್ಷೇತ್ರದ ಆಕಸ್ಮಿಕವಾಗಿರದೆ ಕನ್ನಡ ಜನಾಂಗದ ಉದಾತ್ತ ಜೀವನ-ಸಾಧನೆಯ ಬತ್ತದ ಪ್ರೀತಿವಾತ್ಸಲ್ಯಗಳ ಚಿಲುಮೆಯಾಗಿದೆ. ಚೆಲುವು ಒಲವುಗಳ ಸಹಜ ಸ್ರೋತವಾಗಿದೆ. 'ಗರತಿಯ ಹಾಡು', 'ಜೀವನ ಸಂಗೀತ', 'ಮಲ್ಲಿಗೆದಂಡೆ', 'ಜನಾಂಗದ ಜೀವಾಳ' ಕೃತಿಗಳು ಕನ್ನಡ ಜಾನಪದ ಅಧ್ಯಯನ ಚಿಂತನೆಗಳ ಪ್ರಾಥಮಿಕ ಹಂತದ ದಿಗ್ದರ್ಶಿ ಹೆಜ್ಜೆಗಳಾಗಿದ್ದರೆ, ವರ್ತಮಾನ ಕಾಲದ ಜಾನಪದ ಅಧ್ಯಯನದ ವಿವೇಚನೆ ವಿಶ್ಲೇಷಣೆಗಳಿಗೆ ಅಪೂರ್ಣ ಆಕರ ಸಾಮಗ್ರಿಗಳು ಆಗಿವೆ. ಇದು ಹಲಸಂಗಿ; ಹಲಸಂಗಿ ಗೆಳೆಯರು ಮತ್ತು ಅಂದಿನ ಜಾನಪದ ಚಟುವಟಿಕೆಗಳ ಒಂದು ಸ್ಥೂಲ ನೋಟ.

# ಹಲಸಂಗಿ ಗೆಳೆಯರು – ಮಧುರಚೆನ್ನ

○ ಡಾ|| ಮೃತ್ಯುಂಜಯ ಹೊರಕೇರಿ

ಕನ್ನಡ ಸಾಹಿತ್ಯದಲ್ಲಿ ಸಾಮೂಹಿಕವಾಗಿ ಸಾಹಿತ್ಯ ಸೃಷ್ಟಿಸುವುದು ಹೊಸತೇನಲ್ಲ. ಶಿವಶರಣರು, ದಾಸರು, ನೂರೊಂದು ವಿರಕ್ತರು, ನವೋದಯ, ಪ್ರಗತಿಶೀಲ-ನವ್ಯ-ದಲಿತ ಬಂಡಾಯ ಹೀಗೆ ವಿವಿಧ ಧೋರಣೆಯ ಸಾಹಿತ್ಯ ಪಂಥಗಳು ಒಂದೇ ಸ್ವಭಾವದವರು ಒಂದೆಡೆ ಸೇರಿ ತಮ್ಮ ಒಳತುಡಿತವನ್ನು ಹೊರಗಿಟ್ಟ ಒಂದೊಂದು ಗುಂಪುಗಳಾಗಿವೆ. ಕನ್ನಡದ ನವೋದಯ ಸಾಹಿತ್ಯದಾರಂಭ ಕಾಲಕ್ಕೂ ಅಲ್ಲಲ್ಲಿ ಸಾಹಿತ್ಯಾಸಕ್ತರ ಗುಂಪುಗಳು ಹುಟ್ಟಿಕೊಂಡವು. ಕನ್ನಡ ಭಾಷಿಕರು ಹರಿದು ಹಂಚಿ ಹೋಗಿದ್ದರೂ ಭಾವನಾತ್ಮಕವಾಗಿ ಒಂದಾಗಿ ಕನ್ನಡದಲ್ಲಿ ಹೊಸ ಸಾಹಿತ್ಯ ಸೃಷ್ಟಿಗೆ ತಾವಿದ್ದಲ್ಲಿಂದಲೇ ಹೊಳಹು ಹಾಕುತ್ತಿದ್ದರು. ಮೈಸೂರಿನಲ್ಲಿ ಬಿ.ಎಂ. ಶ್ರೀಕಂಠಯ್ಯ ಅವರ ನೇತೃತ್ವದಲ್ಲಿ ತಳಿರು ತಂಡ, ಮಂಗಳೂರು ಕಡೆಗೆ ಪಂಜೆ-ಪೈ ಜೋಡಿಯ ಮಿತ್ರಮಂಡಳಿ, ಧಾರವಾಡದತ್ತ ಬೇಂದ್ರೆಯವರ ಹಿರಿತನದಲ್ಲಿ ಗೆಳೆಯರ ಗುಂಪು ಪ್ರಮುಖವಾದವುಗಳು. ನೂತನ ಸಾಹಿತ್ಯ ಸೃಷ್ಟಿಯಲ್ಲಿ ಪ್ರಾದೇಶಿಕ ಭಾಷಾ ವೈಶಿಷ್ಟ್ಯ ಮೆರೆದ ಈ ಗುಂಪುಗಳ ಸಾಧನೆ ಅಪೂರ್ವವಾದುದು. ಇದೇ ಕಾಲಕ್ಕೆ ಗ್ರಾಮೀಣ ಪರಿಸರದಲ್ಲಿ ಹುಟ್ಟಿಕೊಂಡು ಅನುಪಮ ಸೇವೆ ಸಲ್ಲಿಸಿದ ಕೀರ್ತಿ ಹಲಸಂಗಿ ಗೆಳೆಯರ ಗುಂಪಿಗೆ ಸಲ್ಲುತ್ತಿದೆ. ಈ ಗುಂಪು ಧಾರವಾಡದ ಗೆಳೆಯರ ಗುಂಪಿಗೆ ಸಂಲಗ್ನತ ಪಡೆದಿತ್ತೆಂದು ಹೇಳಬಹುದು.

ಭಾರತದ ಸ್ವಾತಂತ್ರ್ಯ ಸಂಗ್ರಾಮ-ಕರ್ನಾಟಕದ ಏಕೀರಣದಂಥ ಮಹತ್ವ ಪೂರ್ಣ ಚಟುವಟಿಕೆಗಳ ಮಧ್ಯದಲ್ಲಿಯೇ ಸಾಹಿತ್ಯೋದ್ದೇಶವನಿಟ್ಟುಕೊಂಡು ಹುಟ್ಟಿ ಕೊಂಡ ಈ ಗುಂಪುಗಳ ಗುರಿ ಹೊಸ ಸಾಹಿತ್ಯವೊಂದನ್ನು ಸೃಷ್ಟಿಸುವುದಾಗಿತ್ತು. ಪಾಶ್ಚಾತ್ಯ ಸಾಹಿತ್ಯ ಮಾದರಿಗಳನ್ನು ಅದಕ್ಕೆ ಸಮನಾದ ರೀತಿಯಲ್ಲಿ ತರುವುದಾಗಿತ್ತು. ಅದರಲ್ಲಿ ಯಶಸ್ವಿಯೂ ಆದರು. ಆದರೆ ಹಲಸಂಗಿಯ ಗುಂಪಿನ ಗುರಿ ದಾರಿಗಳೇ ಬೇರೆ. ಹೊಸ ಸಾಹಿತ್ಯ ಸೃಷ್ಟಿಯೊಂದಿಗೆ ಹಳೆಯ ಸಾಹಿತ್ಯದ ರಕ್ಷಣೆಗೂ ಅವರು ಮುಂದಾದರು. ಇದೇ ಅವರ ವೈಶಿಷ್ಟ್ಯ. ಈ ಗುಂಪಿನ ಮೂಲಪುರುಷರೆಂದರೆ ಮಧುರಚೆನ್ನರು.

ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಹಲಸಂಗಿ ಜಾನಪದ ವಲಯದಲ್ಲಿ ಕರ್ನಾಟಕದ ಫಿನ್‌ಲ್ಯಾಂಡ್ ಎಂದೇ ಹೆಸರಾಗಿದೆ. ಮಧುರಚೆನ್ನ ಎಂಬ



ಕಾವ್ಯನಾಮದ ಮೂಲಕ ಖ್ಯಾತರಾದ ಚೆನ್ನಮಲ್ಲಪ್ಪ ಸಿದ್ಧಲಿಂಗಪ್ಪ ಗಲಗಲಿಯವರು 31-7-1903ರಂದು ಜನಿಸಿದರು. ತಂದೆ ಸಿದ್ಧಲಿಂಗಪ್ಪ ತಾಯಿ ಅಂಬಕ್ಕ. ಹುಟ್ಟಿದ್ದು ತಾಯಿಯ ಸೋದರತ್ತೆ ಊರಾದ ಲೋಣಿಯಲ್ಲಿ. ಹಲಸಂಗಿಯ ಗಲಗಲಿ ಮನೆತನದವರು ದೊಡ್ಡ ಸಾಹುಕಾರರು. ಹಲವಾರು ಕಾರಣಗಳಿಂದಾಗಿ ಮಧುರಚೆನ್ನರು ಹುಟ್ಟುವ ಕಾಲಕ್ಕೆ ಆ ಮನೆ ಬಡತನಕ್ಕೀಡಾಯಿತು. ಸಿದ್ಧಲಿಂಗಪ್ಪ ತಾರುಣ್ಯದಲ್ಲಿರುವಾಗಲೇ ಕ್ಷಯರೋಗಕ್ಕೀಡಾದರು. ತಾಯಿ ಅಂಬಕ್ಕನ ಆಶ್ರಯ ದಲ್ಲಿಯೇ ಮಧುರಚೆನ್ನರು ಬೆಳೆದರು.

ಬಾಲ್ಯದಲ್ಲಿಯೇ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಮಧುರಚೆನ್ನರ ಅಭ್ಯಾಸದ ಕ್ರಮ ಕುರಿತು ಡಾ|| ಕಾಪಸೆಯವರು ಹೀಗೆ ಹೇಳಿದ್ದಾರೆ. "ಮಧುರ ಚೆನ್ನರು ಹಳ್ಳಿಯ ಶಾಲೆಯ ವಿದ್ಯಾರ್ಥಿಯಾಗಿದ್ದರೂ ಅವರ ವಿದ್ಯಾರ್ಥಿ ಜೀವನ ವೈಶಿಷ್ಟ್ಯಪೂರ್ಣವಾಗಿತ್ತು. ಒಂದು ಮಾತಿನಲ್ಲಿ ಹೇಳುವುದಾದರೆ ಪದವಿ ಇಲ್ಲವೆ ಸ್ನಾತಕೋತ್ತರ ಪರೀಕ್ಷೆಗೆ ಅಭ್ಯಸಿಸುವ ವಿದ್ಯಾರ್ಥಿಯಂತೆ ಅವರ ಅಭ್ಯಾಸದ ಕ್ರಮವಿತ್ತು. ಪಠ್ಯ-ಪಠ್ಯೇತರ ಪುಸ್ತಕಗಳಿಂದ ವಿಷಯವನ್ನು ಸಂಗ್ರಹಿಸುವುದು, ಚಿಕಿತ್ಸಕ ಹಾಗೂ ಸಂಶೋಧಕ ಬುದ್ಧಿಯಿಂದ ಪರಿಶೀಲಿಸುವುದು, ತಮ್ಮದೇ ಆದ ರೀತಿಯಲ್ಲಿ ಸ್ವತಂತ್ರ ಟಿಪ್ಪಣಿಗಳನ್ನು ಸಿದ್ಧಪಡಿಸಿಕೊಳ್ಳುವುದು. ಹೀಗೆ ಅವರು ಅನುಕರಣೀಯವಾಗುವಂತೆ ಅಭ್ಯಾಸ ಮಾಡಿದ್ದಾರೆ."[1] ಹೀಗೆ ಅಭ್ಯಾಸ ಮಾಡಿ ಮುಲ್ಕಿ ಪರೀಕ್ಷೆಯಲ್ಲಿ ಮುಂಬೈ ಕರ್ನಾಟಕಕ್ಕೆ ಮೊದಲಿಗರಾಗಿ ಪಾಸಾದರು.

ಹೆಚ್ಚಿನ ವಿದ್ಯಾಭ್ಯಾಸದ ಬಯಕೆಯಿದ್ದರೂ ತಾಯಿಯ ಅಕ್ಕರೆಯ ಅಣತಿಯಂತೆ ಮಧುರಚೆನ್ನರು ಊರು ಬೀಡುವುದಾಗಲಿಲ್ಲ ಆದರೂ ವಿಜಾಪುರಕ್ಕೆ ಕೆಲ ಕಾಲ ಬಂದು ಇಂಗ್ಲೀಷ್ ಕಲಿತರು. ಆ ವೇಳೆಗಾಗಲೇ ಅವರಲ್ಲಿ ಆಧ್ಯಾತ್ಮಿಕ ಸಾಹಿತ್ಯಕ ಒಲವುಗಳು ಹುಟ್ಟಿಕೊಂಡವು.

ಮಧುರಚೆನ್ನರು ಹದಿಹರೆಯದಲ್ಲಿಯೇ ಸಂಸಾರಿಕರಾದರು. ಸಂಸಾರಿಕ ರಾದರೂ ಆಧ್ಯಾತ್ಮಿಕದತ್ತ ಅವರಿಗಿರುವ ಹಂಬಲ ಕಡಿಮೆಯಾಗಲಿಲ್ಲ. ತತ್ತ್ವಾಭ್ಯಾಸವನ್ನು ಆರಂಭಿಸಿದರು. ಅವರ ಅಧ್ಯಯನ-ಜೀವನಾನುಭವಗಳು ಅಭಿವ್ಯಕ್ತಿಗೆ ಅವರು ಕಾವ್ಯ ಮಾಧ್ಯಮವನ್ನು ಹುಡುಕಿಕೊಂಡು ಆ ಮೂಲಕ ಅನುಭಾವಿ ಕವಿಗಳೆನಿಸಿದರು. ಇದರೊಂದಿಗೆ ಸಂಶೋಧನೆ-ಜಾನಪದ ಸಾಹಿತ್ಯದ ಕಡೆಗೂ ಅವರ ಗಮನ ಹರಿಯಿತು. ಸಂಸಾರ, ಸಾಹಿತ್ಯ, ಸಂಶೋಧನೆ, ಜಾನಪದ ಆಸಕ್ತಿ, ಆಧ್ಯಾತ್ಮ ಅವರ ಜೀವನದ ಗುರಿಗಳಾದವು. ಇದರೊಂದಿಗೆ ಪ್ರಮುಖವಾದ ಇನ್ನೊಂದು ಅಂಶವೆಂದರೆ ಮಧುರಚೆನ್ನರು ಸ್ನೇಹಮಯಿ ಜೀವಿಗಳಾದುದರಿಂದ

1. ಮಧುರಚೆನ್ನ ಜೀವನ ಹಾಗೂ ಕೃತಿಗಳ ಸಮೀಕ್ಷೆ, ಪು-17 ಡಾ|| ಜಿ. ಎಸ್. ಕಾಪಸೆ

ಗ್ರಾಮಾಂತರ ಪ್ರದೇಶದಲ್ಲಿ ಸಾಹಿತ್ಯಕ ಸಾಂಸ್ಕೃತಿಕ ಆಧ್ಯಾತ್ಮಿಕ ಒಲವಿನ ಸ್ನೇಹಿತರ ಒಂದು ಗುಂಪನ್ನು ಕಟ್ಟಿದರು. ಅದೇ 'ಹಲಸಂಗಿ ಗೆಳೆಯರ ಗುಂಪು' ಎಂದು ಹೆಸರಾಗಿದೆ. ಈ ಗುಂಪಿಗೆ ಮಧುರಚೆನ್ನರು ನೇತಾರರು.

ಮಧುರಚೆನ್ನರ ಗೆಳೆಯರ ಬಳಗವೇ ಹಲಸಂಗಿ ಗೆಳೆಯರ ಗುಂಪು ಎಂದು ಸಾಹಿತ್ಯ ಕ್ಷೇತ್ರದಲ್ಲಿ ಹೆಸರಾಗಿದೆ. ಪಿ. ಧೂಲಸಾಹೇಬರಂಥ ಮುಸ್ಲಿಮರು, ಓಲೆಕಾರ ಮಧುಲಿಂಗರಂಥ ದಲಿತರು, ಕಾಪಸೆ ರೇವಪ್ಪನವರು, ಸಿಂಪಿ ಲಿಂಗಣ್ಣ ನವರು ಇವರಿಗೆಲ್ಲಾ ನಾಯಕರಾದ ಮಧುರಚೆನ್ನರು–ಈ ಪಂಚಪಾಂಡವರ ಗುಂಪು ಪಾಂಡವರಂತೆ ಒಟ್ಟಾಗಿ ಗಟ್ಟಿಗೊಂಡ ಸ್ನೇಹಬಂಧುತ್ವದ ಗುಂಪಾಗಿದೆ. ಈ ಗುಂಪಿನಲ್ಲಿ ಧೂಲಾಸಾಹೇಬರು ಹಿರಿಯರಾದರೆ ರೇವಪ್ಪನವರು ಕಿರಿಯರು. ಈ ಗುಂಪಿಗೆ ಜಾತಿಯ ಸೋಂಕಿಲ್ಲ. ವಯಸ್ಸಿನ ಹಿರಿ-ಕಿರಿಗಳೆಂಬ ಕಿರಿಕಿರಿಗಳಿಲ್ಲ. ಎಲ್ಲರೂ ಸಮಾನ ಮನಸ್ಕರು. ಎಲ್ಲರೂ ಹಳ್ಳಿಗರು. ಎಲ್ಲಾ ಜೋಳದ ರೊಟ್ಟಿ ತಿಂದವರೇ. ಈ ಗುಂಪು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಎಂಥ ಅದ್ಭುತ ಪವಾಡವನ್ನೆ ಸಗಿದೆಯೆಂಬುದನ್ನು ನೆನಸಿಕೊಂಡರೆ ಮೈಮನಗಳು ಪುಳಕಿತಗೊಳ್ಳುತ್ತಿವೆ. ಇವರೆಲ್ಲಾ ಮಾಡಿದ ಕಾರ್ಯ ನಮಗಿಂದು ಸಂಶೋಧನೆಯ ವಿಷಯವಾಗಿದೆ. ಈ ಗುಂಪಿನಲ್ಲಿ ಮಧುರಚೆನ್ನರ ಪಾತ್ರವೇನೆಂಬುದನ್ನು ಪರಿಶೀಲಿಸೋಣ.

ಮಧುರಚೆನ್ನರು ಬಹಳ ಸ್ನೇಹಪರರು. ಎಳೆತನದಲ್ಲಿ ಗೆಳೆತನ ಕಟ್ಟಿದ ಅವರ ಗೆಳೆಯರ ಬಳಗ ಬೆಳೆಯುತ್ತಲೇ ನಡೆಯಿತು. ಹಲಸಂಗಿಯವರಾದ ಧೂಲಾ ಸಾಹೇಬ, ಓಲೆಕಾರ ಮಧುಲಿಂಗ, ಕಾಪಸೆ ರೇವಪ್ಪ ಇವರೊಂದಿಗೆ ಚಡಚಣದ ಸಿಂಪಿ ಲಿಂಗಣ್ಣನವರು ಮಧುರಚೆನ್ನರ ಮಧುರ ಸ್ನೇಹದ ಪ್ರಭಾವಕ್ಕೊಳಗಾದರು. ವಿಜಾಪುರದ ಬಸಣ್ಣ ಅಕ್ಕಿ ಪದ್ಮರಾಜ ಹುನಗುಂದರು ಇದರಲ್ಲಿ ಸೇರುತ್ತಾರೆ. ಹಲಸಂಗಿಯ ಗುಂಪು ಧಾರವಾಡದ ಗುಂಪಿನ ಗೆಳೆಯರ ಸಖ್ಯವನ್ನು ಪಡೆಯಿತು. 1923ರ ಸುಮಾರಿಗೆ ಉದಯಿಸಿದ ಈ ಎರಡೂ ಗುಂಪುಗಳು ಬೇಂದ್ರೆ-ಮಧುರಚೆನ್ನರ ಸ್ನೇಹ-ಸಂಪರ್ಕಗಳಿಂದ ಹೆಚ್ಚಿನ ಸಾಮರಸ್ಯ ಬೆಳೆಸಿಕೊಂಡವು. ಇವೆರಡು ಗುಂಪುಗಳ ಉದ್ದೇಶವನ್ನು ಹೀಗೆ ಸಂಗ್ರಹಿಸಿ ಹೇಳಲಾಗಿದೆ. "ಕನ್ನಡಿಗರು ಕನ್ನಡ ನಾಡನ್ನು ಎಚ್ಚರಿಸುವುದು, ನಮ್ಮ ಉಜ್ವಲ ಸಂಸ್ಕೃತಿಯನ್ನು ಪುನರುಜ್ಜೀವನ ಗೊಳಿಸುವುದು ; ಸಾಹಿತ್ಯಕ್ಕೆ ನವೀನ ಚೈತನ್ಯವನ್ನು ತಂದು ಕೊಡುವುದು ; ಆಧ್ಯಾತ್ಮಿಕ ಭೂಮಿಕೆಯ ಮೇಲೆ ನಾಡನ್ನು ಕಟ್ಟುವುದು ; ರಾಷ್ಟ್ರಕಾರ್ಯದಲ್ಲಿಯೂ ಪಾಲುಗೊಳ್ಳುವುದು"[2]–ಈ ಮುಂತಾದ ಉದ್ದೇಶಗಳನ್ನಿರಿಸಿಕೊಂಡು ಈ ಗುಂಪುಗಳು ಮುಂದುವರಿದವು. ಈ ಗುಂಪುಗಳಿಗೆ ಗಾಂಧಿ, ರವೀಂದ್ರನಾಥ, ಅರವಿಂದರು

2. ಮಧುರಚೆನ್ನ ಜೀವನ ಹಾಗೂ ಕೃತಿಗಳ ಸಮೀಕ್ಷೆ, ಪು-124 ಡಾ॥ ಜಿ. ಎಸ್. ಕಾಪಸೆ



ಮೂಲ ಪ್ರೇರಣೆಯ ಮಹಾಪುರುಷರು. "ಗಾಂಧಿಯವರ ರಾಷ್ಟ್ರಜೀವನ, ರವೀಂದ್ರರ ಕಾವ್ಯಜೀವನ, ಅರವಿಂದರ ಆಧ್ಯಾತ್ಮಿಕ ಜೀವನ ಈ ಮೂರರ ಮುಪ್ಪರಿಯಲ್ಲಿ ಗೆಳೆಯರು ತಮ್ಮ ಜೀವನದ ಸಾರ್ಥಕ್ಯವನ್ನು ಕಂಡುಕೊಳ್ಳುವ ಹಂಬಲವುಳ್ಳವರಾಗಿದ್ದರು. ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಜಿ. ಕೃಷ್ಣಮೂರ್ತಿ ಈ ಮುಂತಾದ ಮಹಾನುಭಾವರ ಉಪದೇಶಗಳು, ಶರಣರ, ದಾಸರ, ತೀರ್ಥಂಕರರ ಜೀವನಾದರ್ಶಗಳು ಅವರಿಗೆ ಪ್ರಿಯವಾಗಿದ್ದವು"[3]. ಈ ನಿಟ್ಟಿನಲ್ಲಿ ಸಾಗಿ ಬಂದ ಧಾರವಾಡ ಹಾಗೂ ಹಲಸಂಗಿ ಗುಂಪುಗಳಲ್ಲಿ ಧಾರವಾಡದ ಗುಂಪು ಎರಡು ದಶಕಗಳ ತರುವಾಯ ಕರಗುತ್ತ ಬಂದರೆ ಹಲಸಂಗಿ ಗುಂಪು ಗಟ್ಟಿ ಗೊಳ್ಳುತ್ತ ಬಂದಿತು. "ಮಾನವ ಸಹಜವಾದ ವೈಮನಸ್ಸು ಆಗೀಗ ಅವರಲ್ಲಿ ಉಂಟಾಗುತ್ತಿದ್ದರೂ ಅವರೆಲ್ಲ ಉದಾತ್ತ ಧ್ಯೇಯವಾದಿಗಳಾದ್ದರಿಂದ ಅವನ್ನು ಮೀರಿ ನಿಂತು ಕೆಲಸ ಮಾಡಿದ್ದಾರೆ. ತಮ್ಮ ತಮ್ಮ ಭಾವನೆಯ ಓರೆ-ಕೋರೆಗಳನ್ನು ತಿದ್ದಿ ಕೊಂಡು ಹೊಂದಿಕೊಂಡು ಬಾಳಿದ್ದಾರೆ. ಇದಕ್ಕೆ ಮಧುರಚೆನ್ನರ ತಾತ್ವಿಕ ದೃಷ್ಟಿಯೇ ಬೆಂಗಾವಲಾಗಿತ್ತೆಂದು ಹೇಳಬಹುದು".[4] ಸಾಹಿತ್ಯ ಹಾಗೂ ತತ್ವ ಚಿಂತನಗಳೇ ಈ ಗೆಳೆಯರನ್ನು ಹಿಡಿದಿಟ್ಟವು. ಮಧುರಚೆನ್ನರ ಅನುಭಾವಿ ಜೀವನಾದರ್ಶವೂ ಸ್ನೇಹಮಯ ಪರಿಸರವನ್ನು ಪರಿಶುದ್ಧವಾಗಿರಿಸಿತು.

ಪಾಂಡಿಚೇರಿಯ ಅರವಿಂದರ ಪ್ರಭಾವಕ್ಕೊಳಗಾದ ಮಧುರಚೆನ್ನರು ತಮ್ಮ ಗೆಳೆಯರ ಗುಂಪನ್ನು 'ಅರವಿಂದ ಮಂಡಲ'ವನ್ನಾಗಿ ಮಾರ್ಪಡಿಸಿದರು. ಹಲಸಂಗಿ ಸುತ್ತಮುತ್ತಲಿನ ಊರುಗಳಾದ ಚಡಚಣ, ಸಾಲೋಟಗಿ ಇಂಡಿ ಅಥರ್ಗಾ ಮತ್ತು ವಿಜಾಪುರದಂಥ ಪಟ್ಟಣದಲ್ಲಿ ಮಧುರಚೆನ್ನರ ಗೆಳೆಯರು ಸಾಕಷ್ಟಿದ್ದು ಅವರೆಲ್ಲರೂ ಅರವಿಂದ ಮಂಡಲ ಮತ್ತು ಮಧುರಚೆನ್ನರ ಸಂಪರ್ಕ-ಸ್ನೇಹ ಸಾನ್ನಿಧ್ಯ ಹೊಂದಿದ ವರಾಗಿದ್ದರು. ಈ ಗೆಳೆಯರ ಗುಂಪು ಕನ್ನಡ ಸಾಹಿತ್ಯಕ್ಕೆ ಅನುಪಮ ಸೇವೆ ಸಲ್ಲಿಸಿತು.

1922ರಲ್ಲಿ ಸ್ಥಾಪಿಸಿದ ಶಾರದಾ ವಾಚನಾಲಯ ಹಲಸಂಗಿ ಗೆಳೆಯರು ಗ್ರಾಮೀಣ ಜನರ ಜ್ಞಾನಾಭಿವೃದ್ಧಿಗೆ ನೀಡಿದ ಕೊಡುಗೆಯಾಗಿದೆ. ಮೊಗ್ಗು ಎಂಬ ಕೈಬರಹದ ಸಾಪ್ತಾಹಿಕ ವಿಶ್ವಾಮಿತ್ರ ಎಂಬ ಕೈಬರಹದ ತ್ರೈಮಾಸಿಕಗಳು ಮಧುರ ಚೆನ್ನರು ಹುಟ್ಟು ಹಾಕಿದ ಪತ್ರಿಕೆಗಳಾಗಿದ್ದು ಅವು ಹಲಸಂಗಿ ಗೆಳೆಯರಿಗೆ ಸ್ಫೂರ್ತಿಯ ನ್ನೊದಗಿಸಿದವು. ಮಲ್ಲಿಕಾರ್ಜುನ ದೇವರ ಜಾತ್ರೆ, ಗಣೇಶೋತ್ಸವಗಳನ್ನು ಸಾಂಸ್ಕೃತಿಕ ಉತ್ಸವಗಳನ್ನಾಗಿ ಪರಿವರ್ತಿಸಿದ ಕೀರ್ತಿ ಮಧುರಚೆನ್ನರದು.

3. ಮಧುರಚೆನ್ನ ಜೀವನ ಹಾಗೂ ಕೃತಿಗಳ ಸಮೀಕ್ಷೆ, ಪು. 125 ಡಾ॥ ಜಿ. ಎಸ್. ಕಾಪಸೆ

4. ಅದೇ. ಪು. 125

ರಾಮಕೃಷ್ಣ ಪರಮಹಂಸರ ಶತಸಾಂವತ್ಸರಿಕೋತ್ಸವವನ್ನು ಹಳ್ಳಿಯಲ್ಲಿ ಆಚರಿಸಿದ ಹಿರಿಮೆ ಹಲಸಂಗಿ ಗೆಳೆಯರ ಗುಂಪಿನದಾಗಿದೆ. ವಿಜಯನಗರ ಉತ್ಸವ, ನಾಡಹಬ್ಬಗಳನ್ನು ಆಚರಿಸಿ ನಾಡಿನ ಅಭಿಮಾನ ಮೆರೆದಿದ್ದಾರೆ. ಅನಂತರ ಶ್ರೀ ಅರವಿಂದ ಮಂಡಳಿ ಸ್ಥಾಪಿಸಿ ಶ್ರೀ ಅರವಿಂದ ಹಾಗೂ ಶ್ರೀ ಮಾತೆಯರ ತತ್ತ್ವಗಳನ್ನು ಪ್ರಚಾರ ಪಡಿಸುವ ಕಾರ್ಯ ಆರಂಭವಾಯಿತಲ್ಲದೇ ವಿಜಾಪುರ ಜಿಲ್ಲೆಯಲ್ಲಿ ಅರವಿಂದರ ಭಕ್ತರನ್ನು ಹೆಚ್ಚಿಸಿದ ಸಾಧನೆ ಮಧುರಚೆನ್ನರದು. ಮಧುರಚೆನ್ನರ ನಿಧನಾನಂತರ 1972ರಲ್ಲಿ ಹಲಸಂಗಿಯಲ್ಲಿ ಶ್ರೀ ಅರವಿಂದರ ಕಲಶದ ಪ್ರತಿಷ್ಠಾಪನೆಯಾಗಿ ಹಲಸಂಗಿ ಒಂದು ಪವಿತ್ರ ಸ್ಥಳವಾಗಿ ಬೆಳೆಯುವಂತಾಯಿತು. ಹೀಗೆ ಸಾಂಸ್ಕೃತಿಕ-ಆಧ್ಯಾತ್ಮಿಕ ಸಾಧನೆ ಹಲಸಂಗಿ ಗೆಳೆಯರ ಗುಂಪಿನದಾಗಿದ್ದು ಇದರಲ್ಲಿ ಮಧುರಚೆನ್ನರ ಪಾತ್ರ ಪ್ರಮುಖವಾದುದು.

ಜಾನಪದ ಕ್ಷೇತ್ರಕ್ಕೆ ಹಲಸಂಗಿ ಗೆಳೆಯರು ನೀಡಿದ ಕಾಣಿಕೆ ಈಗಾಗಲೇ ನಾಡಿನಾದ್ಯಂತ ಪ್ರಚಾರಗೊಂಡಿದೆ. ಜಾನಪದ ಸಾಹಿತ್ಯಾಧ್ಯಯನ ನಡೆಸಿದವರಲ್ಲಿ ಪಾಶ್ಚಾತ್ಯ ವಿದ್ವಾಂಸರೇ ಮೊದಲಿಗರು. ಆದರೆ ಕನ್ನಡದಲ್ಲಿ ಮೊದಲಿಗರಾರು ಎಂಬುದರ ಬಗೆಗೆ ಸಾಕಷ್ಟು ಚರ್ಚೆ ನಡೆದಿದೆ. ಪಂಪನಿಗಿಂತಲೂ ಹಿಂದೆ ಕನ್ನಡದಲ್ಲಿ ಸಾಹಿತ್ಯ ಸೃಷ್ಟಿ ನಡೆದಿದೆಯಾದರೂ ಪಂಪನೇ ನಮಗೆ ಆದಿಕವಿ. ಹಾಗೆಯೇ ಹಲಸಂಗಿ ಗೆಳೆಯರಿಗಿಂತಲೂ ಮೊದಲಿಗ ಕನ್ನಡದಲ್ಲಿ ಜಾನಪದ ಅಧ್ಯಯನ ಆರಂಭಿಸಿದವರು ಇರಬಹುದಾದರೂ ಹಲಸಂಗಿಯ ಗೆಳೆಯರೇ ಜಾನಪದ ಸಾಹಿತ್ಯ ಸಂಗ್ರಹದಲ್ಲಿ ಆದ್ಯರೆಂಬುದನ್ನು ಯಾರೂ ಅಲ್ಲಗಳೆಯಲಿಕ್ಕಾಗದು. 1931ರಲ್ಲಿ ಪ್ರಕಟಿಸಿದ 'ಗರತಿ ಹಾಡು' ಎಂಬ ಕೃತಿಗೆ ಇರುವ ಮನ್ನಣೆ, ಪ್ರಸಿದ್ಧಿ ಪ್ರಾತಿನಿಧಿಕತೆ ಈವರೆಗೆ ಇನ್ನೊಂದು ಕೃತಿಗೆ ಈವರೆಗೂ ಲಭಿಸಿಲ್ಲ. ಅಂಥ ಕೃತಿ ಸಂಗ್ರಹಕೃತಿ ನೀಡಿದ ಹಲಸಂಗಿ ಗೆಳೆಯರ ಸಾಧನೆಯ ಹಿಂದೆ ಮಧುರಚೆನ್ನರ ನೆರವಿದೆ. ಅದೇ ಗೆಳೆಯರ ಗುಂಪಿನ ಮೂಲಕ ಹೊರಬಂದ ಸಿಂಪಿ ಲಿಂಗಣ್ಣ ಮತ್ತು ಪಿ. ಧೂಲಾ ಸಾಹೇಬರು ಸಂಗ್ರಹಿಸಿದ ಜೀವನ ಸಂಗೀತ (1933) ಕಾಪಸೆ ರೇವಪ್ಪನವರಿಂದ ಸಂಗ್ರಹಿತವಾದ ಮಲ್ಲಿಗೆ ದಂಡೆ. (1935) ಕೃತಿಗಳ ಹಾಡುಗಳ ಸಂಗ್ರಹದಲ್ಲಿ ಮಧುರಚೆನ್ನರ ದುಡಿಮೆ ಇದ್ದೇ ಇದೆ. ಈ ಗೆಳೆಯರ ಗುಂಪಿನ ಮೂಲಕ ಮೇಲೆದ್ದ ಸಿಂಪಿ ಲಿಂಗಣ್ಣನವರು ಜಾನಪದ ಸಾಹಿತ್ಯವನ್ನು ವಿಮರ್ಶಿಸಿ ಗರತಿಯ ಬಾಳು, ಜನಾಂಗ ಜೀವಾಳ ಎಂಬ ಕೃತಿಗಳನ್ನು ಪ್ರಕಟಿಸಿದರು. ಸಿಂಪಿ ಲಿಂಗಣ್ಣನವರ ಮುಂದುವರಿಕೆಗೆ ಮಧುರಚೆನ್ನರು ಕಾರಣೀಭೂತರಾಗಿದ್ದಾರೆ. "ಮಧುರಚೆನ್ನರು ಜನಪದ ಸಾಹಿತ್ಯದ ಭೂಮಿಯನ್ನು ಉತ್ತಿ-ಬಿತ್ತಿ ಬೆಳೆಯುವ ಕಾರ್ಯ ಮಾಡಿದರೆ ಲಿಂಗಣ್ಣನವರು ಅದನ್ನು ಕುಯ್ದು ರಾಶಿ ಮಾಡುವ ಕಾರ್ಯ ಮಾಡಿದರೆಂದು



ಹೇಳಬಹುದು"[5] -ಎಂಬ ಡಾ॥ ಕಾಪಸೆಯವರ ಮಾತಿನಲ್ಲಿ ಸತ್ಯವಿದೆ. ಹಲಸಂಗಿ ಗೆಳೆಯರು ಪ್ರಕಟಿಸಿದ ಈ ಮೂರು ಕೃತಿಗಳು ಮುಂದೆ ಜಾನಪದ ಸಾಹಿತ್ಯ ಸಂಗ್ರಹ ಕಾರ್ಯಕ್ಕೆ ನಾಂದಿ ಹಾಡಿದವೆನ್ನಬಹುದು.

ಕನ್ನಡ ಜಾನಪದ ಸಾಹಿತ್ಯ ಸಂಪತ್ತು ಮತ್ತು ಸತ್ವವನ್ನರಿತಿದ್ದ ಮಧುರಚೆನ್ನರು 1923ರಲ್ಲಿ ವಿಜಾಪುರದಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಹಳ್ಳಿಯ ಹಾಡುಗಳು'ನ್ನು ಕುರಿತು ಪ್ರಬಂಧ ಮಂಡಿಸುತ್ತ "ಮಹಾರಾಷ್ಟ್ರದಲ್ಲಿ ಅನಂತಫಂದಿ ಮೊದಲಾದವರ ಲಾವಣಿಗಳು ಅಚ್ಚಾಗಿ ಎಷ್ಟೋ ದಿನಗಳಾದವು. ಬಂಗಾಳದ ಡಾಕಾ ಸಾಹಿತ್ಯ ಪರಿಷತ್ತು ಈ ಕೆಲಸವನ್ನು ಚೆನ್ನಾಗಿ ನೆರವೇರಿಸಿ ಗ್ರಾಮ ಸಾಹಿತ್ಯವನ್ನು ವೃದ್ಧಿಪಡಿಸಿರುವುದಂತೆ. ಆದರೆ ನಮ್ಮ ಕನ್ನಡ ನಾಡಿನಲ್ಲಿ ಇಂತಹ ಪುಸ್ತಕಗಳು ಇನ್ನೂ ಹೊರಬೀಳಲಿಲ್ಲ. ಈಗೀಗ ಕೆಲವು ಪ್ರಕಟವಾಗಿದ್ದರೂ ಅವು ಹಳ್ಳಿಯವರ ಕೃತಿಗಳಲ್ಲ; ಸುಶಿಕ್ಷಿತರು ರಚಿಸಿದಂತಿದೆ. ನಿಜವಾದ ಗ್ರಾಮ ಸಾಹಿತ್ಯವು ಇನ್ನೂ ಅಚ್ಚುಕೂಟ ಕಾಣಲಿಲ್ಲ. ಕನ್ನಡ ವಾಙ್ಮಯದಲ್ಲಿ ಇದೊಂದು ದೊಡ್ಡ ಕೊರತೆಯೇ ಸರಿ"[6] ಎಂದು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಅವರೂ ಸೇರಿದಂತೆ ಹಲಸಂಗಿ ಗೆಳೆಯರು ಮೊದಲಿಗೆ ಅಂಥ ಸಂಗ್ರಹಗೈದು ನಾಡ ಜನರ ಕಣ್ಣು ತೆರೆಯಿಸಿದರು. ಇಂದು ಮಧುರಚೆನ್ನರು ಬದುಕಿದ್ದಿದ್ದರೆ ನಮ್ಮ ಜಾನಪದ ಸಾಹಿತ್ಯ ಸಂಗ್ರಹದ ಸಂಪುಟಗಳನ್ನು ಕಂಡು ಅತ್ಯಾನಂದಗೊಳ್ಳುತ್ತಿದ್ದರು.

ಜಾನಪದಕ್ಕೆ ಸಂಬಂಧಿಸಿದಂತೆ ಮಧುರಚೆನ್ನರ ಕಾರ್ಯ ಸಾಧನೆಗಳನ್ನು ಕುರಿತು ವಿಚಾರಿಸೋಣ. 'ಗರತಿ ಹಾಡು' ಕೃತಿಯ ನಾಲ್ವರು ಸಂಗ್ರಹಕಾರರಲ್ಲಿ ಮಧುರಚೆನ್ನರು ಒಬ್ಬರು ಮತ್ತು ಮೊದಲಿಗರು. ಅನಂತರ ಸಂಗ್ರಹಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಕಾರ್ಯ ಅವರಿಂದಾಗಿಲ್ಲವಾದರೂ ಅವರ ಗುಂಪು ಅದರಲ್ಲಿ ಮುಂದುವರಿಯಿತು. ತಾವು ಸಂಗ್ರಹಿಸಿದ ಅಪ್ರಕಟಿತ ಮೂರುನೂರು ಗಾದೆಗಳ ಬಗೆಗೆ ಹೇಳಿರುವರಾದರೂ ಅವುಗಳ ಪೈಕಿ ಕೇವಲ ಐವತ್ತೊಂದು ಮಾತ್ರ "ಹೆಣ್ಮಕ್ಕಳ ಗಾದೆಗಳು" ಎಂಬ ಹೆಸರಿನಲ್ಲಿ 1936ರಲ್ಲಿ ಜಯ ಕರ್ನಾಟಕದಲ್ಲಿ ಪ್ರಕಟಿಸಿದ್ದು ಉಳಿದ ಗಾದೆಗಳ ಬಗೆಗೆ ಯಾವುದೇ ವಿಚಾರವಿಲ್ಲ.

"ಹಳ್ಳಿಯ ಹಾಡುಗಳು" ಎಂಬ ಪ್ರಬಂಧವನ್ನು 1923ರಲ್ಲಿ ವಿಜಾಪುರದಲ್ಲಿ ಜರುಗಿದ 9ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿಸಿರುವರು. ಕನ್ನಡ ನಾಡಿನ ಹಳ್ಳಿಯ ಸಾಹಿತ್ಯ, ಗಂಡಸರ ಹಾಡುಗಳು, ಹೆಣ್ಣುಮಕ್ಕಳ ಹಾಡುಗಳ ಬಗೆಗೆ ವಿವರಣೆ ಇದೆ. ಈ ಪ್ರಬಂಧದ ಆಶಯಕ್ಕೆ ತಕ್ಕ ರೀತಿಯಲ್ಲಿ ಆಸಕ್ತಿ ವಹಿಸಿ ಜಾನಪದ ಸಾಹಿತ್ಯ

---

5. ಮಧುರಚೆನ್ನ ಜೀವನ ಹಾಗೂ ಕೃತಿಗಳ ಸಮೀಕ್ಷೆ. ಪು. 50 ಡಾ. ಜಿ.ಎಸ್. ಕಾಪಸೆ.
6. ಮಧುರಚೆನ್ನರ ಲೇಖನಗಳು ಪು. 246 ಸಂ: ಗುರುಲಿಂಗ ಕಾಪಸೆ.

ಸಂಗ್ರಹ ಮಾಡಿದ ಕೀರ್ತಿ ಮಧುರಚೆನ್ನರದು. "ಕನ್ನಡ ಸಾಹಿತಿಗಳ ಲಕ್ಷ್ಯವನ್ನು ಜನಪದ ಸಾಹಿತ್ಯದ ಕಡೆಗೆ ತೀವ್ರವಾಗಿ ಹೊರಳುವಂತೆ ಮಾಡಿದ ಲೇಖನವಿದು. ಇಪ್ಪತ್ತು ವರ್ಷದ ಹಳ್ಳಿಯ ಯುವಕ ಇಂಥ ಕಾರ್ಯ ಮಾಡಿದ್ದೇ ಒಂದು ವಿಸ್ಮಯ, ಆದರೂ ಅದು ಐತಿಹಾಸಿಕ ಸತ್ಯ" [7] ಎಂಬ ಪ್ರಶಂಸೆಯನ್ನು ಈ ಲೇಖನ ಪಡೆದಿದೆ. 1934ರಲ್ಲಿ ಜಯ ಕರ್ನಾಟಕದಲ್ಲಿ ಪ್ರಕಟವಾದ 'ರಮ್ಯ ಜೀವನ' ಎಂಬ ಲೇಖನ ಹಲಸಂಗಿ ಲಾವಣಿಕಾರ ದಿವಂಗತ ಖಾಜಾಭಾಯಿಯವರನ್ನು ಕುರಿತು ಬರೆಯಲಾಗಿದೆ. ಹಲಸಂಗಿ ನಾಡಿನಲ್ಲಿ ಆಗಿ ಹೋದ ಇಬ್ಬರು ಲಾವಣಿಕಾರರ ರಮ್ಯ ಜೀವನ ಇದರಲ್ಲಿದೆ. ಹರದೇಶಿ-ನಾಗೇಶಿ ಅಥವಾ ಕಲ್ಗಿ - ತುರಾ ಲಾವಣಿ ಹಾಡುಗಳಲ್ಲಿ ಹದರಿ ಬಡೇಶಾ ಮತ್ತು ಹಲಸಂಗಿ ಖಾಜಾಭಾಯಿ ಎಂಬ ಇಬ್ಬರು ಲಾವಣಿ ಹಾಡುಗಾರರಲ್ಲಿ ಸ್ಪರ್ಧೆ ನಡೆದು ಬಡೇಶಿ ಖಾಜಾಭಾಯಿಗೆ ಸೋತು ಶಿಷ್ಯನಾಗಿ - ಸಂತನಾಗಿ ಜೀವನಮುಕ್ತಿ ಪಡೆದ ಘಟನೆಗಳನ್ನು ಮಧುರಚೆನ್ನರು ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ.

ಕಾಪಸೆ ರೇವಪ್ಪನವರು ಸಂಗ್ರಹಿಸಿದ 'ಮಲ್ಲಿಗೆ ದಂಡೆ' ಎಂಬ ಜಾನಪದ ಗೀತೆಗಳ ಸಂಗ್ರಹಕ್ಕೆ ಮಧುರಚೆನ್ನರು ಮುನ್ನುಡಿ ಬರೆದಿದ್ದುದಲ್ಲದೇ ಆಯಾ ಹಾಡುಗಳ ಗುಂಪಿಗೆ ಪೂರಕವಾದ ಅಭ್ಯಾಸಪೂರ್ಣ ಟಿಪ್ಪಣಿಗಳನ್ನು ಬರೆದಿದ್ದಾರೆ. ಈ ಮುನ್ನುಡಿಯ ವೈಶಿಷ್ಟ್ಯವೆಂದರೆ ಅದರಲ್ಲಿ ಕಾವ್ಯದ ಉಗಮ ಮತ್ತು ಲಕ್ಷಣ ಕುರಿತು ಚಿಂತಿಸಿದ್ದಾರೆ. ಕವಿಗಳ ಕವಿತೆ, ಮತ್ತು ಕವಿಗಳಲ್ಲದವರ ಕವಿತೆಗಳ ಬಗೆಗೆ ವಿಶ್ಲೇಷಿಸಿಸಿದ್ದಾರೆ. ಶಿಷ್ಟಕವಿತೆ - ಜಾನಪದ ಕವಿತೆ ಬಗೆಗೆ ವಿಚಾರಿಸಿ ಕವಿಗಳಲ್ಲದವರು ಕಾವ್ಯ ರಚಿಸಿದ ಚಮತ್ಕೃತಿ ಬಗೆಗೆ ಬರೆದ ಈ ಮುನ್ನುಡಿಯಲ್ಲಿ ಪಾಶ್ಚಾತ್ಯರ ವಿಚಾರಗಳೂ ಸೇರಿದೆ. ಈ ಲೇಖನ ಜಾನಪದ ಕಾವ್ಯಮೀಮಾಂಸೆಯನ್ನು ಒಳಗೊಂಡಿದೆ. ಜಾನಪದಕ್ಕೆ ಸಂಬಂಧಿಸಿದಂತೆ ಹಾಡಿನ ಪರಿಚಯ, ಸಂಪ್ರದಾಯ, ಭಾಷೆ, ಛಂದಸ್ಸು ಕುರಿತು ಟೀಕೆ ಟಿಪ್ಪಣಿಗಳಲ್ಲಿ ಸಂಶೋಧನಾತ್ಮಕ ವಿವರಣೆ ಇದೆ.

ಹೀಗೆ ಮಧುರಚೆನ್ನರು ಜಾನಪದ ತ್ರಿಪದಿಗಳ-ಗಾದೆಗಳ ಸಂಗ್ರಹಕಾರರಾಗಿ, ಇತರರು ಸಂಗ್ರಹಿಸಿದ ಸಾಹಿತ್ಯಕ್ಕೆ ವ್ಯಾಖ್ಯಾನಕಾರರಾಗಿ ಕನ್ನಡದಲ್ಲಿ ಜಾನಪದ ಸಾಹಿತ್ಯಕ್ಕಿದ್ದ ಕೀಳರಿಮೆಯನ್ನು ಅಳಿಸಿಹಾಕಿದವರಾಗಿ ಜಾನಪದ ಸಾಹಿತ್ಯಕ್ಕೆ ಸಂಗ್ರಹಕ್ಕೆ ಶ್ರೀಕಾರ ಹಾಕಿದವರಾಗಿದ್ದು ಅವರ ಪ್ರಾಮಾಣಿಕ ಸೇವೆ ಜಾನಪದ ಕ್ಷೇತ್ರಕ್ಕೆ ಸಂದಿದೆ.

ಜಾನಪದ ಸಾಹಿತ್ಯ ಸಂಗ್ರಹ ನಡೆಸಿದಂತೆ, ವ್ಯಾಖ್ಯಾನಿಸಿದಂತೆ ಆಧುನಿಕ ಜಾನಪದ ಸೃಷ್ಟಿಕರ್ತರಲ್ಲಿ ಮಧುರಚೆನ್ನರೂ ಒಬ್ಬರಾಗಿದ್ದಾರೆ. ಈ ಶತಮಾನದಲ್ಲಿ ನಡೆದ ಜಾನಪದ ಸಾಹಿತ್ಯ ಸೃಷ್ಟಿಯನ್ನು ಗಮನಿಸುವುದಗತ್ಯ. ಲಾವಣಿಕಾರರು,

7. ಮಧುರಚೆನ್ನ ಜೀವನ ಹಾಗೂ ಕೃತಿಗಳ ಸಮೀಕ್ಷೆ, ಪು. 102 ಡಾ. ಜಿ.ಎಸ್. ಕಾಪಸೆ.



ತತ್ವಪದಕಾರರು ಅದೆಷ್ಟೋ ಹಾಡುಗಳನ್ನು ರಚಿಸಿದ್ದಾರೆ. ನಮ್ಮ ಗಮನಕ್ಕೆ ಬಾರದಂತೆ ಜಾನಪದ ಸಾಹಿತ್ಯ ಸೃಷ್ಟಿ ನಡೆದಿದೆ. ಈ ಹಿಂದಿನ ಜಾನಪದ ಸಾಹಿತ್ಯದ ಸಂಗ್ರಹ-ಸಂಕಲನ-ಸಂಪಾದನ-ವಿಮರ್ಶನ-ಸಂಶೋಧನೆಗಳಲ್ಲಿ ತೊಡಗಿರುವ ನಾವು ಇಂದಿನ ಜಾನಪದ ಸಾಹಿತ್ಯದ ಸೃಷ್ಟಿಯತ್ತ ನಮ್ಮ ದೃಷ್ಟಿ ಹೊರಳಿಸಬೇಕಾಗಿದೆ.

ನವೋದಯ ಕಾಲದ ಕವಿಗಳು ತ್ರಿಪದಿಯನ್ನು ಬಳಸಿಕೊಂಡು ತುಂಡುಕಾವ್ಯ, ಖಂಡಕಾವ್ಯ, ಮಹಾಕಾವ್ಯಗಳನ್ನು ರಚಿಸಿದ್ದಾರೆ. ಇವರಲ್ಲಿ ಬೇಂದ್ರೆ ಮಧುರಚೆನ್ನರು, ಜಯದೇವಿ ತಾಯಿಯವರು ಪ್ರಮುಖರು. ಇನ್ನು ಗಮನಕ್ಕೆ ಬಾರದ ಅದೆಷ್ಟೋ ಕವಿಗಳಿದ್ದಾರೆ.

ಮಧುರಚೆನ್ನರು ದೇವತಾ ಪೃಥವಿ ಮತ್ತು ಸುಖ-ದುಃಖ ಎಂಬ ಎರಡು ಕವನಗಳನ್ನು ತ್ರಿಪದಿಯಲ್ಲಿ ರಚಿಸಿದ್ದಾರೆ. ಅವರ ತ್ರಿಪದಿಗಳು ವ್ಯಷ್ಟಿಪ್ರತಿಭೆಯಾಗಿ ಕಂಡುಬಂದರೂ ಅವು ಸಮಷ್ಟಿಯ ಗುಣ ಹೊಂದಿರುವುದನ್ನು ಅಲ್ಲಗಳೆಯುವಂತಿಲ್ಲ. ಇವತ್ತು ಇವು ವ್ಯಕ್ತಿ ಸಾಹಿತ್ಯವಾಗಿದ್ದರೂ ಮುಂದೊಂದು ದಿನ ಅವು ಸಮಷ್ಟಿಯ ಸೊತ್ತಾಗಬಹುದಾಗಿದೆ.

ಮೊಲೆಹಾಲು ಸಾಕಮ್ಮಾ ಸವಿಲಾಲಿ ಬೇಕಮ್ಮಾ
ಮುದ್ದಾಡಿ ರಮಿಸಿ ಮೈದಡವಿ । ಏಳಮ್ಮಾ
ಮಲಗಿರುವ ತಾಯಿ ಪೃಥವೀ.

ದೇವತಾ ಪೃಥವೀ ಮಧುರಚೆನ್ನರ ಕೃತಿಸತಿಯ ಶಿರೋರತ್ನವಾಗಿದೆಯೆಂದು ಬೇಂದ್ರೆಯವರು ಹೇಳಿದ್ದಾರೆ. ಪೃಥ್ವಿಯ ದೇವತ್ವ ಮತ್ತು ತಾಯ್ತನಗಳ ಬಗೆಗಿನ ಈ ಕವನ ವಿಮರ್ಶೆ ನಮಗೆ ನಿಲಕದು. ಆದರೆ ಸ್ವಾತಂತ್ರ್ಯ ಪೂರ್ವದಲ್ಲಿ ರಚಿತವಾದ ಈ ಕವನಕ್ಕೆ ಹಲವಾರು ಅರ್ಥಗಳಿವೆ.

ಸುಖವು ಬೀದಿಯ ನೆರಳ । ದುಃಖವು ದೂಡುವ ಬಿಸಿಲ
ಸುಖ-ದುಃ ನಮಾಗ ಸರಿಸುವ । ತಂಗೆಮ್ಮಾ
ಒಂದ ಬಿಟ್ಟೊಂದು ದೊರಿಯಾವ.

ಸುಖ-ದುಃಖಗಳನ್ನು ತಂಗೆಮ್ಮನಿಗೆ ಪರಿಚಯ ಮಾಡಿಕೊಡುವ ಈ ಕವನ ಜಾನಪದದ ಜಾಡಿನಲ್ಲಿ ಸಾಗಿಬಂದಿದೆ. "ಮಧುರಚೆನ್ನರ ಕಾವ್ಯದ ಭಾಷೆ-ಶೈಲಿ, ಚಿತ್ರ - ಚೆಲುವು, ಅನಿಸಿಕೆ - ನೆನಸಿಕೆ, ರೂಪಕ - ಪ್ರತಿಮೆ, ಧಾತಿ - ಧೋರಣೆ ಎಲ್ಲವೂ ಜಾನಪದ ಕಾವ್ಯದ ಒಣಪಿನಿಂದ ಕೂಡಿವೆ" ಎಂಬ ವಿಮರ್ಶೆಗೆ ಪೂರಕವಾಗಿ ನಾವು ನವೋದಯ ಕಾಲದಲ್ಲಿ ರಚಿತವಾದ ಕವನಗಳನ್ನೆಲ್ಲಾ [8] ನವೋದಯವೆಂದು ಕರೆದೆವಾದರೂ ಜಾನಪದದ

8. ಸಾಹಿತ್ಯ ಚಿಂತನ, ಪು. 83 ಶ್ರೀ ಚೆನ್ನವೀರ ಕಣವಿ.

ಪಡೆಯಿತು. ಪ್ರಾರಂಭದಲ್ಲಿ ಇವರು 'ಮೊಗ್ಗೆ' ಎಂಬ ಸಾಪ್ತಾಹಿಕವನ್ನು ಕೈಬರಹದಲ್ಲಿ ಹೊರತರಹತ್ತಿದರು. ಈ ಗುಂಪಿಗೆ ಮಧುರಚೆನ್ನರು ಹಿರಿಯ ಗೆಳೆಯರಾಗಿ, ಪಿ. ಧೂಲಾ, ಕಾಪಸೆ ರೇವಪ್ಪ ಸ್ಥಳೀಯ ಗೆಳೆಯರಾಗಿ, ಸಿಂಪಿ ಲಿಂಗಣ್ಣ ಮೊದಲಾದವರು ಪರಸ್ಥಳೀಯ ಗೆಳೆಯರಾಗಿ ಕೂಡಿದರು. ಈ ಬಳಗದಲ್ಲಿ ಹಲಸಂಗಿಯ ಮಾದಣ್ಣ ಓಲೇಕಾರ, ಚನ್ನಪ್ಪ ಸರಸಂಬಿ, ಆದಮ ಮಸಳಿ, ಗುರುಬಸಪ್ಪ ಗಲಗಲಿ, ಶಿವಲಿಂಗಪ್ಪ ಸರಸಂಬಿ-ಮೊದಲಾದವರು ಸೇರಿದರು. ಆಮೇಲೆ ಈ ಗುಂಪಿಗೆ ಚಡಚಣದ ಗುರುಪಾದಪ್ಪ ಜೀರಂಕಲಗಿ, ಜೀವರಾಜ ದೋಸಿ, ಹತ್ತರಕಿಯ ಶಿವಲಿಂಗಪ್ಪ ಗುಣಕಿ, ಗುರಪ್ಪ ಗೋಡೆಕಾರ, ಲಿಂಗಪ್ಪ ಶಿವೂರ, ಮಂಡಪ್ಪ ಅಂಕಲಗಿ ಮುಂತಾದ ಹಿರಿ-ಕಿರಿಯರು ಸೇರ್ಪಡೆಯಾದರು. ಸಾಲೋಟಗಿ, ನಾಗಠಾಣ, ಬರಡೋಲ, ಭತಗುಣಕಿ, ಲೋಣಿ- ಈ ಗ್ರಾಮಗಳ ಕೆಲವು ಮಿತ್ರರು ಗುಂಪಿನ ಗೆಳೆಯರಾದರು. ಈ ಗುಂಪಿಗೆ ಕಟ್ಟು ಕಟ್ಟಳೆಯಾಗಲೀ, ವಂತಿಗೆ-ವರ್ಗಣಿಯಾಗಲೀ ಇರಲಿಲ್ಲ. ಒಲುಮೆಯೊಂದೇ ಗೆಳೆಯರ ಗುಂಪಿನ ಜೀವನಾಡಿಯಾಗಿತ್ತು.

೧೯೨೦-೩೦ರ ದಶಕವನ್ನು ಒಂದು ರೀತಿಯಿಂದ ಮಬ್ಬು ಕಳೆದು ನಾಡು ಎಚ್ಚರಗೊಳ್ಳುವ ಕಾಲವೆಂದು ಹೇಳಬಹುದು. ಗೆಳೆಯರ ಗುಂಪಿನಲ್ಲಿರುವವರೆಲ್ಲ ಆದರ್ಶವಾದಿಗಳಾಗಿದ್ದರು. ಅಲ್ಲದೆ ಸಾಹಿತ್ಯದ ಮುಖಾಂತರ ಕನ್ನಡ ನಾಡಿನ ಸೇವೆ ಮಾಡುವ ಹವ್ಯಾಸವುಳ್ಳವರಾಗಿದ್ದರು. ಕನ್ನಡಿಗರನ್ನು ಜಾಗೃತಗೊಳಿಸಿ ನಾಡಿನ ಭವ್ಯ ಭವಿತವ್ಯವನ್ನು ರೂಪಿಸುವದು ; ನಮ್ಮ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವದು ; ಸಾಹಿತ್ಯ ಕೃಷಿ ಮಾಡುವದು ಮತ್ತು ಆಧ್ಯಾತ್ಮಿಕ ಸಾಧನೆ ನಡೆಸುವದು ಈ ಮುಂತಾದ ಉದ್ದೇಶಗಳನ್ನು ಸಾಧಿಸಲು ಅವರು ಹೆಣಗಿದರು. ಈ ಉದಾತ್ತ ಉದ್ದೇಶ ಸಾಧನೆಯಲ್ಲಿ ಮುನ್ನಡೆದ ಹಲವರ ಕಾರ್ಯ ಶ್ಲಾಘನೀಯವೂ ಆಗಿದೆ.

ಗೆಳೆಯರ ಗುಂಪಿನ ಸಾಧನೆಯನ್ನು ಗಮನಿಸುತ್ತ ಎಸ್. ಅನಂತನಾರಾಯಣ ಅವರು "ಕಾವ್ಯದಲ್ಲಿ ಕಾಣಿಸಿಕೊಂಡಿದ್ದ ಹೊಸತನದ ಬೀಜಕ್ಕೆ ನೀರೆರೆದು ಸಸಿ ಮಾಡಿ ಬೆಳೆಸಿದುದು, ಕಾವ್ಯ ವಿಮರ್ಶೆಯ ತತ್ವಗಳನ್ನು ಅಭ್ಯಾಸ ಮಾಡಿ ಇಂಗ್ಲಿಷ ವಿಮರ್ಶನ ರೀತಿಯಲ್ಲಿ ಕನ್ನಡ ಕೃತಿಗಳನ್ನು ವಿಮರ್ಶಿಸುವದು, ಮತ್ತು ಮರೆತು ಹೋಗುತ್ತಿದ್ದ ಜಾನಪದ ಗೀತೆಗಳನ್ನು ಸಂಗ್ರಹಿಸಿ ಆ ಜಾನಪದ ಮಟ್ಟುಗಳನ್ನು ಸಾಹಿತ್ಯಕ್ಕೆ ಉಪಯೋಗಿಸಿಕೊಳ್ಳುವದು - ಈ ಮೂರು ಬಗೆಯ ಕಾರ್ಯವನ್ನೂ ಗೆಳೆಯರ ಗುಂಪಿನವರು ಸಾಧಿಸಿದರು"[1] ಎಂದಿದ್ದಾರೆ. ಇದಲ್ಲದೆ ಗಣೇಶೋತ್ಸವ,

1. ಎಸ್. ಅನಂತನಾರಾಯಣ : ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ ಕಾವ್ಯದ ಪ್ರಭಾವ (೧೯೬೨) ಪು. ೧೪೦



ನಾಡಹಬ್ಬ, ವಿದ್ಯಾರಣ್ಯರ ಉತ್ಸವ, ರಾಮಕೃಷ್ಣ ಪರಮಹಂಸರ ಜಯಂತ್ಯೋತ್ಸವ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅವರು ಕೈಕೊಂಡರು. ಹಲಸಂಗಿ ಗೆಳೆಯರ ಗುಂಪು ಮಧುರಚೆನ್ನರ ಸಮರ್ಥ ಆಧ್ಯಾತ್ಮಿಕ ಅಡಿಗಲ್ಲಿನಿಂದಾಗಿ ಅವರು ಬದುಕಿರುವಷ್ಟು ಕಾಲ ಒಗ್ಗಟ್ಟಿನಿಂದ ಕಾರ್ಯ ಮಾಡಿತು. ಎರಡು ದಶಕಗಳ ಕಾಲ 'ಗೆಳೆಯರ ಗುಂಪು' ಎಂದು ಕರೆಯಲ್ಪಡುತ್ತಿದ್ದ ಈ ಬಳಗವು ಆಮೇಲೆ ಅರವಿಂದ ಮಂಡಲವಾಗಿ ಮಾರ್ಪಾಡಾಯಿತು. ಆಗ ಅದರ ಉದ್ದೇಶ ಭಿನ್ನವಾಗಿ ಆಧ್ಯಾತ್ಮ ಸಾಧನ-ಆಧ್ಯಾತ್ಮ ಸಾಹಿತ್ಯದತ್ತ ವಾಲಿತೆಂದು ಹೇಳಬಹುದು.

ಹಲಸಂಗಿ ಗೆಳೆಯರ ಗುಂಪಿನಲ್ಲಿ ಪ್ರಾಮುಖ್ಯವಾಗಿ ಸ್ಮರಿಸಬೇಕಾದವರು ಇಬ್ಬರು. ಮಧುರಚೆನ್ನ ಹಾಗೂ ಸಿಂಪಿ ಲಿಂಗಣ್ಣ ಇವರೀರ್ವರೂ ಕೃಷ್ಣಾರ್ಜುನರಂತೆ. ಗೆಳೆಯರ ಗುಂಪು ಕಟ್ಟುವದರಲ್ಲಿ, ಅದನ್ನು ಮುನ್ನಡೆಸುವದರಲ್ಲಿ, ಅದರ ಧ್ಯೇಯೋದ್ದೇಶಗಳನ್ನು ಸಾಧಿಸುವದರಲ್ಲಿ ಅವರೀರ್ವರೂ ಶ್ರಮಿಸಿದ್ದಾರೆ. ಗೆಳೆಯರ ಗುಂಪು ಅರವಿಂದ ಮಂಡಲವಾಗಿ ಮಾರ್ಪಡುವ ಕಾಲಕ್ಕಾಗಲೇ ಈ ಗುಂಪಿನ ಅನೇಕ ಗೆಳೆಯರು ಕಣ್ಮರೆಯಾದರು. ಆದರೆ ಸಿಂಪಿ ಲಿಂಗಣ್ಣನವರು ದೃಢಕಾಯರಾಗಿ ೮೮ ವರ್ಷ ಬದುಕಿದ್ದು ಕೊನೆಯವರೆಗೂ ಸಾಹಿತ್ಯ ಸೇವೆ ಮಾಡಿದರು. ಅವರು ಸಾಧಿಸಿದ ಸಾಧನೆ, ಪಡೆದ ಸಿದ್ಧಿ ಎಂಥವರನ್ನೂ ಬೆರಗುಗೊಳಿಸುವಂತಹದು.

## ಸಿಂಪಿ ಲಿಂಗಣ್ಣನವರ ಜನನ, ಬಾಲ್ಯ, ಶಿಕ್ಷಕರಾಗಿ ಕಾರ್ಯಾರಂಭ

ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನಲ್ಲಿ ಚಡಚಣ ಎಂಬುದೊಂದು ಊರು. ಇದು ಹಲವು ವೈಶಿಷ್ಟ್ಯಗಳನ್ನು ಹೊಂದಿದೆ. ಈ ಊರಿನ ಸಿಂಪಿ ಮನೆತನದಲ್ಲಿ ಶಿವಯೋಗಿ-ಸಾವಿತ್ರಿ ಎಂಬ ದಂಪತಿಗಳ ಮಗನಾಗಿ ದಿನಾಂಕ ೧೦-೨-೧೯೦೫ರಂದು ಜನಿಸಿದ ಮಗುವೇ ಸಿಂಪಿ ಲಿಂಗಣ್ಣ. ಮಗುವಿಗೆ ನಾಮಕರಣ ಮಾಡಿದುದು ನಾಗಪ್ಪ ಎಂದು. ಇದು ಈ ಮಗುವಿನ ಅಜ್ಜನ ಹೆಸರೂ ಆದುದರಿಂದ ಅಜ್ಜಿ ಅದನ್ನು ನಾಗಲಿಂಗ ಎಂದು ಮಾರ್ಪಡಿಸಿದಳು. ಅದು ಬಳಕೆಯಲ್ಲಿ ಮೊಟಕಾಗಿ ಲಿಂಗ ಎಂದಾಗಿ ನಂತರ ಲಿಂಗಪ್ಪ ಆಯ್ತು. ಮಧುರಚೆನ್ನರ ಆಶಯದಿಂದ ಕೊನೆಗೆ ಲಿಂಗಣ್ಣ ಆಗಿ, 'ಸಿಂಪಿ ಲಿಂಗಣ್ಣ' ಎಂಬುದು ಕಾವ್ಯನಾಮವಾಯಿತು.

ಎರಡು ವರ್ಷಗಳ ಮಗುವಾಗಿರುವಾಗ ಲಿಂಗಣ್ಣನವರ ತಾಯಿ 'ಸಾವಿತ್ರಿ' ನಿಧನರಾದರು. ತಂದೆ ೧೯೧೭ರಲ್ಲಿ ತೀರಿಕೊಂಡರು. ಲಿಂಗಣ್ಣನವರು ೨ನೆಯ ವರ್ಗದಲ್ಲಿದ್ದಾಗ ಚಡಚಣದಲ್ಲಿ ಮಧುರಚೆನ್ನರನ್ನು ಪ್ರಥಮವಾಗಿ ಕಂಡರು. ಅಂದಿನ ಆ ಪರಿಚಯದಿಂದ ಗೆಳೆಯರಾದ ಅವರು ಮಧುರಚೆನ್ನರು ಬದುಕಿರುವವರೆಗೂ ಅದನ್ನು ಉಳಿಸಿಕೊಂಡರು. ೧೯೧೧ರಲ್ಲಿ ಪ್ರಾಥಮಿಕ ಶಾಲೆ ಸೇರಿದ ಲಿಂಗಣ್ಣನವರು ೧೯೨೨ರಲ್ಲಿ ಮುಲ್ಕೀ ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮರಾಗಿ ತೇರ್ಗಡೆಯಾದರು.

ಪ್ರತಿಭಾವಂತ ವಿದ್ಯಾರ್ಥಿಯಾದ ಅವರು ನಾಟ್ಯ ಕಲೆ, ಕಥನ ಕಲೆಯಲ್ಲಿ ಆಸಕ್ತಿ ಹೊಂದಿದ್ದರಲ್ಲದೆ ಮಧುರಚೆನ್ನರ 'ಸತ್ವಪರೀಕ್ಷೆ' ನಾಟಕದಿಂದ ಪ್ರೇರಿತರಾಗಿ ನಾಟಕ ರಚನೆಗೂ ತೊಡಗಿದರು. ಅವರು ಬರೆದ ಪ್ರಥಮ ನಾಟಕ 'ಸಾವಿನ ಸಮಸ್ಯೆ' ಎಂಬುದು. ೧೯೨೨ರಲ್ಲಿ ಬರೆದ ಈ ನಾಟಕದಲ್ಲಿ ಮುಖ್ಯ ಪಾತ್ರಧಾರಿಯಾಗಿ ಅಭಿನಯಿಸಿದರು. ಮರುವರ್ಷ 'ಮರೆಮುಚ್ಚಕ' ಎಂಬ ನಾಟಕ ಬರೆದರು. ಈ ಅವಧಿಯಲ್ಲಿ ಅವರು 'ವಾಗ್ವಿಲಾಸ ಭವನ' ಎಂಬ ವಾಚನಾಲಯವನ್ನು ತಮ್ಮೂರಿನಲ್ಲಿ ಸ್ಥಾಪಿಸಿದರು. ೧೯೨೪ರಲ್ಲಿ ಧಾರವಾಡ ಟ್ರೇನಿಂಗ ಸ್ಕೂಲಿಗೆ ಪ್ರಥಮ ವರ್ಷದ ಶಿಕ್ಷಕ ವಿದ್ಯಾರ್ಥಿಯಾಗಿ ಸೇರ್ಪಡೆಯಾದರು. ೧೯೨೫ರಲ್ಲಿ ಭತಗುಣಕಿ (ತಾ-ಇಂಡಿ) ಶಾಲೆಗೆ ಶಿಕ್ಷಕರಾಗಿ ನೇಮಕಗೊಂಡರು. ಇಲ್ಲಿಯವರೆಗೆ ಚಡಚಣಕ್ಕೆ ಸೀಮಿತಗೊಂಡ ಅವರ ಕಾರ್ಯಕ್ಷೇತ್ರ ಹಲಸಂಗಿ ಗೆಳೆಯರ ಬಳಗದೊಡ ಗೂಡಿ ವಿಸ್ತಾರಗೊಂಡಿತು.

**ಗೆಳೆಯರ ಬಳಗದಲ್ಲಿ ಸಿಂಪಿ ಲಿಂಗಣ್ಣನವರ ಜಾನಪದ ಕಾರ್ಯ**

ಜಾನಪದ ಸಂಗ್ರಹವನ್ನು ಆರಂಭದಲ್ಲಿ ಮನರಂಜನೆಗೆಂದು ಮಾಡುತ್ತ ಬಂದಿದ್ದರೂ ಇಂದು ಅದು ಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿರದೆ ವಿಶ್ವ ವ್ಯಾಪಿಯಾದ ಶಾಸ್ತ್ರ-ವಿಜ್ಞಾನವಾಗಿ ಪರಿಗಣಿತವಾಗಿದೆ. ಇದರಲ್ಲಿ ಸಮಾಜ ಶಾಸ್ತ್ರ, ಅರ್ಥಶಾಸ್ತ್ರ, ಇತಿಹಾಸ, ಕಲೆ, ಸಂಸ್ಕೃತಿ ಎಲ್ಲವೂ ಇದೆ. ಒಟ್ಟಿನಲ್ಲಿ ಮಾನವನ ಸಂಸ್ಕೃತಿಯ ಸಮಗ್ರ ಚಿತ್ರಣವನ್ನು ಕಂಡುಕೊಳ್ಳಲು ಇದರ ಅಭ್ಯಾಸವಿಂದು ಪೂರಕವಾಗಿದೆ.

ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಸಿಂಪಿ ಲಿಂಗಣ್ಣನವರದು ಎದ್ದು ಕಾಣುವ ಹೆಸರು. ಇವರ ಬಗೆಗೆ ಬರೆಯುತ್ತ ಡಾ॥ ಮಲ್ಲಿಕಾರ್ಜುನ ಲಠ್ಠೆಯವರು "ಈ ಶತಮಾನದ ಜನಪದ ಸಾಹಿತ್ಯ ಸಂಗ್ರಹಕಾರರಲ್ಲಿ ಪ್ರಮುಖ ಪಾತ್ರ ವಹಿಸಿದವರಲ್ಲಿ ಶ್ರೀ ಸಿಂಪಿ ಲಿಂಗಣ್ಣನವರೂ ಒಬ್ಬರು. ಹಲಸಂಗಿ ಚೆನ್ನಮಲ್ಲಪ್ಪನವರ ಜೊತೆ ಗಾರರಾಗಿ ಕಾರ್ಯ ಕೈಕೊಂಡ ಶ್ರೀಯವರು ಬರೆದ ಲೇಖನಗಳು ಹಲವಾರು, ಸಂಗ್ರಹಿಸಿದ ಜಾನಪದ ಕೃತಿಗಳು ಹತ್ತಾರು, ಭಾಗವಹಿಸಿದ ಗೋಷ್ಠಿಗಳು ನೂರಾರು. ಜಾನಪದ ಜೀವಿಗಳಾಗಿ ಬದುಕಿ ತಮ್ಮ ಜೀವನದುದ್ದಕ್ಕೂ ಅದನ್ನೇ ಬಳಸಿಕೊಂಡು ಬಂದವರಾಗಿದ್ದಾರೆ"[2] ಎಂದು ಅಭಿಪ್ರಾಯಪಟ್ಟಿದ್ದಾರೆ.

ಸಿಂಪಿ ಲಿಂಗಣ್ಣನವರು ಶಿಕ್ಷಕರಾಗಿ ಭತಗುಣಕಿಗೆ ಬಂದ ಮೇಲೆ ಮಧುರಚೆನ್ನ ರೊಡಗೂಡಿ ಜಾನಪದ ಸಂಗ್ರಹ ಕಾರ್ಯವನ್ನು ನಿಷ್ಠೆಯಿಂದ ಕೈಕೊಂಡರು. ಈ

2. ಮಲ್ಲಿಕಾರ್ಜುನ ಲಠ್ಠೆ : ಜಾನಪದ ದೀಪ್ತಿ (೧೯೭೯), ಪು. 11



ಮಾತಿಗೆ ಸಮರ್ಥನೆಯನ್ನೊದಗಿಸುವಂತೆ 'ಗರತಿಯ ಹಾಡು' ಶ್ರೇಷ್ಠ ಸಂಕಲನ ವಾಗಿರುವದು ಗಮನಾರ್ಹ ಸಂಗತಿ. ಇದು ಹಲಸಂಗಿ ಗೆಳೆಯರ ಅಪೂರ್ವ ಕೃತಿ. ಇದರ ಅಗ್ಗಳಿಕೆಯನ್ನು ಹಲವಾರು ಪಂಡಿತರು ಎತ್ತಿ ಹೇಳಿದ್ದಾರೆ. ಅಂತಹ ಹೇಳಿಕೆಗಳಲ್ಲಿ "ಆ ಗ್ರಂಥ ಕನ್ನಡದ ಗರತಿಯರ ಬಾಳಿನ ಅಮೃತ ಬಿಂದುಗಳನ್ನೇ ಸಂಕಲನ ಮಾಡಿದಂತಿರುವ ರೀತಿಯಲ್ಲಿ ದಿವ್ಯ ಮಾಧುರ್ಯವನ್ನು ನೀಡುತ್ತದೆ".[3] ಮತ್ತು "....ಗರತಿಯರ ಹಾಡು ಕನ್ನಡದ ಪ್ರಪ್ರಥಮ ಜಾನಪದ ಕಾವ್ಯ ಸಂಕಲನ ವಾಗಿದ್ದು, ಗುಣದ ದೃಷ್ಟಿಯಿಂದ ಕೂಡ ಇಂದಿಗೂ ಅದ್ವಿತೀಯ ಕೃತಿಯಾಗಿ ನಿಂತಿದೆ"[4] ಹಾಗೂ "....ಆ ಕೃತಿ ಹಲಸಂಗಿ ಸೋದರರ ಅವಿರತವಾದ ಶ್ರಮದಿಂದ ಸಾಹಿತ್ಯ ಶ್ರದ್ಧೆಯಿಂದ ಕನ್ನಡ ಕಾವ್ಯ ಭಂಡಾರಕ್ಕೆ ಅರ್ಪಿತವಾದ ಅನುಪಮ ಕೃತಿ ರತ್ನವಾಗಿದೆ"[5] ಇವು ಉಲ್ಲೇಖನೀಯ ಹೇಳಿಕೆಗಳು. ಇದರ ಮೊದಲ ಮುದ್ರಣ ೧೯೩೧ರಲ್ಲಿ ಆಗಿದ್ದು ಅನಂತರ ಹಲವು ಮುದ್ರಣಗಳನ್ನು ಇದು ಕಂಡಿದೆ.

'ಗರತಿಯ ಹಾಡು' ಸಂಕಲನದ ತ್ರಿಪದಿಗಳನ್ನು ಸಂಗ್ರಹಿಸುವಲ್ಲಿ ಸಿಂಪಿ ಲಿಂಗಣ್ಣನವರು ಶ್ರಮವಹಿಸಿ ಕಾರ್ಯ ಮಾಡಿರುವರಲ್ಲದೆ 'ಅರಿಕೆ'ಯಲ್ಲಿ ಜನಪದ ಸಾಹಿತ್ಯದ ಸೊಗಸು, ಗರತಿಯರ ಗರಿಮೆ, ಈ ಕೃತಿಯ ಮಹತಿ ಇತ್ಯಾದಿ ಕುರಿತ ವಿದ್ವತ್ಪೂರ್ಣ ವಿಮರ್ಶೆ ಮಾಡಿದ್ದಾರೆ. 'ಗರತಿಯರ ಹಾಡಿ'ನ ಕಾವ್ಯ ಸೌರಭ ಸಾಹಿತ್ಯ ರಸಿಕರನ್ನು ತನ್ನತ್ತ ಸೆಳೆದುಕೊಂಡು ಅನೇಕ ಉತ್ಸಾಹಿಗಳಿಂದ ಜಾನಪದ ಸಂಗ್ರಹಕ್ಕೆ ತೊಡಗಿಸಿತು. ಈ ಸಂಕಲನದ ನಂತರ ಇತ್ತೀಚಿನ ಆರು ದಶಕಗಳಲ್ಲಿ ಹಲವಾರು ಜಾನಪದ ಸಂಕಲನಗಳು ಬೆಳಕು ಕಂಡರೂ ಆದ್ಯ ಸಂಕಲನವಾದ 'ಗರತಿಯ ಹಾಡು' ತನ್ನ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಬಂದಿದೆ.

'ಗರತಿಯ ಹಾಡು' ಕೃತಿಯ ನಂತರ ಪಿ. ಧೂಲಾ ಅವರೊಡನೆ 'ಜೀವನ ಸಂಗೀತ' ಎಂಬ ಲಾವಣಿಗಳ ಸಂಗ್ರಹವನ್ನು ಹೊರ ತಂದುದು ಸಿಂಪಿಯವರ ಇನ್ನೊಂದು ಸಾಧನೆ. ಇದು ಕ್ರಿ.ಶ. ೧೯೩೩ರಲ್ಲಿ ಪ್ರಕಟವಾಯಿತು. ಇದರಲ್ಲಿ ಏಳು ಜನ ಲಾವಣಿಕಾರರ ಹನ್ನೆರಡು ಲಾವಣಿಗಳನ್ನು ಸಂಗ್ರಹಿಸಲಾಗಿದೆ. ಇವು ಬೆಲೆಯುಳ್ಳ ಲಾವಣಿಗಳು. ಜೊತೆಗೆ ಈ ಸಂಗ್ರಹದ ಆರಂಭದಲ್ಲೊಂದು ಕೊನೆಗೊಂದು ಚಿಕ್ಕ ಲಾವಣಿಗಳನ್ನು ಸೇರಿಸಿ ಪ್ರಕಟಿಸಲಾಗಿದೆ. ಇದರಲ್ಲಿ ಹಲಸಂಗಿ ಲಾವಣಿಕಾರನಾದ ಖಾಜಾ ಸಾಹೇಬನ ಲಾವಣಿಗಳೇ ಅಧಿಕವಾಗಿದೆಯಲ್ಲದೆ ಅವು ಮನಮಿಡಿಯತಕ್ಕ ಲಾವಣಿಗಳು. ಉಳಿದ ಲಾವಣಿಗಳು ಕುಬಣ್ಣ, ಸಂಗಣ್ಣ,

3. ಎಲ್. ಆರ್. ಹೆಗಡೆ : ಜನಪದ ಸಾಹಿತ್ಯ, ಪು. 3
4. ಸಿ. ಪಿ. ಕೆ : ಜಾನಪದ ಪ್ರತಿಭೆ, ಪು. 75
5. ಜೀ. ಶಂ. ಪರಮಶಿವಯ್ಯ : ಜಾನಪದ ಸಂ. 1, ಸಂಚಿಕೆ 1, ಪು. 74

ನಾನಾ ಸಾಹೇಬ, ನ್ಯಾಮಣ್ಣ, ಶಿವಲಿಂಗ, ಗೋಪಾಳ ದುರದುಂಡಿ, ಸಿದ್ದೂ-ಶಿವಲಿಂಗ ಇವರು ರಚಿಸಿದವುಗಳಾಗಿವೆ. ಈ ಸಂಗ್ರಹದ ಬಗ್ಗೆ ಬರೆಯುತ್ತ "ಸ್ವತಃ ಸಾಹಿತಿಗಳಾದ ಲಿಂಗಣ್ಣನವರು ಮೊದಲಿನಿಂದಲೂ ಜನಪದ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ಹೊಂದಿದವರಾಗಿದ್ದರು. ಅದರಿಂದಾಗಿ ಅವರು ಲಾವಣಿಗಳ ಸಂಗ್ರಹ ಉತ್ಕೃಷ್ಟವಾಗುವಂತೆ ನೋಡಿಕೊಂಡರು. ಸಂಗ್ರಹದಲ್ಲೆಲ್ಲೂ ಮಧುರಚೆನ್ನರ ಹೆಸರು ಸೂಚಿತವಾಗಿರದಿದ್ದರೂ ಆ ಕಾರ್ಯದಲ್ಲಿ ಅವರ ಮಾರ್ಗದರ್ಶನ ಇದ್ದೇ ಇತ್ತು"[6] ಎಂದಿರುವ ಡಾ॥ ಜಿ. ಎಸ್. ಕಾಪಸೆಯವರ ಹೇಳಿಕೆಯನ್ನು ಗಮನಿಸಬೇಕು. ಇವೆಲ್ಲ ಶೃಂಗಾರ ಲಾವಣಿಗಳು. ಅಂತೆಯೇ "ಜೀವನ ಸಂಗೀತ'ವೆಂಬ ಸಂಕಲನದಲ್ಲಿ ಅತ್ಯುತ್ತಮವಾದ ಶೃಂಗಾರ ಲಾವಣಿಗಳಿವೆ"[7] ಎಂಬುದು ಒಪ್ಪತಕ್ಕ ಮಾತಾಗಿದೆ.

ಕ್ರಿ.ಶ. ೧೯೭೧ರಲ್ಲಿ ಇದರ ೨ನೆಯ ಆವೃತ್ತಿ ಬಂದಿದ್ದು ಇದರಲ್ಲಿ ಅನುಬಂಧವಾಗಿ ಸಿಂಪಿ ಲಿಂಗಣ್ಣನವರ ನಾಲ್ಕು ಲಾವಣಿಗಳನ್ನು ಸೇರಿಸಲಾಗಿದೆ. ಆದರೆ "....ಆ ಲಾವಣಿಗಳಲ್ಲಿನ ಅಗಾಧವಾದ ವರ್ಣನಾ ಚಾತುರ್ಯ ಈ ಲಾವಣಿಗಳಲ್ಲಿಲ್ಲ. ಇವು ಕಥೆಗಾರಿಕೆಯನ್ನೇ ಮುಖ್ಯವಾಗಿ ಉಳ್ಳವು"[8]. ಎಂದಿರುವ ವಿಮರ್ಶಕರ ಮಾತಿನಲ್ಲಿ ಸತ್ಯಾಂಶವಿಲ್ಲದೇ ಇಲ್ಲ. ಅದೇನೇ ಇದ್ದರೂ 'ಜೀವನ ಸಂಗೀತವು' ಹಲಸಂಗಿ ಗೆಳೆಯರು ಜಾನಪದ ಸಾಹಿತ್ಯಕ್ಕೆ ಸಲ್ಲಿಸಿದ ಬಹು ದೊಡ್ಡ ಕೊಡುಗೆಯಾಗಿದೆ. ಈ ವಿಷಯವಾಗಿ ಅನಂತ ಬುರ್ಲಿಯವರು "ಆ ಕಾಲಕ್ಕೆ ಹಲಸಂಗಿಯ ಸಾಹಿತಿಗಳ ಬಳಗದ ಪ್ರಯತ್ನದಿಂದಾಗಿ ಜಾನಪದ ಸಾಹಿತ್ಯದ ಹಿರಿಮೆಯನ್ನು ಕನ್ನಡಿಗರು ತಿಳಿಯುವಂತಾಯ್ತು. ಆ ಪ್ರಯತ್ನದಲ್ಲಿ ಲಿಂಗಣ್ಣನವರ ಪಾಲು ಬಲು ದೊಡ್ಡದು"[9] ಎಂದಿರುವದನ್ನು ಗಮನಿಸಬೇಕು. ಈ ಕೃತಿಯನ್ನು ಕುರಿತು ವಿಮರ್ಶಕರು ಹೇಳಿದ "ಫ್ಲೀಟರು ಸಂಗ್ರಹಿಸಿದ ಲಾವಣಿಗಳ ನಂತರ ಜೀವನ ಸಂಗೀತದ ಲಾವಣಿಗಳು ಕನ್ನಡ ಜನಪದ ಸಾಹಿತ್ಯದಲ್ಲಿ ಗಣನೀಯ ಸ್ಥಾನಕ್ಕೆ ಅರ್ಹವಾಗಿವೆ. ಜನಪದ ಸಾಹಿತ್ಯ ಸಂಗ್ರಹ ಯಾತ್ರೆಯಲ್ಲಿ ಹೊಸ ದ್ವಾರವನ್ನು ತೆರೆದು ತೋರಿದ ಕೀರ್ತಿ ಜೀವನ ಸಂಗೀತದ ಸಂಗ್ರಾಹಕರದು"[10] ಈ ಮಾತುಗಳು ಔಚಿತ್ಯಪೂರ್ಣವಾಗಿದೆ.

ಸಿಂಪಿ ಲಿಂಗಣ್ಣನವರ ಹೆಸರು ಹೊಸಗನ್ನಡ ಸಾಹಿತ್ಯದಲ್ಲಿ ಚಿರಸ್ಥಾಯಿಯಾಗಿ ನಿಂತಿರುವದು ಅವರ ಜನಪದ ಸಾಹಿತ್ಯ ಕ್ಷೇತ್ರದ ಗಣನೀಯ ಸೇವೆಯಿಂದ. ಅವರು

6. ಜಿ. ಎಸ್. ಕಾಪಸೆ : ಮಧುರಚೆನ್ನ-ಜೀವನ ಹಾಗೂ ಕೃತಿಗಳ ಸಮೀಕ್ಷೆ ಪು. 131
7. ಕನ್ನಡ ವಿಶ್ವಕೋಶ : ಸಂಪುಟ 4, ಪು. 67
8. ಎಲ್. ಆರ್. ಹೆಗಡೆ : ಜನಪದ ಸಾಹಿತ್ಯ ಪು. 3
9. ವಿ. ಕೃ. ಗೋಕಾಕ ಮತ್ತು ಇತರರು : ಕನ್ನಡ ಕಾಲು ಶತಮಾನ ಪು. 73
10. ಜೀ. ಶಂ. ಪರಮಶಿವಯ್ಯ : ಜಾನಪದ ಸಂ. 1, ಸಂಚಿಕೆ 1, ಪು. 75



ರಚಿಸಿದ ಒಟ್ಟು ಸಾಹಿತ್ಯ ಕೃತಿಗಳ ಸಂಖ್ಯೆ ನೂರಕ್ಕೂ ಅಧಿಕವಾಗಿವೆ. ಅವುಗಳ ವಿಂಗಡಣೆಯ ಪಕ್ಷಿ ನೋಟ ಇಂತಿದೆ :

| | | | |
|---|---|---|---|
| ೧) | ಪ್ರಬಂಧ ಕೃತಿಗಳು | ಒಟ್ಟು ಸಂಖ್ಯೆ | ೧೫ |
| ೨) | ಜನಪದ ಸಾಹಿತ್ಯ | ,, | ೧೧ |
| ೩) | ಚರಿತ್ರೆಗಳು | ,, | ೧೮ |
| ೪) | ನಾಟಕಗಳು | ,, | ೧೩ |
| ೫) | ಕಾವ್ಯಗಳು | ,, | ೦೭ |
| ೬) | ಮಕ್ಕಳ ಸಾಹಿತ್ಯ | ,, | ೦೮ |
| ೭) | ಅನುವಾದ ಗ್ರಂಥಗಳು | ,, | ೨೧ |
| ೮) | ಇತರ (ಕಾದಂಬರಿ, ವಿಡಂಬನ ಇತ್ಯಾದಿ) | ,, | ೦೭ |
| ೯) | ಅಪ್ರಕಟಿತ ಕೃತಿಗಳು | ,, | ೦೪ |
| | | | ೧೦೪ |

ಸಿಂಪಿ ಲಿಂಗಣ್ಣನವರ ಜನಪದ ಕಾರ್ಯವನ್ನು ೧) ಸಂಗ್ರಹಕಾರ್ಯ ೨) ಅರ್ಥವಿವರಣ ೩) ಬಿಡಿ ಲೇಖನಗಳು ಎಂದು ಸ್ಥೂಲವಾಗಿ ವಿಂಗಡಿಸಬಹುದು. ಗೆಳೆಯರ ಗುಂಪಿನಲ್ಲಿದ್ದುಕೊಂಡು ಅವರು ಮಾಡಿದ ಸಂಗ್ರಹಕಾರ್ಯವನ್ನು ಈ ಹಿಂದೆ ನೋಡಲಾಗಿದೆ. ಅದನ್ನುಳಿದು ಜಾನಪದಕ್ಕೆ ಸಂಬಂಧಿಸಿದ ಅವರ ಸಂಗ್ರಹಕಾರ್ಯವನ್ನು ಇಲ್ಲಿ ನೋಡೋಣ.

**ಸಿಂಪಿ ಲಿಂಗಣ್ಣನವರ ವೈಯಕ್ತಿಕ ಜಾನಪದ ಕಾರ್ಯ :**

**ಉತ್ತರ ಕರ್ನಾಟಕದ ಕಥೆಗಳು**

ಇದು ಕೇಂದ್ರ ಸಾಹಿತ್ಯ ಆಕಾಡೆಮಿಯವರು ಪ್ರಕಟಿಸಿದ ಸಿಂಪಿ ಲಿಂಗಣ್ಣನವರ ಜನಪದ ಕಥಾಸಂಗ್ರಹ. ೧೯೭೭ರಷ್ಟು ಹಿಂದೆಯೇ ಇದರ ೨ನೆಯ ಆವೃತ್ತಿಯೂ ಬಂದಿದೆ. ಸಿಂಪಿಯವರು ೧) ರಮ್ಯ ಕಥೆಗಳು ೧೬, ೨) ಅತಿಮಾನುಷ ಕಥೆಗಳು ೧೧, ೩) ವಾಸ್ತವಿಕ ಕಥೆಗಳು ೧೪, ೪) ಬುದ್ಧಿವಂತಿಕೆಯ ಕಥೆಗಳು ೧೦, ೫) ವಿವರಣಾತ್ಮಕ ಕಥೆಗಳು ೨, ೬) ನೀತಿ ಕಥೆಗಳು ೫, ೭) ಪ್ರಾಣಿ ಕಥೆಗಳು ೫, ೮) ವಿನೋದ ಕಥೆಗಳು ೯ ಹೀಗೆ ೮ ವಿಭಾಗಗಳಲ್ಲಿ ಒಟ್ಟು ೭೨ ಕಥೆಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ತಾವು ಆಗಾಗ ಕೇಳಿದ ಹಲವು ಕಥೆಗಳನ್ನ ಸಿಂಪಿಯವರು ನೆನಪಿನಿಂದ ಬರೆದುದುಂಟು. ಸುಮಾರು ೧೫-೨೦ ಕಥೆಗಳು ಅವರ ಮಗಳು ಶ್ರೀಮತಿ ಭವತಾರಿಣಿಯವರು ಹೇಳಿದವಾಗಿದೆ. ೧೬ ಕಥೆಗಳನ್ನು ಬೀದರ ಜಿಲ್ಲೆಯ ಶ್ರೀಮತಿ ಮಾಣಿಕಮ್ಮ ಭಂಡೆ (ಮಾಳಗಾಂವ) ಅವರಿಂದ ಸಂಪಾದಿಸಲಾಗಿದೆ. ಈ ವಿವರವನ್ನು ಕೃತಿಯ ಆರಂಭದ ಮಾತಿನಲ್ಲಿ ನೋಡಬಹುದು.

ಲೇಖಕರು ಆರಂಭದಲ್ಲಿ ೧೨ ಪುಟಗಳಷ್ಟು ದೀರ್ಘವಾದ ಪರಿಚಯವನ್ನು ಕೊಟ್ಟಿರುವದು ಜನಪದ ಅಭ್ಯಾಸಿಗಳಿಗೆ ಸಹಾಯಕವಾಗಿದೆ.

ಸಂಗ್ರಹದ ಹೆಸರೇ ಸೂಚಿಸುವಂತೆ ಇಲ್ಲಿರುವ ಕಥೆಗಳೆಲ್ಲ ಉತ್ತರ ಕರ್ನಾಟಕದವು. ಆದರೆ ಅಲ್ಪ-ಸ್ವಲ್ಪ ವ್ಯತ್ಯಾಸಗಳೊಂದಿಗೆ ಇವು ದಕ್ಷಿಣ ಕರ್ನಾಟಕದಲ್ಲಿಯೂ ಪ್ರಚಲಿತವಾಗಿರುವುದನ್ನು ತಿಳಿಸುತ್ತ ಒಂದೆರಡು ಕಥೆಗಳ ದೃಷ್ಟಾಂತ ಕೊಟ್ಟಿದ್ದಾರೆ. ಕಥೆ ಎಂದರೇನು ? ಅದು ಹುಟ್ಟುವ ಬಗೆ ಎಂತು ? ಅದರಲ್ಲಿ ಮಾರ್ಪಾಡುಗಳಾಗುವದು ಹೇಗೆ ? ಅವುಗಳ ವಿಷಯ ವೈವಿಧ್ಯ-ಮೊದಲಾದ ವಿವರಗಳು ಮೊದಲ ಮಾತಿನಲ್ಲಿವೆ. ಹೈದರಾಬಾದ ಕರ್ನಾಟಕದ ಕಥೆಗಳನ್ನು ಅವುಗಳ ಪ್ರಾದೇಶಿಕ ಕಥನ ಸರಣಿಯೊಡನೆ ಉಳಿಸಿಕೊಳ್ಳಲಾಗಿದೆ. ಜನಪದ ನುಡಿಗಟ್ಟು ಹಾಗೂ ಅಭಿವ್ಯಕ್ತಿ ಕ್ರಮದಿಂದಾಗಿ ಈ ಕೃತಿ ಭಾಷಾ ವಿಜ್ಞಾನ ದೃಷ್ಟಿಯಿಂದಲೂ ಅಭ್ಯಾಸಯೋಗ್ಯವಾಗಿದೆ. ೧) ಒಂದು ಹಾಡು ಒಂದು ಕಥೆ, ೨) ಕಥೆಯದೇ ಕಥೆ - ಇವುಗಳಿಂದ ತಾವು ಕಲಿತ ಜನಪದ ಹಾಡು, ಕಥೆಗಳನ್ನು ಇತರರಿಗೆ ಹೇಳುವದು ಅನಿವಾರ್ಯವೆಂದು ನಮ್ಮ ಜನಪದರು ಭಾವಿಸಿದುದನ್ನು ಮನದಟ್ಟು ಮಾಡಿಕೊಡಲಾಗಿದೆ.

ಇಲ್ಲಿಯ ಕಥೆಗಳ ಬಗೆಗೆ ಬರೆಯುತ್ತ ಲೇಖಕರು ಈ ಕೃತಿಯ ಮೊದಲ ಮಾತಿ(ಪು. ೧೦)ನಲ್ಲಿ "ಜಗತ್ತೆಂದರೆ ಮನುಷ್ಯನೊಡನೆ ದೇವನು ಹೂಡಿದ ಪಗಡೆಯಾಟ. ಆಟದಲ್ಲಿ ಯುಕ್ತಿ ಸಂಗತವಾಗಿ ಪಗಡಿಗಳನ್ನು ಸರಿಸಾಡುವದಿದ್ದರೂ ಡಾಳು ಒಗೆಯದೆ ಪಗಡಿಗೆ ಕೈ ಹಚ್ಚುವಂತಿಲ್ಲ. ಆಟದಲ್ಲಿ ನಿಪುಣನಾದ ದೇವನು ಗೆಲ್ಲುವದು ಅಚ್ಚರಿಯಲ್ಲ. ಕೊಲುವೆನೆಂಬ ಭಾಷೆ ದೇವನದು ; ಗೆಲುವೆನೆಂಬ ಭಾಷೆ ಜೀವನದು. ಜೀವನು ಗೆಲುವಡೆಯದಿದ್ದರೆ ಬಿಡಲಿ. ಆತನು ಗೆಲುವೆನೆಂದು ಹೇಳಿಕೊಳ್ಳುವದು ದೊಡ್ಡದು. ಅದು ಶ್ರದ್ಧೆಯಿಂದ ದೊರಕೊಳ್ಳುವ ಬಲ. ಜನಪದ ಕಥೆಗಳಲ್ಲಿ ಅಂಥ ಜೀವಿಗಳು ಸುಳಿದು ಬರುತ್ತಾರೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇದು ಕನ್ನಡಿಗರ ಜೀವನ ಸಿದ್ಧಾಂತವೇ ಆಗಿದೆ.

ಇಲ್ಲಿ ಬಂದಿರುವ ಕಥೆಗಳಲ್ಲಿ ಕೆಲವನ್ನು ಜನಪದ ಹಾಡುಗಳಲ್ಲಿ ಗುರುತಿಸ ಬಹುದು : ಬಾರದ ಬರ (ಪು. ೯೮) ಬರದ ಹಾಡಿನ ಕಥೆ ; ಜಂಬು ನೀರಲ (ಪು. ೪೫). ಎಳ್ಳಾಮಾಸಿ ಹಾಡಿನ ಕಥೆ ; ತುಂಟ ಬೀಗ (ಪು. ೧೨೯) ತುಂಟ ತುಂಟರಿಗಿ ಗಂಟು ಬಿದ್ದರ....ಹಾಡಿನ ಕಥೆ - ಮುಂತಾದವುಗಳು ಕಥೆಗಳು ಹಾಡುಗಳಾಗಿಯೋ, ಹಾಡುಗಳು ಕಥೆಗಳಾಗಿಯೋ ಪರಿವರ್ತನಗೊಂಡಿರಬೇಕು. ಕೆಲವು ಕಥೆಗಳಲ್ಲಿ ಗ್ರಾಂಥಿಕ ಭಾಷಾ ಶೈಲಿ ಎದ್ದು ಕಾಣುವದು.

ಇಲ್ಲಿಯ ಕಥೆಗಳ ವರ್ಗೀಕರಣ ತಕ್ಕಮಟ್ಟಿಗೆ ಸಮಂಜಸವಾಗಿದೆ. ಆದರೆ ಕೆಲವು ಕಥೆಗಳು ಸರಿಯಾದ ವಿಭಾಗದಲ್ಲಿ ಸೇರಿಕೊಂಡಿಲ್ಲ. ಕೊನೆಯಾಸೆ, ಅತ್ತೆಯ



ಗೊಂಬೆ, ತುಂಟ ಬೀಗ ಇವು ವಿನೋದ ಕಥಾ ವಿಭಾಗದಲ್ಲಿ ಸೇರಬೇಕಾಗಿದ್ದು ಬೇರೆ ಬೇರೆ ವಿಭಾಗಗಳಲ್ಲಿ ಸೇರ್ಪಡೆಯಾಗಿವೆ. ಹಾಗೆಯೇ 'ದೀಪ ಮಾತಾಡಿತು' ವಾಸ್ತವಿಕ ಕಥೆಯಲ್ಲ.

ಸಿಂಪಿಯವರ ಸಂಗ್ರಹದ ಇಲ್ಲಿಯ 'ಹೂಂ ಅಂದರೆ ಒಂದೇ ಎಂಡಿ' ಈ ಕಥೆಯು ಡಾ॥ ಜೀ. ಶಂ. ಪ. ಅವರ 'ಕನ್ನಡ ಜನಪದ ಕಥೆಗಳು' ಕೃತಿಯಲ್ಲಿಯ 'ನಿನಗೆರಡು ನನಗೊಂದು' ಕಥೆಯನ್ನು ಹೋಲುತ್ತದೆ. ಇಲ್ಲಿಯ ಚೋಟಪ್ಪನ ಗೆಳೆಯರು (ಪು. ೧೬೭) ಕಥೆಯು ದಿ. ಪಂಜೆಯವರ 'ಮೆಣಸಿನ ಕಾಳವ್ವ' ಕಥೆಯನ್ನು ಹೋಲುವಂತಿದೆ. ಇಂತಹ ಕಥೆಗಳು ತುಲನಾತ್ಮಕ ಅಧ್ಯಯನಕ್ಕೆ ಸಹಾಯಕಾರಿ ಯಾಗುತ್ತವೆ.

ಈ ಕಥೆಗಳಲ್ಲಿ ವಿನೋದವಿದೆ. ನೀತಿ ತತ್ವಗಳ ನಿರೂಪಣೆಯಿದೆ. ಜೀವನದ ಹಲವು ಸಮಸ್ಯೆಗಳಿಗೆ ಪರಿಹಾರವಿದೆ. ಇದೊಂದು ಉತ್ತಮ ಜನಪದ ಕಥಾ ಸಂಗ್ರಹವೆನ್ನುವದರಲ್ಲಿ ಸಂದೇಹವಿಲ್ಲ. ಇಲ್ಲಿ ಬಳಸಿದ ಭಾಷೆ ಜಾನಪದವಾಗಿದ್ದರೆ ಕೃತಿಯ ಮೌಲ್ಯ ಇನ್ನೂ ಅಧಿಕವಾಗುತ್ತಿತ್ತು.

## ೨) ಅರ್ಥ ವಿವರಣ :

### ೧) ಗರತಿಯ ಬಾಳು

ಜನಪದ ಸಾಹಿತ್ಯದಲ್ಲಿ ಸಿದ್ಧಹಸ್ತರಾದ ಸಿಂಪಿ ಲಿಂಗಣ್ಣನವರು ಈ ಕೃತಿಯಲ್ಲಿ ಹೆಣ್ಣಿನ ಜೀವನದ ವಿವಿಧ ಮುಖಗಳನ್ನೂ ಅವರ ಬಾಳಿನ ಹಲವು ಹಂತಗಳನ್ನೂ ಸೊಗಸಾಗಿ ಮತ್ತು ಅನುಭವಪೂರ್ಣವಾಗಿ ಚಿತ್ರಿಸಿದ್ದಾರೆ.

'ಗರತಿಯ ಬಾಳು' ಕೃತಿಯಲ್ಲಿ ಗರತಿಯ ಅವತಾರ, ಸಂಸಾರವೇದ, ಗರತಿಯ ದಾನ, ಜೀವನ ನಿಷ್ಠೆ, ಭಕ್ತಿಯ ಬೆಳಕು, ನಡೆದಾಡುವ ಭೂಮಿ, ಕಾವ್ಯಮಾತೆ, ಹೊಸಯುಗದ ಹೊಸ್ತಿಲು - ಹೀಗೆ ಎಂಟು ಪ್ರಕರಣಗಳಿವೆ. ಲೇಖನಗಳಲ್ಲಿ ಪ್ರತ್ಯೇಕತೆಯಿದ್ದರೂ ಅಖಂಡತೆಯ ಸೂತ್ರವೊಂದಿದೆ. ಹಳ್ಳಿಯವರೆಂದು ಹೀಗಳೆಯುವ ನಮ್ಮ ಗರತಿಯರಲ್ಲಿ ಎಂತಹ ಸುಸಂಸ್ಕೃತ ಹೃದಯವಿದೆಯೆಂಬುದನ್ನು ಈ ಗ್ರಂಥವು ಮನಗಾಣಿಸಿಕೊಡುತ್ತದೆ. ಹೆಣ್ಣು ಮಕ್ಕಳ ಹಾಡು, ವಚನಗಳು, ಹೊನ್ನಮ್ಮನ ಹದಿಬದೆಯ ಧರ್ಮ ಮೊದಲಾದವುಗಳ ರಸಪಾಕವನ್ನು ಜಗತ್ತಿನ ಮಹಾಪುರುಷರ ವಿಚಾರದ ಪಡಿಯಚ್ಚಿನಲ್ಲಿ ಎರಕಹೊಯ್ದು ಕೆಲವು ಐತಿಹಾಸಿಕ ಸಂಗತಿಗಳ ಬಣ್ಣ ತೀಡಿ ಪವಿತ್ರವಾದ, ಪರಿಶುದ್ಧವಾದ, ಸುಂದರವಾದ ಗರತಿಯ ಬಾಳಪ್ರತಿಮೆಯನ್ನು ಕನ್ನಡಿಗರ ಕೈಗೆ ಕೊಟ್ಟಿದ್ದೇನೆ"- ಎಂದು ಲೇಖಕರು ಅರಿಕೆಯಲ್ಲಿ ಹೇಳಿಕೊಂಡಿದ್ದಾರೆ. "ಸತ್ಯದ ಸ್ಥಾಪನೆಯು ಮೊದಲಿಗೆ ಸ್ತ್ರೀಯಿಂದಲೇ ಆಯಿತು" (Truth is first conceived at woman -Walt Whitman) ಎಂಬ

ವಿಚಾರವನ್ನು ಇಂದು ಮತ್ತೆ ನೆನಪಿಸಿಕೊಳ್ಳಬೇಕಾದ ಅವಶ್ಯಕತೆಯಿದೆ. "ಮಾನವತೆಯನ್ನು ಪಡೆಯುವದಕ್ಕೆ ಪುರುಷನೇ ಕಾರಣನಾಗಿದ್ದಾನೆಂಬುದೂ ಅವನೇ ಇಂದಿನ ನಾಗರಿಕತೆಗೆ ಆಧಾರನೆಂಬುದೂ ಎಲ್ಲರ ಸಾಧಾರಣ ವಿಚಾರಕ್ಕೆ ನಿಲುಕುವ ಮಾತು. ಆದರೆ ಅಂಥ ಪುರುಷನನ್ನು ಹೆತ್ತವಳು ಹೆಂಗಸೆಂಬುದನ್ನು ಅಂಥ ಅಪತ್ಯವು ಪ್ರಾಪ್ತವಾಗುವ ಮೊದಲು ಅದನ್ನು ಚಿಂತಿಸಿದವಳು ಸ್ತ್ರೀಯೆಂಬುದನ್ನು ನಾವು ಮರೆತರಾಗದು"[11] ಎಂಬುದು ಲೇಖಕರ ಸ್ಪಷ್ಟ ಅಭಿಪ್ರಾಯ. ಅಂತೆಯೇ ಗರತಿ ಸಚ್ಚಿದಾನಂದ ಶಿಖರದಿಂದ ಇಳಿದು ತಾನು ಅಧಃಪತನ ಹೊಂದಿದರೂ ಲೋಕವನ್ನೆತ್ತಿ ಹಿಡಿಯ ಬಂದ ಶಕ್ತಿ.

'ಗರತಿಯ ಅವತಾರ' ಎಂಬ ಲೇಖನದಿಂದ ಇಲ್ಲಿಯ ಬರವಣಿಗೆ ಆರಂಭವಾಗಿದೆ. ಪರಮಾತ್ಮನು ಸಚ್ಚಿದಾನಂದ ಸ್ವರೂಪ. ಗಂಡು-ಹೆಣ್ಣುಗಳು ಶಿವ-ಶಕ್ತಿಯ ಸ್ವರೂಪ. ಆದಾಗ್ಯೂ ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ. ಅವಳು ಭಾಗೀರಥಿ. ದೇವನದಿಯ ಲೀಲೆಯಂತೆ ಗರತಿಯ ಆಟ. ಮಗಳು, ಹೆಂಡತಿ, ತಾಯಿ, ಅತ್ತೆ ಇವು ಮಾನವರೂಪದ ಗರತಿಯ ಮುಖ್ಯ ಸ್ವರೂಪಗಳೆಂದೂ ತಂಗಿ, ಅಕ್ಕ, ಮೊಮ್ಮಗಳು, ಸೊಸೆ, ಅತ್ತಿಗೆ, ನಾದಿನಿ, ನೆಗೆಣ್ಣಿ ಇವು ಅವಳ ಉಪಸ್ವರೂಪಗಳೆಂದೂ ಹೇಳಿದ್ದಾರೆ. 'ಸಂಸಾರವೇದ' ಎಂಬ ಮುಂದಿನ ಲೇಖನದಲ್ಲಿ ಹೆಣ್ಣಿನ ಬಾಲಲೀಲೆಗಳ ಚಿತ್ರಣ ಸೊಗಸಾಗಿದೆ ಕಾಡಿಗೆ ಹಚ್ಚಿದ ಕಣ್ಣು, ತೀಡಿ ಮಾಡಿದ ಹುಬ್ಬು, ಮಾವಿನ ಹೋಳಿನಂಥ ಕಣ್ಣು ಈ ಕೂಸು ನನಗಿರಲಿ ಎನಿಸದೇ ಇರದು. ಅವಳು ತುಸು ಬೆಳೆದು ನಿಂತಾಗ 'ನಡೆದರೆ ನಡುಸಣ್ಣ, ಪದುಮ ಜಾತಿಯ ಹೆಣ್ಣ', 'ಅರಿಶಿಣ ಹಚ್ಚಿದ ಮಾರಿ', 'ಆಕೆಯ ದನಿ ಸುದ್ದ, ಗುಣ ಸುದ್ದ'. ಇನ್ನೂ ಬೆಳೆದಾಗ 'ಮೂಗುತಿ ಮುಂಭಾರ, ತುರುಬಿನ ಹಿಂಭಾರ' ಇದು ತವರುಮನೆಯ ಹೆಣ್ಣಿನ ಚಿತ್ರಣ. ಅವಳು ಅತ್ತೆಯ ಮನೆಗೆ ಬಂದಾಗ - ಗಂಡನಿಗೆ ಹೆಂಡತಿ ; ಅತ್ತೆ-ಮಾವಂದಿರ ಸೊಸೆ : ನಾದಿನಿ, ಭಾವ, ಮೈದುನರಿಗೆ ಅತ್ತಿಗೆ ಹೀಗೆ ಹಲವಾರು ಪಾತ್ರಗಳಲ್ಲಿ ಕಾಣಿಸಿಕೊಳ್ಳುವಳು. ಅವಳ ಭಕ್ತಿ, ಔದಾರ್ಯ, ಕಕ್ಕುಲತೆ, ಜೀವನಿಷ್ಠೆ ಇವುಗಳ ಪರಿಚಯ ಮಾಡಿಕೊಡಲಾಗಿದೆ. ಅವಳ ಅಜರಾಮರ ಹಾಡುಗಳ ರಚನೆಯ ವಿವರವನ್ನು ಇಲ್ಲಿ ಕೊಟ್ಟಿದ್ದಾರೆ. 'ಗರತಿಯ ದಾನ' ಲೇಖನದಲ್ಲಿ ಅವಳ ಸಂತಾನವೇ ಅವಳ ದಾನ ಎಂಬುದನ್ನು ತಿಳಿಸುತ್ತ, ಅವಳ ಬಸಿರು, ಬಯಕೆ, ಪ್ರಸವವೇದನೆ, ಬಂಜೆಯ ಮನದಳಲು ಇದಕ್ಕೆ ಸಂಬಂಧಿಸಿದ ತ್ರಿಪದಿಗಳನ್ನು ಉದಾಹರಿಸಿದ್ದಾರೆ. ಅವಳ ತ್ಯಾಗಕ್ಕೆ ಕಲ್ಲನಕೇರಿ ಮಲ್ಲನಗೌಡನ ಕಥೆಯಂತಹ ಉದಾಹರಣೆ ನೀಡಿದುದು ಸೂಕ್ತವಾಗಿದೆ. 'ಜೀವನ ನಿಷ್ಠೆ'ಯಲ್ಲಿ ಬಡತನ, ಗೃಹಕಲಹ, ಅಮಿತಸಂತಾನಗಳು ನಮ್ಮ ಬಾಳಿನ

---

11. ಸಿಂಪಿ ಲಿಂಗಣ್ಣ : ಗರತಿಯ ಬಾಳು (೧೯೬೫) ಪು. 119



ಅನಿಷ್ಟವೆಂದು ಸಾರಿದ್ದಾರೆ. 'ಭಕ್ತಿಯ ಬೆಳಕು' ಲೇಖನದಲ್ಲಿ ಅವಳ ಭಕ್ತಿಯ ಚಿತ್ರಣವಿದೆ. 'ನಡೆದಾಡುವ ಭೂಮಿ' ಎಂಬುದು ಮುಂದಿನ ಲೇಖನ. ಇಲ್ಲಿ ಭೂಮಿಗೂ, ಗರತಿಗೂ ಇರುವ ಹೋಲಿಕೆಯನ್ನು ಗುರುತಿಸಲಾಗಿದೆ. 'ಕಾವ್ಯಮಾತೆ'ಯಲ್ಲಿ ಕಾಂತೆಯರ ಮಾತೇ ಕಾವ್ಯಮಾತೆ ಎಂಬುದನ್ನು ದೃಢೀಕರಿಸಿದ್ದಾರೆ. 'ಹೊಸಯುಗದ ಹೊಸ್ತಿಲು' ಈ ಕೃತಿಯಲ್ಲಿ ಕೊನೆಯ ಲೇಖನವಾಗಿದ್ದು, ಈಗ ನಾವಿರುವದು ಸಂಧಿಕಾಲವೆಂದು ಹೇಳಿ ಉಷಃಕಾಲ ಬರುವದೆಂಬ ಆಶಾವಾದಿಗಳಾಗಿದ್ದಾರೆ. ಶ್ರೀ ಅರವಿಂದರ ಒಂದು ಸಂದೇಶದೊಡನೆ ಕೃತಿ ಮುಕ್ತಾಯವಾಗುತ್ತದೆ. ಅಪ್ರತಿಮ ತ್ರಿಪದಿಗಳು, ಒಗಟುಗಳು, ಕೋಲುಪದಗಳು, ಕಥನಗೀತೆಗಳು ಈ ಕೃತಿಯ ತುಂಬ ಹರಹಿಕೊಂಡಿವೆ. ಈ ಕೃತಿಯ ಬಗೆಗೆ "ಗರತಿಯರ ಹೃದಯದಿಂದ ಹೊರ ಹೊಮ್ಮಿದ ತ್ರಿಪದಿಗಳಲ್ಲಿ ಎಂತಹ ಶಕ್ತಿ-ಸೌಂದರ್ಯಗಳು ಹುದುಗಿವೆಯೆಂಬುದನ್ನು ಮನಗಾಣಲು ಈ ಪುಸ್ತಕವನ್ನೊಮ್ಮೆ ಓದಲೇಬೇಕು"[12] ಎಂದಿರುವ ಅಭಿಪ್ರಾಯವನ್ನು ಗಮನಿಸಬೇಕು.

## ೨. ಜನಾಂಗದ ಜೀವಾಳ

ಹದಿನಾಲ್ಕು ಜಾನಪದ ಲೇಖನಗಳ ಸಂಕಲನವಿದು. 'ಜನಪದ ಸಾಹಿತ್ಯವು ಜನಾಂಗದ ಜೀವಾಳ' ಎಂಬುದು ಇಲ್ಲಿಯ ಮೊದಲ ಲೇಖನ. ಇದು ರಬಕವಿಯಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದ ಜಾನಪದ ಗೋಷ್ಠಿಗಾಗಿ ಸಿದ್ಧಪಡಿಸಿದ್ದು. 'ಲಾವಣಿಯ ಲಾವಣ್ಯ'ವು ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣದ ಉಪನ್ಯಾಸ. 'ಜನಪದ ಸಾಹಿತ್ಯ ಮತ್ತು ಅದರ ಸ್ಥಾನ', 'ಜನಪದ ಸಾಹಿತ್ಯದಲ್ಲಿ ಕಂಡುಬರುವ ಜನ ಜೀವನ', 'ಹಳ್ಳಿಯ ಹಾಡುಗಳಲ್ಲಿ ದೇಶಾಭಿಮಾನ', 'ನಿತ್ಯ ಜೀವನದಲ್ಲಿ ಹಳ್ಳಿಯ ಹೆಣ್ಣು ಮಕ್ಕಳ ಹಾಡುಗಳು', 'ಮದುವೆಯ ಹಾಡುಗಳು', 'ಜನಪದ ಸಾಹಿತ್ಯದಲ್ಲಿ ಅದ್ಭುತ ಕಥೆಗಳು', 'ಬಯಲಾಟದ ಪದಗಳು' ಇವು ಬೇರೆ ಬೇರೆ ಸಂದರ್ಭಗಳಲ್ಲಿ ಧಾರವಾಡ ಆಕಾಶವಾಣಿಯಿಂದ ಬಿತ್ತರಗೊಂಡ ಪ್ರಬಂಧಗಳು. ಉಳಿದ ಲೇಖನಗಳಲ್ಲಿ 'ಜನಪದ ಜೀವನದಲ್ಲಿ ಹಾಸ್ಯ', 'ಒಡಗತೆಗಳ ಸ್ವಾರಸ್ಯ', 'ಜನಪದ ಸಾಹಿತ್ಯದಲ್ಲಿ ಶಿವಾನುಭವ' ಇವು ಈ ಗ್ರಂಥಕ್ಕಾಗಿ ಬರೆದವು. 'ಗರತಿಯ ಹಾಡು' ಲೇಖನವು 'ಗರತಿಯ ಹಾಡು' ಕೃತಿಯ ಅರಿಕೆಯಲ್ಲಿ ಪ್ರಕಟಗೊಂಡದ್ದು. ಈ ಕೃತಿಯ ಬಗೆಗೆ ಲೇಖಕರು 'ಜನಪದ ಸಾಹಿತ್ಯದ ವಿವಿಧಾಂಗಗಳನ್ನು ಒತ್ತಟ್ಟಿಗೆ ಪವಣಿಸಿದರೆ ಅದರ ಯಥಾವತ್ತಾದ ಸ್ವಾರಸ್ಯವನ್ನು ಅರಿತುಕೊಳ್ಳಲಿಕ್ಕೂ, ಅದರ ಎತ್ತರ-ಬಿತ್ತರ-ಆಳಗಳನ್ನು ಅಳೆದು ನೋಡಲಿಕ್ಕೂ ಅನುಕೂಲವಾಗಬಹುದೆಂದು

---

12. ಕೆ. ಮರುಳಪ್ಪ : ಕನ್ನಡ ನುಡಿ – ಡಿಶಂಬರ ೧೯೬೬

ಇದನ್ನು ಪ್ರಕಟಿಸುವ ಸಾಹಸ ಮಾಡಿದೆ' ಎಂದು ಈ ಗ್ರಂಥ ಪ್ರಕಟನೆಯ ಉದ್ದೇಶವನ್ನು ತಿಳಿಸಿದ್ದಾರೆ. ಇಲ್ಲಿಯ ಎಲ್ಲ ಲೇಖನಗಳಲ್ಲಿ ಜಾನಪದ ಸತ್ವವಿದೆ.

'ಜನಪದ ಸಾಹಿತ್ಯವು ಜನಾಂಗದ ಜೀವಾಳ' ಲೇಖನದಲ್ಲಿ ಜನಪದ ಸಾಹಿತ್ಯದ ವಿವರಣೆ ನೀಡಿ ನಮ್ಮ ಗರತಿಯರ ಬಾಳಿನಲ್ಲಿ ಹಾಸುಹೊಕ್ಕಾಗಿರುವ ದೈವಭಕ್ತಿ, ಜೀವನ ನಿಷ್ಠೆ, ಬಂಧು-ಬಳಗ-ಮಿತ್ರರಲ್ಲಿ ಕಕ್ಕುಲತೆ - ಎಂದು ಇವುಗಳ ವಿವರಣೆ ನೀಡಿದ್ದಾರೆ. 'ಹಾಡು ಹಿಗ್ಗಿಗಾಗಿ', 'ನಮ್ಮ ಬದುಕಿನಂತೆ ನಮ್ಮ ಸಾಹಿತ್ಯ' ಎಂದು ಹೇಳಿ ಜನಪದ ಸಾಹಿತ್ಯದಲ್ಲಿರುವ ಆನಂದದ ದರ್ಶನ ಮಾಡಿಸಿದ್ದಾರೆ. 'ಜನಪದ ಸಾಹಿತ್ಯ ಮತ್ತು ಆದರ ಸ್ಥಾನ' ಎಂಬ ಲೇಖನದಲ್ಲಿ 'ಜನವಾಣಿ ಬೇರು ಕವಿವಾಣಿ ಹೂವು' ಎಂಬ ನಿಲುವೆಯಿದೆ. 'ಜನಪದ ಸಾಹಿತ್ಯದಲ್ಲಿ ಕಂಡುಬರುವ ಜನಜೀವನ' ಈ ತಲೆ ಬರಹದ ಅಡಿಯಲ್ಲಿ ನಮ್ಮ ಜನಪದರು ಬೇಸಾಯಗಾರರು. ಅದು ಮಳೆಯನ್ನವಲಂಬಿಸಿದ ಉದ್ಯೋಗ. ಮಳೆಯೆಳಸಿದಾಗ ಪ್ರಾರ್ಥನೆ, ಮಳೆ ಬಂದಾಗ ಕೃತಜ್ಞತೆ. ಹೀಗಾಗಿ ದೇವರಿಗೂ ಅವರಿಗೂ ನಂಟು. ಗರತಿಯ ದೈವೀಶ್ರದ್ಧೆ ಜಾಗೃತವಾದುದು. ವರ್ಷವಿಡೀ ಹಬ್ಬ-ಹರಿದಿನಗಳು, ಜಾತ್ರೆ-ಸಮಾರಂಭಗಳು ಆಗ ದೇವರಿಗೆ ಪ್ರಾಶಸ್ತ್ಯ, ಇತ್ಯಾದಿ ವಿಚಾರಗಳಿವೆ. 'ಹಳ್ಳಿಗಳಲ್ಲಿ ದೇಶಾಭಿಮಾನ' ಬರಹದಲ್ಲಿ ಹಳ್ಳಿಗರ ಹಾಡುಗಳಲ್ಲಿ ದೇಶಾಭಿಮಾನ ತುಂಬಿರುವದನ್ನು ತಿಳಿಸುತ್ತ ಅವರ ಲಾವಣಿಗಳಲ್ಲಿ ವೀರ ಜೀವನದ ಪದರುಗಳಿರುವದನ್ನು ಎತ್ತಿ ತೋರಿಸಿದ್ದಾರೆ. 'ಜಾನಪದ ಜೀವನದಲ್ಲಿ ಹಾಸ್ಯ' ಮತ್ತು 'ಒಡಗತೆಗಳ ಸ್ವಾರಸ್ಯ' ಈ ಲೇಖನಗಳಲ್ಲಿ ಆಯಾ ವಿಷಯಗಳ ನಿರೂಪಣೆ ಇದೆ.

'ನಿತ್ಯ ಜೀವನದಲ್ಲಿ ಹಳ್ಳಿಯ ಹೆಣ್ಣು ಮಕ್ಕಳ ಹಾಡುಗಳು' ಇದು ಪ್ರಶ್ನೋತ್ತರ ರೂಪದಲ್ಲಿದೆ. ಹೆಣ್ಣು ಮಕ್ಕಳು ದಿನವಿಡೀ ಹಾಡುವ ಸಂದರ್ಭ, ಆ ಹಾಡುಗಳಲ್ಲಿ ಸಾಹಿತ್ಯ ಲಕ್ಷಣಗಳು, ಆ ಸಾಹಿತ್ಯದಲ್ಲಿ ಕಾಣುವ ಜೀವನ ಚಿತ್ರ. ಅದು ಬದುಕಿ ಬಂದ ಕಾರಣ – ಇವುಗಳ ವಿವರಣೆಯಿದೆ. 'ಮಕ್ಕಳನ್ನಾಡಿಸುವ ಹಾಡುಗಳು' ಪ್ರಬಂಧದಲ್ಲಿ ಲಾಲಿಯ ಹಾಡುಗಳ ಪರಿಚಯವಿದೆ. 'ಮದುವೆಯ ಹಾಡುಗಳು' ಲೇಖನದಲ್ಲಿ ಅಂದಿನ ಮದುವೆಯ ವಿವಿಧ ವಿಧಾನಗಳ ಹಾಗೂ ಆಯಾ ಸಂದರ್ಭದ ಹಾಡುಗಳ ಸಮಗ್ರ ಚಿತ್ರಣವಿದೆ. 'ಜನಪದ ಸಾಹಿತ್ಯದಲ್ಲಿ ಅದ್ಭುತ ಕಥೆಗಳು' ಲೇಖನದಲ್ಲಿ ಕಥೆಯ ವಸ್ತು, ಪಾತ್ರ ಚಿತ್ರಣ, ಅತಿಶಯೋಕ್ತಿ ಮತ್ತು ಅದ್ಭುತ ರಸಗಳಿಂದ ಕೂಡಿದ ಕಥೆಗಳ ಪರಿಚಯವಿದೆ. 'ಬಯಲಾಟದ ಹಾಡುಗಳು' ಹರಿಶ್ಚಂದ್ರ ಬಯಲಾಟದ ಹಾಡುಗಳನ್ನು ಪರಿಚಯಿಸುವ ಲೇಖನವಾಗಿದೆ. 'ಲಾವಣಿ ಹಾಡುಗಳು' ಇದು ಲಾವಣಿ ಸಾಹಿತ್ಯದ ಪರಿಚಯಾತ್ಮಕ ಲೇಖನ. ಲಾವಣಿಗಳ ಹರದೇಶಿ-ನಾಗೇಶಿ (ತುರಾಯಿ-ಕಲ್ಗಿ) ಪ್ರಕಾರಗಳನ್ನು ವಿವರಿಸಿ, ಆ ಹಾಡಿನಲ್ಲಿ ಕೆಲವು ನುಡಿಗಳು ಒಂದು ಚಾಲ ಸೇರಿದರೆ ಚೌಕವಾಗುವದು. ಇಂತಹ



೪-೫ ಚೌಕುಗಳು ಸೇರಿದರೆ ಒಂದು ಲಾವಣಿಯಾಗುವದು. ಲಾವಣಿಯ ಆರಂಭಕ್ಕೆ ಸಖಿ ಕೊನೆಗೆ ಖ್ಯಾಲಿ ಹಾಡುವರು. ಇಲ್ಲಿ ಬಯಲು ಲಾವಣಿಯ ಪರಿಚಯವನ್ನೂ ಲೇಖಕರು ಮಾಡಿಕೊಟ್ಟಿದ್ದಾರೆ. "ಲಾವಣಿಕಾರರು ಶೃಂಗಾರ ರಸವನ್ನು ಉಚಿತವಾಗಿ ಬಳಸಿ, ವೀರ ರಸವನ್ನು ಖಚಿತವಾಗಿ ಬಳಸಿ, ಹಾಸ್ಯರಸವನ್ನು ಹದವರಿತು ನುರಿಸಿ ತಮ್ಮ ಜೀವನವನ್ನು ಶಾಂತಿ ರಸದ ನಿಲ್ದಾಣಕ್ಕೆ ತಲುಪಿಸುವರು"[13] ಎಂಬ ಅವರ ವಿಚಾರವು ಮೆಲಕು ಹಾಕುವಂತಿದೆ. 'ಜನಪದ ಸಾಹಿತ್ಯದಲ್ಲಿ ಶಿವಾನುಭವ'– ಈ ಕೃತಿಯ ಕೊನೆಯ ಲೇಖನ. "ಪ್ರಕೃತಿಯಲ್ಲಿ ಜ್ಞಾನ, ಶಕ್ತಿ, ಶಾಂತಿಗಳನ್ನು ಅನುಭವಿಸುವದೇ ಶಿವಾನುಭವವಾಗುತ್ತದೆ"[14] ಎಂದು ತಿಳಿಸುತ್ತ ಲೇಖನದ ತುಂಬ ಅಪರೂಪದ ತ್ರಿಪದಿಗಳನ್ನು ಉದಾಹರಿಸಿದ್ದಾರೆ.

'ಜನಾಂಗದ ಜೀವಾಳ'ದಲ್ಲಿ ಕರ್ನಾಟಕದ ಜನಜೀವನ, ಸಾಹಿತ್ಯ, ಸಂಸ್ಕೃತಿಗಳ ನೈಜ ಚಿತ್ರವನ್ನು ಕಾಣುತ್ತೇವೆ. ಹಲವಾರು ತ್ರಿಪದಿಗಳ, ಒಡಪು-ಒಗಟುಗಳ, ಲೋಕೋಕ್ತಿಗಳ, ಜನಪದ ಬಳಕೆ ಮಾತುಗಳ ಉದಾಹರಣೆಗಳು ಕೃತಿಯಲ್ಲಿ ಹಾಸು-ಹೊಕ್ಕಾಗಿವೆ.

### ೩. ಉತ್ತರ ಕರ್ನಾಟಕದ ಜನಪದ ಗೀತೆಗಳು

ಈ ಕಿರು ಹೊತ್ತಿಗೆಯಲ್ಲಿ ವಿಜಾಪುರ, ಧಾರವಾಡ, ಬೆಳಗಾವಿ ಜಿಲ್ಲೆಗಳ ಜನಪದ ಗೀತೆಗಳ ಪರಿಚಯವಿದೆ. ಜನಪದ ಗೀತೆಗಳನ್ನು ಮಕ್ಕಳ ಹಾಡು, ಗಂಡಸರ ಹಾಡು, ಹೆಂಗಸರ ಹಾಡು - ಎಂದು ವಿಂಗಡಿಸಿ, ಜನಪದ ಸಾಹಿತ್ಯವನ್ನು ಹಾಲಿಗೂ ಶಿಷ್ಟ ಸಾಹಿತ್ಯವನ್ನು ಕೆನೆಗೂ ಹೋಲಿಸಲಾಗಿದೆ.

ಜನಪದ ಸಾಹಿತ್ಯವು ಶಿಷ್ಟ ಸಾಹಿತ್ಯದ ಮೇಲೆ ಪ್ರಭಾವ ಬೀರಿದುದನ್ನು ಇಲ್ಲಿ ತಿಳಿಸಲಾಗಿದೆ. ೧೨ನೆಯ ಶತಮಾನದಲ್ಲಿ ಶರಣರ ಸಾಹಿತ್ಯ ಕ್ರಾಂತಿಯಿಂದಾಗಿ ಕಾವ್ಯದ ವಸ್ತು, ಭಾಷೆ, ರೂಪಗಳು ದೇಶಿಗೆ ಮಾರ್ಪಾಡುಗೊಂಡವು ಎಂಬುದನ್ನು ಗಮನಿಸುತ್ತ "ರಗಳೆ, ಷಟ್ಪದಿ, ಸಾಂಗತ್ಯ- ಮೊದಲಾದ ದೇಸಿಯ ಬಂಧಗಳು ಕಾವ್ಯ ಪ್ರಕಾರಗಳಾಗಿ ಪರಿಣಮಿಸಿದವು. ಅದರಂತೆ 'ಓವಿ' ಎಂಬ ಸಾಹಿತ್ಯ ಪ್ರಕಾರವು ಕೇರುವ, ಕುಟ್ಟುವ, ಬೀಸುವ ಹಾಡು - ಎಂಬರ್ಥಗಳನ್ನು ಸೂಚಿಸಿದರೆ, ಒನಕೆಹಾಡು, ಬಿದಿರಕ್ಕಿಯನ್ನು ಕುಟ್ಟುವಾಗ ಬೇಡತಿಯರು ಹಾಡುವ ಹಾಡುಗಳೆಂದು ಸನ್ನೆ ಮಾಡುತ್ತದೆ. ಮಂಗಲ ವಿವಾಹದ ಕಾಲಕ್ಕೆ ಸುಮಂಗಲೆಯರು ಹಾಡುವ ಗೀತೆಗಳೇ ಧವಲಗೀತೆಗಳು. ದೀಪಾವಳಿ ಹಬ್ಬದ ಸಂದರ್ಭದಲ್ಲಿ ದನಗಾಹಿಗಳು ಬೆಳಗುವ

13. ಸಿಂಪಿ ಲಿಂಗಣ್ಣ : ಜನಾಂಗದ ಜೀವಾಳ (೧೯೬೦) ಪು. ೧೫೧
14. ಸಿಂಪಿ ಲಿಂಗಣ್ಣ : ಜನಾಂಗದ ಜೀವಾಳ (೧೯೬೦) ಪು. ೧೫೩

'ಆಣಿಪೀಣಿಗೆ'- ಅಂಟಿಗೆ-ಸುಂಟಿಗೆ ಎಂಬ ಇನ್ನೊಂದು ಹೆಸರಿದೆ"[15] ಎಂದಿದ್ದಾರೆ. ವಿವಿಧ ಸನ್ನಿವೇಶಗಳಲ್ಲಿ ಹಾಡುವ ಹೆಂಗಸರ ಹಾಡು, ಗಂಡಸರ ಹಾಡುಗಳ ವಿವರಣೆ ಕೊಡಲಾಗಿದೆ. ಅವಶ್ಯವಿದ್ದೆಡೆ ರೇಖಾಚಿತ್ರ, ಛಾಯಾಚಿತ್ರಗಳನ್ನು ಕೊಡಲಾಗಿದೆ. ಹಾಡುವ ಸಂದರ್ಭ, ರೀತಿ, ಬಗೆಗಳ ಪರಿಚಯ ಇಲ್ಲಿ ಸಮರ್ಪಕವಾಗಿದೆ. ಇದು ಮಕ್ಕಳಿಗಾಗಿ ಬರೆದ ಕೃತಿಯಾದರೂ ಹಿರಿಯರಿಗೆ ಉಪಯುಕ್ತವಾದ ಹಲವು ವಿಷಯಗಳು ಇಲ್ಲಿವೆ.

## ೪. ಜನಪದ ಸಾಹಿತ್ಯದಲ್ಲಿ ಕಿರಿದರೊಳೆ ಪಿರಿದರ್ಥದ ಚಲಕ

ಜಾನಪದ ಕುರಿತ ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಮಾಲೆಯ ಪುಟ್ಟ ಪುಸ್ತಕವಿದು. ಈ ಕೃತಿಯಲ್ಲಿ ಹತ್ತು ಉಪಶೀರ್ಷಿಕೆಗಳಡಿಯಲ್ಲಿ ಒಂದು ಆದರ್ಶವನ್ನು ಕುರಿತು ವಿವೇಚಿಸಲಾಗಿದೆ. 'ಜೀವನ ಸಾಹಿತ್ಯಗಳ ತಳಕು' ಎಂಬ ಮೊದಲ ಶೀರ್ಷಿಕೆಯಲ್ಲಿ "ಮನಸ್ಸಿನೊಳಗಿನ ಭಾವನೆಯನ್ನು ಹಾಡಿಯೋ ಮಾತಾಡಿಯೋ ಪ್ರಕಟಗೊಳಿಸುವ ಕ್ರಮವೇ ಸಾಹಿತ್ಯದ ಬುನಾದಿಯೆನ್ನ ಬಹುದಾಗಿದೆ"[16] ಎಂದು ಸಾಹಿತ್ಯದ ವ್ಯಾಖ್ಯೆ ಕೊಡಲಾಗಿದೆ. ಜೀವನ ಹಾಗೂ ಸಾಹಿತ್ಯಗಳು ಒಂದನ್ನುಳಿದು ಇನ್ನೊಂದಿಲ್ಲ ಎಂಬುದು ಲೇಖಕರ ಅಭಿಪ್ರಾಯ. ನುಡಿಯ ಹುಟ್ಟು ಗುಟ್ಟು- ತಲೆಬರಹದಲ್ಲಿ ಕಂಡು ನುಡಿದದ್ದೇ ಕನ್ನುಡಿ. ನಮ್ಮಲ್ಲಿ ಮಳೆ ರಪರಪ ಬರುತ್ತದೆ, ನೀರು ಧಬಧಬ ಹರಿಯುತ್ತದೆ - ಇತ್ಯಾದಿ. ಇದು ನಮ್ಮ ಭಾಷೆಯ ಹುಟ್ಟಿನ ಗುಟ್ಟು ಎಂದಿದ್ದಾರೆ ಸಿಂಪಿಯವರು. 'ಬಳಕೆಯ ಶಬ್ದಗಳೆಲ್ಲ ನುಡಿಯ ನಾಣ್ಯಗಳೇ'– ನಮ್ಮ ಜನಪದರ ಹಲವು ಶಬ್ದಗಳಲ್ಲಿ ಅರ್ಥಸಂಪತ್ತು ತುಂಬಿಕೊಂಡಿದೆ ಎಂದು ತಿಳಿಸುತ್ತ ತೊಳೆನೀರು, ಉಡಿದೆನೆ–ಹಿಡಿದೆನೆ, ಮೂಗುಮುರಿ, ಉಮ್ಮಗಿ, ಹಂಡಬಂಡ – ಮೊದಲಾದ ಸೂಕ್ತ ಉದಾಹರಣೆಗಳನ್ನು ಕೊಟ್ಟಿದ್ದಾರೆ. 'ಹದವರಿತ ಬಳಕೆ' ಲೇಖನದಲ್ಲಿ ಭಾಷೆಗೆ ಜೋರು ಬರುವಂತೆ– ಜನಪದರು ಯೋಜಿಸಿದ ಮುಖ್ಯವಾದ ನಾಲ್ಕು ಉಪಾಯಗಳನ್ನು ಹೇಳಿದ್ದಾರೆ.

"....ಜನಪದಕಾರರು ಹೇಗೆ ವಿಶೇಷಣಗಳನ್ನು ಬಳಸುತ್ತಿದ್ದರು. ಪಡೆನುಡಿಗಳ ಮೂಲಕ ಪಿರಿದರ್ಥವನ್ನು ಮೂಡಿಸುತ್ತಿದ್ದರು. ಗಾದೆ ಮತ್ತು ಒಗಟುಗಳ ಬಳಕೆ, ಅವುಗಳ ಅಂದ, ಅಡ್ಡಕಥೆಗಳ ಬಳಕೆ ಇವೆಲ್ಲವನ್ನು ಲೇಖಕರು ಸ್ವಾರಸ್ಯವಾಗಿ ವಿವರಿಸಿದ್ದಾರೆ. ಸ್ವಲ್ಪದರಲ್ಲಿ ಜನಪದ ಸಾಹಿತ್ಯದ ಬೆಡಗನ್ನು ನೇರವಾಗಿ ಹೃದಯ ಹೊಕ್ಕು ಮಿಡಿಯುವಂತೆ ವಿವರಿಸಿರುವ ಲೇಖಕರ ಪಿರಿದರ್ಥದ ಚಲಕ

15. ಸಿಂಪಿ ಲಿಂಗಣ್ಣ : ಉತ್ತರ ಕರ್ನಾಟಕದ ಜನಪದ ಗೀತಗಳು (೧೯೭೫) ಪು. ೯
16. ಸಿಂಪಿ ಲಿಂಗಣ್ಣ : ಜನಪದ ಸಾಹಿತ್ಯದಲ್ಲಿ ಕಿರಿದರೊಳೆ ಪಿರಿದರ್ಥದ ಚಲಕ, ಅರಿಕೆ, ಪು. ೫



ಮೆಚ್ಚುವಂತಿದೆ"[17] ಎಂದು ಒಬ್ಬ ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ. ಈ ಕಿರುಹೊತ್ತಿಗೆಯಲ್ಲಿ ಜನಪದ ಸಾಹಿತ್ಯದ ಸತ್ವವು ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಲೇಖಕರು ಬಳಸಿದ ತ್ರಿಪದಿಗಳ, ಲಾವಣಿಗಳ ಉದಾಹರಣೆಗಳಿಂದ ವಿಷಯವು ಮನದಾಳದಲ್ಲಿ ಅಚ್ಚೊತ್ತಿ ನಿಲ್ಲುತ್ತದೆ.

## ೫. ಕನ್ನಡ ಲಾವಣಿಗಳು

ಈ ಕೃತಿಯಲ್ಲಿ ಲಾವಣಿ ಸಾಹಿತ್ಯದ ಪರಿಚಯವಿದೆ. ಲಾವಣಿ ಜಾನಪದ ಗೀತೆಗಳ ಸಹಸ್ರ ಮುಖಗಳಲ್ಲಿ ಒಂದು ಮುಖವಾಗಿದೆ. ಇದಕ್ಕೆ ಡಪ್ಪಿನ ಹಾಡು, ಪರದೇಶಿ-ನಾಗೇಶಿ ಹಾಡು, ಜೀಪದ, ಗೀಪದ - ಇತ್ಯಾದಿ ಹೆಸರುಗಳಿವೆ. ಲಾವಣಿ ಉತ್ಪತ್ತಿ ಕುರಿತು ಬರೆಯುತ್ತ "ಲಾವಣಿ ಎಂಬುದು ಮೂಲತಃ ಕನ್ನಡ ಶಬ್ದವೇ ಅಲ್ಲ....ಹೊಲವನ್ನು ಸಾಗುವಳಿ ಮಾಡುವುದಕ್ಕೆ 'ಲಾವಣಿ' ಎಂಬ ಶಬ್ದವನ್ನು ಉಪಯೋಗಿಸುತ್ತೇವೆ. ಲಾವಣ್ಯಕ್ಕೆ ಹತ್ತಗಡೆಯದಾಗಿರಲಾರದೇ ಲಾವಣಿ ಎಂಬ ಶಬ್ದ ? ಲಾವನಿಕಾ ಎಂಬ ಸಂಸ್ಕೃತ ಶಬ್ದದಿಂದ ಲಾವಣಿ ಆಗಿರಬಹುದೆಂದು ಕೆಲವರೂ, ಸುಂದರ ಎಂಬರ್ಥ ಕೊಡುವ ಲವಣ ಎಂಬ ಶಬ್ದದಿಂದ ಲಾವಣಿಯಾಗಿರ ಬಹುದೆಂದು ಕೆಲವರೂ ಹೇಳುತ್ತಾರೆ. ಸಂಸ್ಕೃತದ ಲೂ ಶಬ್ದಕ್ಕೆ ಕೊಯ್ಯುವದು ಎಂಬರ್ಥವಿರುವದರಿಂದ ಬೆಳೆ ಕೊಯ್ಯುವಾಗ ಹಾಡುವ ಹಾಡು 'ಲಾವಣಿ' ಎನಿಸಲೂ ಬಹುದಾಗಿದೆ"[18] ಎಂದಿದ್ದಾರೆ. ಲಾವಣಿ ಕುರಿತು ಅದರ ಉಗಮ, ವಿಕಾಸಗಳ ಅಧ್ಯಯನ ನಡೆಯಬೇಕಾದುದರ ಅವಶ್ಯಕತೆಯನ್ನು ಎತ್ತಿ ಹೇಳಿದ್ದಾರೆ.

ಸಮಗ್ರ ಕರ್ನಾಟಕದ ಲಾವಣಿಗಳಲ್ಲಿ ಉತ್ತರ ಕರ್ನಾಟಕದ ಲಾವಣಿಗಳು– ಛಂದಸ್ಸು, ಹಾಡಿನ ರೀತಿ, ಹಿಮ್ಮೇಳ, ಬಳಸುವ ವಾದ್ಯ - ಮೊದಲಾದವುಗಳಿಂದ ಲೋಕ ರಂಜನೆಯ ಗುಣವನ್ನೊಳಗೊಂಡಿದ್ದು ಅವು ವಿಶಿಷ್ಟವಾಗಿವೆ. ಮೇಳ ಲಾವಣಿ, ಬಯಲು ಲಾವಣಿಗಳಿಗಿರುವ ವ್ಯತ್ಯಾಸ, ಲಾವಣಿಯ ಸ್ಥೂಲಾಂಗಗಳಾದ– ಸಖಿ, ಪ್ರಧಾನ ಕಥನ, ಖ್ಯಾಲಿ - ಇವುಗಳ ವಿವರಣೆ ಇಲ್ಲಿದೆ. ಸಿಂಪಿಯವರು ಲಾವಣಿಗಳಲ್ಲಿ ಪೌರಾಣಿಕ, ಐತಿಹಾಸಿಕ, ಕಾಲ್ಪನಿಕ, ತಾತ್ವಿಕ ಹಾಗೂ ನೀತಿ ಬೋಧಕ- ಎಂದು ನಾಲ್ಕು ವಿಧವಾಗಿ ವಿಂಗಡಿಸಿ, ಉದಾಹರಣೆಗಳೊಂದಿಗೆ ಪ್ರತಿಯೊಂದರ ವಿವರ ನೀಡಿದ್ದಾರೆ.

ಶ್ರಾವಣ ಮಾಸವು ಲಾವಣಿ ಗೋಷ್ಠಿಗಳ ಸುಗ್ಗಿ ಎಂದಿದ್ದಾರೆ. ಲಾವಣಿ ಯೆಂದರೆ ಅನಾಗರಿಕ ಸಾಹಿತ್ಯ ಎಂಬ ಶಿಷ್ಟಜನರ ಭಾವನೆ ಈಗ ಬದಲಾಗಿದೆ

17. ತ್ರಿವೇಣಿ ಶಿವಕುಮಾರ : ಕನ್ನಡನುಡಿ, ಅಕ್ಟೋಬರ್, ನವೆಂಬರ್ ೧೯೭೮
18. ಸಿಂಪಿ ಲಿಂಗಣ್ಣ : ಕನ್ನಡ ಲಾವಣಿಗಳು (೧೯೭೭) ಪು. ೨-೩

ಎಂಬುದು ಲೇಖಕರ ಮತ. ಈ ಕೃತಿಯಲ್ಲಿ ಲಾವಣಿಯ-ಉಗಮ-ಆಗಮ-ಸಂಗಮಗಳನ್ನೂ, ಗುಣ - ರೂಪ - ಕ್ರಿಯೆಗಳನ್ನು ಅನುಭವಪೂರ್ಣವಾಗಿ ವಿವೇಚಿಸಿದ್ದಾರೆ.

### ೩. ಬಿಡಿಲೇಖನಗಳ ಸಂಕಲನ :

#### ೧. ಹೆಡಿಗೆ ಜಾತ್ರೆ

ಇದು ೧೭ ಲೇಖನಗಳ ಸಂಕಲನ. ಇಲ್ಲಿಯ ಬರಹಗಳ ಬಗೆಗೆ ಲೇಖಕರು "ಹೆಡಿಗೆ ಜಾತ್ರೆಯಲ್ಲಿ ಸಂಕಲನಗೊಂಡ ಪ್ರಬಂಧಗಳು ಹಸಿವು ಹಿಂಗಿಸುವ ಸವಿತಿನಿಸು ಮಾತ್ರ ಆಗಿರದೆ, ಹಸಿವು ಹುಟ್ಟಿಸುವ ಶಕ್ತಿವರ್ಧಕವೂ ಆಗಿರುವವೆಂದು ನಾನೆಣಿಸಿದ್ದೇನೆ" [19] ಎಂದಿದ್ದಾರೆ. ಜನಪದ ಸಾಹಿತ್ಯದ ವೈವಿಧ್ಯವನ್ನು ಈ ಲೇಖನಗಳಲ್ಲಿ ಕಾಣಬಹುದು.

ಜನಪದ ಸಾಹಿತ್ಯದ ವೈವಿಧ್ಯ-ಸೊಗಸು - ಎಂಬುದು ಇಲ್ಲಿಯ ಮೊದಲ ಲೇಖನ. 'ಆನೆ ಬಂತು ಆನೆ, ಯಾವೂರ ಆನೆ....' ಈ ಲಲ್ಲೆವಾತಿನಲ್ಲಿ ವಿಜಯನಗರ ಅರಸರನ್ನು ಸೋಲಿಸಿ, ಆದಿಲಶಹನ ಸೈನಿಕರು ಹಂಪೆಯನ್ನು ಲೂಟಿ ಮಾಡಿಕೊಂಡು ವಿಜಾಪುರದತ್ತ ಸಾಗಿದ ಐತಿಹಾಸಿಕ ಸಂಗತಿಗಳನ್ನು ಹೊಂದಿಸಿದ್ದಾರೆ. ಅದೇ ದುಡ್ಡು ಕೊಟ್ಟು - ಎಂಬ ಪ್ರಸ್ತಾಪ ಬಂದಾಗ ಲೇಖಕರು ಗಾದೆಗಳತ್ತ ಹೊರಳಿ ಹಲವು ಗಾದೆಗಳನ್ನು ಉದಾಹರಿಸಿದ್ದಾರೆ.

'ಜಾನಪದರಲ್ಲಿ ಸೌಂದರ್ಯ ಕಲ್ಪನೆ' - ಲೇಖನದಲ್ಲಿ ಅಸಾಮಾನ್ಯರಾದ ನಮ್ಮ ಜನಪದರ ಪರಿಚಯ ಮಾಡಿಕೊಡುತ್ತ "ನಮ್ಮ ಜನಪದವೆಂದರೆ ನಿಸರ್ಗದ ಮಡಿಲಲ್ಲಿ ಮಡಗಿರುವ ಮುಗ್ಧ ಮಗು. ಭೂಮಿ ತಾಯಿಯ ಚೊಚ್ಚಲ ಸಂತಾನ. ಅದು ಕಣ್ಣು ತೆರೆದು ಚೆಲುವಿನ ರಾಸಿಯನ್ನು ಕಾಣುತ್ತದೆ. ಕಿವಿಗೊಟ್ಟು ಒಲವಿನ ದನಿಯನ್ನು ಕೇಳುತ್ತದೆ. ಅದೊಂದು ಆತ್ಮಜಾಗ್ರತಿಯ ಸಾಧನೆ" [20] ಎಂದಿರುವರು. ಈ ಲೇಖನದಲ್ಲಿ ಪ್ರಕೃತಿ, ಋತುಮಾನ, ಸಂಸ್ಕೃತಿ ಎಲ್ಲ ಒಟ್ಟಾಗಿ ಪ್ರತಿಬಿಂಬಿತವಾಗಿರುವದನ್ನು ಕಾಣಬಹುದು. ಹಬ್ಬ-ಹರಿದಿನಗಳು, ಉತ್ಸವಾಮೋದಗಳು-ನಮ್ಮ ಜನಪದರ ಸೌಂದರ್ಯ ದೃಷ್ಟಿಯನ್ನು ಎತ್ತಿ ತೋರಿಸುತ್ತವೆ. ಜನಪದರು ಸ್ಥೂಲ ಸೌಂದರ್ಯದೊಡನೆ ಸೂಕ್ಷ್ಮ ಸೌಂದರ್ಯವನ್ನೂ ಮರೆತಿಲ್ಲ. ವಿವಿಧ ದೃಷ್ಟಾಂತಗಳೊಡನೆ ನಮ್ಮ ಜನಪದ ಸೌಂದರ್ಯ ಕಲ್ಪನೆಯ ಪರಿಚಯ ಮಾಡಿಕೊಟ್ಟಿದ್ದಾರೆ. 'ಸುಪ್ತ ಸತ್ಯವನ್ನು ಅನ್ವೇಷಿಸಿಕೊಳ್ಳುವದೇ ಸೌಂದರ್ಯ ಕಲ್ಪನೆಯಾಗಿದೆ' - ಎಂಬುದು

19. ಸಿಂಪಿ ಲಿಂಗಣ್ಣ : ಹೆಡಿಗೆ ಜಾತ್ರೆ (೧೯೮೧) ಅರಿಕೆ
20. ಸಿಂಪಿ ಲಿಂಗಣ್ಣ : ಹೆಡಿಗೆ ಜಾತ್ರೆ (೧೯೮೧) ಪು. ೧೧



ಸಿಂಪಿಯವರ ವ್ಯಾಖ್ಯೆ. ಇಲ್ಲಿಯ ಯೋಜನಾವಿಧಾನ ಸಿಂಪಿಯವರಂಥ ಜನಪದ ತಜ್ಞರಿಗೆ ಮಾತ್ರ ಸಾಧ್ಯವಾದುದು. 'ಜನಪದ ಸತ್ವ'- ಕುರಿತ ಲೇಖನದಲ್ಲಿ "ಜನಪದಕ್ಕೆ ಹೃದಯವಂತಿಕೆಯೇ ಜೀವಾಳವಾಗಿದೆ. ಅದರಲ್ಲಿಯೇ ಮನುಷ್ಯತ್ವದ ಮೊಳಕೆಯಿದೆಯಂತೆ ; ಅದೇ ಜನಪದ ಸತ್ಯ" [21] ಎಂದಿದ್ದಾರೆ. ಅವರು ಮುಂದುವರಿದು ಜನಪದ ಜೀವನ ಹಾಗೂ ಜನಪದಕಲೆ ಸತ್ವಪ್ರೇರಿತವಾಗಿವೆ. ಗರತಿಯರ ತ್ರಿಪದಿಗಳಲ್ಲಿ ಮಂತ್ರಶಕ್ತಿಯಿದ್ದು ಅವು ಸಂಸಾರವೇದಗಳಾಗಿವೆ. ಅಂದಿನ ಉದ್ಯೋಗಗಳು ಯಾಂತ್ರಿಕತೆಯಿಂದ ಇಂದು ನಿಂತು ಹೋಗಿ ಅದರ ಅಂಗವಾದ ಜನಪದ ಸಾಹಿತ್ಯ ಇಂದು ತಬ್ಬಲಿಯಾಗಿದೆ ಎನ್ನುತ್ತಾರೆ.

'ಹಾಡುಗಬ್ಬದ ಹಲವು ಬಗೆ' - ಲೇಖನದಲ್ಲಿ ಗಂಡಸರ ಹಾಡುಗಳಲ್ಲಿ ಲಾವಣಿಗಳೇ ಮುಖ್ಯ ಎಂದಿದ್ದಾರೆ. ಇಲ್ಲಿ ಹಲವಾರು ಲಾವಣಿಕಾರರ ಲಾವಣಿಗಳ ಪರಿಚಯ ಬಂದಿದೆ. ಗಂಡಸರ ಇನ್ನಿತರ ಹಾಡುಗಳಾದ-ಡೊಳ್ಳಿನ ಹಾಡು, ಅಣಿಪೀಣಿ ಹಾಡು, ಭಜನೆಯ ಹಾಡು – ಇವುಗಳನ್ನು ವಿವರಿಸುತ್ತ ಜನಪದ ಗೀತಗಳು ನಮ್ಮ ಸಂಸ್ಕೃತಿಯ ಹಿಡಿದೆನೆಗಳು ಎಂದಿದ್ದಾರೆ. 'ಜನಪದ ಸಾಹಿತ್ಯದ ಮುನ್ನಡೆ' ಎಂಬ ಲೇಖನದಲ್ಲಿ ಜನಪದ ಸಾಹಿತ್ಯದ ಅರ್ಧಶತಮಾನದ ಇತಿಹಾಸದಲ್ಲಿ ಮೂರು ಅವಸ್ಥೆಗಳಾದುದನ್ನು ಗುರುತಿಸಿ, ಇವನ್ನು ಬಳೆ ತೊಡಿಸುವಾಗಿನ ಮಾತುಕತೆ, ಅಳೂದು ಕರೆಯುವದು, ನಗೂದು ಕೆಲೆಯುವದು - ಇವುಗಳಿಗೆ ಹೋಲಿಸಿದ್ದಾರೆ. ನಮ್ಮ ಪೂರ್ವಜರದು ಪ್ರೇಮದಿಂದ ಕೂಡಿದ ಪ್ರಸನ್ನ ಜೀವನವೆಂದು ತಿಳಿಸುತ್ತ, ಆಗ ಸಾಮೂಹಿಕವಾಗಿ ಇನ್ನೊಬ್ಬರ ಹೊರಸು ಹೆಣೆಯುವದು, ಮತ್ತೊಬ್ಬರ ಮನೆಗೆ ಮೇಲುಮುದ್ದಿ (ಮಾಳಿಗೆಯ ಕೆಸರು) ಹಾಕುವದು, ವೈದ್ಯಕೀಯ ಸೇವೆ, ವಿದ್ಯಾದಾನ - ಇವು ಪುಕ್ಕಟೆಯಾಗಿದ್ದವು ಎಂದಿದ್ದಾರೆ. 'ಬಾಳ ಕೈಪಿಡಿ' ಲೇಖನದಲ್ಲಿ ಗಂಡಸರ, ಹೆಂಗಸರ ಕೆಲವು ಹಾಡುಗಳ ವಿವರ, ಹಾಡುವ ಸಂದರ್ಭ – ಈ ಕುರಿತ ವಿವರಣೆಯಿದೆ. 'ಜನಪದ ಸಾಹಿತ್ಯದಲ್ಲಿ ಔಚಿತ್ಯ' - ಇದು ಗಾದಗಳ ವಿವರಣೆಯನ್ನೊಳಗೊಂಡ ಲೇಖನ. ಗಾದೆಯ ಮಾತು ವೇದಕ್ಕೆ ಸಮಾನವೆಂದು ತಿಳಿಸುತ್ತ–ಎತ್ತು ಎರೆಗೆ, ಕೋಣ ಕೆರೆಗೆ ; ಕುರುಬ ಕುಂಬಾರತಿಗೆ ಹೋದರೆ ಬೇಡ ಆಡಿನ ಕಾಲು ಮುರಿದನು - ಹೀಗೆ ಹಲವಾರು ಗಾದೆಗಳ ವಿವರಣೆ ನೀಡಲಾಗಿದೆ. 'ಡೊಳ್ಳಿನ ಹಾಡುಗಳು'- ಬರಹದಲ್ಲಿ ಭರಮ ದೇವರ ಭಕ್ತರಾದ ಕುರುಬರು ಡೊಳ್ಳು ಎಂಬ ಚರ್ಮವಾದ್ಯದೊಡನೆ ಹಾಡುವ ಹಾಡುಗಳ ಪರಿಚಯವಿದೆ. ಇವು ಸಾಮಾನ್ಯವಾಗಿ ಭಕ್ತಿಯ ಹಾಡುಗಳು. ಕುರುಬರು ಕಂಬಳಿ ಜಾಡಿಸಿದರೆ ಎಳಸಿ ಹೋದ ಮಳೆ ಬರುವದೆಂಬ ನಂಬಿಗೆ–ಇತ್ಯಾದಿ ನಂಬಿಗೆಗಳ ವಿವರವೂ ಇಲ್ಲಿದೆ. 'ಚೌಡಿಕೆಯ ಹಾಡುಗಳು' ಲೇಖನದಲ್ಲಿ ಕರ್ನಾಟಕದ

21. ಸಿಂಪಿ ಲಿಂಗಣ್ಣ : ಹೆಡಿಗೆ ಜಾತ್ರೆ (೧೯೮೧) ಪು. ೧೫

ಉಚ್ಚಂಗಿ, ಚಂದ್ರಗುತ್ತಿ, ಹುಲಗಿ, ಸವದತ್ತಿ - ಇವು ನಾಲ್ಕು ಶಕ್ತಿದೇವಿಯ ಕೇಂದ್ರಗಳೆಂದು ಹೇಳಿ, ಚೌಡಿಕೆಯ ವ್ಯಾಖ್ಯೆ ಕೊಟ್ಟಿದ್ದಾರೆ. ಜೋಗಯ್ಯ, ಜೋಗತಿಯರ ಉಡುಗೆ ತೊಡಿಗೆ, ಅವರ ತಲೆಯ ಮೇಲಿನ ಬಿಂದಿಗೆ ದೇವರು. ಶಾಪಗ್ರಸ್ತ ಗಂಡಸರು ಸೀರೆಯುಟ್ಟು ಮೇಳದೊಂದಿಗೆ ತಿರುಪೆಯೆತ್ತಿ ಉಪಜೀವಿಸುವದು- ಮೊದಲಾದ ವಿವರಗಳಿವೆ. ಜೋಗತಿ ದೀಕ್ಷೆ ಪಡೆದವಳು ಲಗ್ನವಾಗುವುದಿಲ್ಲ. ಇದೊಂದು ದೇವದಾಸಿ ಪದ್ಧತಿ. ಚೌಡಿಕೆ ಹಾಡುಗಾರರಲ್ಲಿ ಮರಾಠಿಗರು, ಹರಿಜನರು, ಕುರುಬರು - ಇರುವರು ಮುಂತಾದ ವಿಚಾರಗಳಿವೆ.

'ಮೂರು ಅಡ್ಡ ಕಥೆಗಳು' - ಇದು ಮೂರು ಕಥೆಗಳ ಪರಿಚಯಾತ್ಮಕ ಲೇಖನ. 'ಇನ್ನೂ ತೊತ್ತಲಾದ ಹಾತಿಲ್ಲ' (ಇನ್ನೂ ತೊಟ್ಟಿಲಲ್ಲಿ ಹಾಕಿಲ್ಲ) ಇದು ಅಂದಿನ ಬಾಲ್ಯ ವಿವಾಹದ ಚಿತ್ರಣ. 'ಮೊದಲೇ ಕೇಳಬೇಕಿತ್ತು ಕುಲ ?' - ಇದು ಅಂದಿನ ಕುಲದ ಸಂಪ್ರದಾಯದ ಚಿತ್ರಣ. 'ನಿಮ್ಮಪ್ಪನಿಗೆ ಹೇಳುವದಿಲ್ಲ' - ಕಥೆಯಲ್ಲಿ ಕಿರಿಯರ ದುಶ್ಚಟಗಳನ್ನು ಹಿರಿಯರಿಗೆ ಹೇಳುವದು ಕೆಲವರ ಹುಟ್ಟು ಗುಣ - ಈ ವಿಷಯದ ನಿರೂಪಣೆಯಿದೆ. 'ಶ್ರೀಕೃಷ್ಣ ಪಾರಿಜಾತ ನಾಟಕ'ದಲ್ಲಿ 'ಜಾನಪದ ಬಯಲಾಟಗಳಲ್ಲಿ ಶ್ರೀಕೃಷ್ಣ ಪಾರಿಜಾತವು ಚೂಡಾರತ್ನವೆನ್ನಬಹುದು' - ಎಂದು ಲೇಖಕರು ಅಭಿಪ್ರಾಯಪಟ್ಟಿದ್ದಾರೆ. ಪಾರಿಜಾತ ಕಥೆಯ ವಿವರಣೆ ಕೊಡುತ್ತ ಕೊನೆಗೆ "ಅಹಂಕಾರ ಶೂನ್ಯವಾದಾಗ ಎಲ್ಲೆಲ್ಲಿಯೂ ಪಾರಿಜಾತವೇ, ಎಲ್ಲವೂ ಪಾರಿಜಾತವೇ"[22] ಎಂದಿದ್ದಾರೆ. ಈ ಲೇಖನದಲ್ಲಿ ಹಲವಾರು ಸಂಶೋಧನೆಯ ಎಳೆಗಳಿರುವದು ಮೆಚ್ಚತಕ್ಕ ಸಂಗತಿ.

'ಜಾನಪದದಲ್ಲಿ ಕೊಂಕುನುಡಿ'- ಕೊಂಕುನುಡಿಯು ಜಾನಪದದ ಹಲವು ಮುಖಗಳಲ್ಲಿ ಒಂದು. ಅಕ್ಕಸಾಲಿ ಕಿವಿ ಚುಚ್ಚಿದಾಗ ನೋವೆನಿಸದಂತೆ - ಎಂಬುದು ಸಿಂಪಿಯವರ ಲಾಕ್ಷಣಿಕ ನಿರೂಪಣೆ. ಇಲ್ಲಿ ಕೊಂಕುನುಡಿಗಳ ಹಲವು ಉದಾಹರಣೆಗಳಿವೆ. 'ಶ್ರದ್ಧಾಪೂರ್ಣ ಸೇವೆಯೇ ಮೂಲಧನವಾದ ಜಾನಪದ ಚಿಕಿತ್ಸೆಗಳು'- ಲೇಖನದಲ್ಲಿ ಫಲಾಪೇಕ್ಷೆಯಿಲ್ಲದೆ ಅಂದಿನ ವೈದ್ಯರು ನಡೆಸುತ್ತಿದ್ದ ಚಿಕಿತ್ಸೆಗಳಲ್ಲಿ ಅದ್ಭುತ ಶಕ್ತಿಯಿತ್ತು ಎಂಬ ವಿಚಾರವಿದೆ. ಕೆಲವು ಔಷಧಿಗಳ ವಿವರಣೆಯೂ ಇಲ್ಲಿ ಬಂದಿದೆ. ಈ ಚಿಕಿತ್ಸೆಯ ಔಷಧಗಳನ್ನು ಉಳಿಸಿಕೊಳ್ಳುವದು ಅವಶ್ಯವೆಂದು ಮನವರಿಕೆ ಮಾಡಿಕೊಡಲಾಗಿದೆ. 'ಜಾನಪದದಲ್ಲಿ ಪ್ರಾಣಿಗಳ ಅನ್ಯೋಕ್ತಿಗಳು'- ಬರಹದಲ್ಲಿ ಜಾನಪದ ಕಥಾ ಸಾಹಿತ್ಯದಲ್ಲಿ ಪ್ರಾಣಿಗಳ ಅನ್ಯೋಕ್ತಿ (ದೃಷ್ಟಾಂತ) ಗಳಿರುವದನ್ನು ಎತ್ತಿ ತೋರಿಸಲಾಗಿದೆ.

'ಜಾನಪದ ಜೀವನದ ಔದ್ಯಮಿಕ ಶಬ್ದಗಳು' - ಲೇಖನವು ಒಕ್ಕಲಿಗನಿಗೆ,

22. ಸಿಂಪಿ ಲಿಂಗಣ್ಣ : ಹೆಡಿಗೆ ಜಾತ್ರೆ (೧೯೮೧) ಪು. ೬೨.



ಮಗ್ಗಕ್ಕೆ, ಬಣ್ಣಗಾರಿಕೆಗೆ ಸಂಬಂಧಿಸಿದ ಕೆಲವು ಶಬ್ದಗಳ ಅರ್ಥವಿವರಣೆಯಿಂದ ಕೂಡಿದೆ. ಇಂಥ ಶಬ್ದಗಳು ಈಗ ಮಾಯವಾಗುತ್ತಿದ್ದು ಅವುಗಳನ್ನು ಉಳಿಸಿಕೊಳ್ಳುವದರ ಅಗತ್ಯವನ್ನು ಲೇಖಕರು ತಿಳಿಸಿದ್ದಾರೆ. 'ಜನಪದ ಕಲೆಗಳ ಪರಮ ಪ್ರಯೋಜನ' ಈ ಲೇಖನದಲ್ಲಿ "ಜನಾಂಗದ ಜೀವಾಳವೆನಿಸುವ ಜನಪದವು ಬಾಳಿನ ಒಂದಂಗವಾಗಿಸಿಕೊಂಡು ಅನುಸರಿಸಿದ ಕಲಾರಾಧನೆಯೇ ಆ ಹೆದ್ದಾರಿಯಾಗಿದೆ. ಅದನ್ನು ಸಾಧಿಸಿಕೊಳ್ಳುವದೇ ಜನಪದ ಜೀವನಕ್ಕೆ ಪರಮ ಪ್ರಯೋಜನವಾಗಿದೆ"[23] ಎಂದಿದ್ದಾರೆ. ಜಾನಪದ ಕಲೆಗಳು ಅನಾಗರಿಕವಲ್ಲವೆಂದು ತಿಳಿಸುತ್ತ ಅವುಗಳನ್ನು ಬದುಕಿಸಬೇಕೆಂದು ಕರೆ ನೀಡಿದ್ದಾರೆ. ಇಲ್ಲಿ ಸಿಂಪಿಯವರು ನಿರೂಪಿಸಿದ ವಾದ್ಯಗಳು 'ವೃತ್ತಿಪದ ಕೋಶ'ಕ್ಕೆ ಪೂರ್ವ ಪೀಠಿಕೆಯಂತಿದೆ. 'ಲೋಕ ಸಾಹಿತ್ಯದಲ್ಲಿ ಗಾಂಧೀಜಿ' ಬರಹದಲ್ಲಿ ಗಾಂಧೀಜಿಯವರನ್ನು ಕುರಿತು ವಿರಳವಾಗಿ ಸೃಷ್ಟಿಯಾದ ಲೋಕ ಸಾಹಿತ್ಯದ ಪರಿಚಯವಿದೆ.

ಒಟ್ಟಿನಲ್ಲಿ ಜನಪದ ಜೀವನ ಹಾಗೂ ಸಾಹಿತ್ಯದ ಅನೇಕ ಮುಖಗಳನ್ನು ಚಿತ್ರಿಸುವ ಸಿಂಪಿಯವರ ಈ ಕೃತಿ ಮೌಲಿಕವಾದುದು, ಅಧ್ಯಯನ ಯೋಗ್ಯವಾದುದು.

'ಸಾಹಿತ್ಯ ಸಂಪರ್ಕ' - ಈ ಪ್ರಬಂಧ ಸಂಕಲನದ 'ಲೋಕೋಕ್ತಿ ಹಾಗೂ ವಾಕ್ ಸಂಪ್ರದಾಯ' - ಪ್ರಬಂಧದಲ್ಲಿ ಭಾಷೆ ಹಾಗೂ ಭಾಷಿಕರಿರುವವರೆಗೆ ಲೋಕೋಕ್ತಿ ಅನಿವಾರ್ಯವೆಂದು ಹೇಳಿ, ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾರೆ :

೧) ಬೀಸುವಾಕೆಗೆ ಮುಕ್ಕಿದಷ್ಟೇ ಲಾಭ.
೨) ಮರದ ತುಂಬ ಮುತ್ತುಕೊಟ್ಟರೂ ಮುತ್ತೈದೆತನಬಾರದು.
೩) ಹತ್ತು ಅಂದರೆ ಎತ್ತಿಗಂದರು, ನೂರು ಅಂದರೆ ಹೋರಿಗಂದರು.
೪) ಅತ್ತೆಯೊಡೆದ ಗಡಿಗೆ ಹಳೆಯದು. ಇವುಗಳಲ್ಲಿರುವ ಅರ್ಥಸಂಪತ್ತನ್ನು ಗಮನಿಸಿಸಬೇಕು.

'ಪಶುಸಂಪರ್ಕದಲ್ಲಿ ಕನ್ನುಡಿ'- ಲೇಖನದಲ್ಲಿಯೂ ಕೆಲವು ಲೋಕೋಕ್ತಿಗಳನ್ನು ಬಳಸಿದ್ದಾರೆ. ಉದಾ ;

೧) ತಿನ್ನಲಾಗದ ಸೆಗಣಿಯನ್ನು ತಿನ್ನುವದೇ ಲಂಚ.
೨) ಎತ್ತು ಎರೆಗೆ, ಕೋಣ ಕೆರೆಗೆ.
೩) ತೆನೆ ತಿಂದ ಎತ್ತು ತೆವರು ಏರಿತು. ಮತ್ತು
೪) ಹೇಸಿಗೆ ತಿಂಬವನಿಗೆ ಹೆಂಡಿಯ ಆಣೆ ಹಾಕಿದರು - ಎಂಬಂತಹ ಸಭ್ಯವಲ್ಲದ ಉದಾಹರಣೆಗಳನ್ನೂ ಕೊಟ್ಟಿರುವರು.

23. ಸಿಂಪಿ ಲಿಂಗಣ್ಣ : ಹೆಡಿಗೆ ಜಾತ್ರೆ (೧೯೮೧) ಪು. ೮೧.

'ತಲೆಮಾರಿನ ಹಿಂದೆ' : ಹಳ್ಳಿಯಲ್ಲಿ ಹುಟ್ಟಿ ಬೆಳೆದು, ಹಳ್ಳಿಯಲ್ಲಿಯೇ ಬಾಳಿದ ಸಿಂಪಿ ಲಿಂಗಣ್ಣ ಅವರ ತಲೆಮಾರಿನ ಹಳ್ಳಿಯ ವಾಸ್ತವ ಚಿತ್ರಗಳನ್ನೊಳಗೊಂಡ ಹದಿನಾರು ಪ್ರಬಂಧಗಳ ಸಂಗ್ರಹವಿದು. ಚಿತ್ರಪಟದ ರೀಲಿನಂತಿರುವ ಸೊಗಸಾದ ಸನ್ನಿವೇಶಗಳನ್ನು ಲೇಖಕರು ತಮ್ಮ ನೆನಪಿನ ಸುರುಳಿಯಿಂದ ಬಿಚ್ಚಿ ಇಟ್ಟಿದ್ದಾರೆ. ಮೇಳಗಳ ಮೇಲಾಟ, ಭರ್ಜರಿಯ ಬಯಲಾಟ, ಪಾರಿಜಾತದ ಕಥೆ, ಗಂಡಸರ ಹಬ್ಬ, ಸೀತೆನಿಯ ಸಡಗರ, ಭೂಲಕ್ಷ್ಮಿಯ ಪ್ರಸಾದ ಮುಂತಾದ ಲೇಖನಗಳಲ್ಲಿ ಜಾನಪದ ಸೊಗಡು ಸೂರೆಗೊಂಡಿದೆ.

'ದಿಟ್ಟಿಸಿ ನೋಡಿದರೆ'- ಕೃತಿಯಲ್ಲಿ ಬರುವ ಹದಿನಾಲ್ಕು ಹಳ್ಳಿಯ ವ್ಯಕ್ತಿ ಚಿತ್ರಗಳು ತಮ್ಮ ವ್ಯಂಗ್ಯ ವಿಡಂಬನೆಗಳಿಂದ ಕಚಕುಳಿ ಇಡಿಸುತ್ತವೆ. ಇಲ್ಲಿ ಬರುವ ನೆಲಬುರಕಿ ಭೀಮರಾಯ ಮಾಸ್ತರ, ಲಟ್ಟಣಿಕಾ ಸಾಹೇಬರು, ಗೇಂಡಾಮ್ಯಾಗ ಗೇನಪ್ಪ, ಡಬಳಂಗ ದುರದುಂಡಿ - ಮೊದಲಾದ ಪಾತ್ರ ಚಿತ್ರಣಗಳನ್ನು ನೋಡಬೇಕು. ಇಲ್ಲಿಯ ತಿರುಳ್ಗನ್ನಡ ಜಾನಪದ ಪ್ರಯೋಗಗಳು, ಜಾನಪದ ಈಡಿಯಂ ಗ್ರಂಥದ ತುಂಬ ಹಾಸು ಹೊಕ್ಕಾಗಿವೆ. ಡಬಳಂಗ, ಭುದಂಗ ಇತ್ಯಾದಿ ಚಿತ್ರಗಳು ಸ್ವಾರಸ್ಯ ಪೂರ್ಣ. ಅಂಬಲುಮ್ಯೆ, ಗೂಡುಗಾಲು, ನೆಲಬುರಕಿ, ಅಸಿವಿಸಿ, ಮೂಗಳುಕು, ಬೀಜದ ಹೋರಿ, ಕಳಸಗಿತ್ತಿ, ತೋಡಿ ಜವಾಬು - ಮುಂತಾದ ಪದಪ್ರಯೋಗಗಳು ಉತ್ತರ ಕರ್ನಾಟಕದ ನಮ್ಮ ಪ್ರಾದೇಶಿಕ ಸಂಸ್ಕೃತಿ ಪರಂಪರೆಯನ್ನು ಎತ್ತಿ ತೋರಿಸುವಂತಹವಾಗಿವೆ.

'ನಾಟ್ಯಸಾಧನೆ' - ಗ್ರಂಥದಲ್ಲಿ ಉತ್ತರ ಕರ್ನಾಟಕದ ಬಯಲಾಟದ ಸ್ಥಾನವನ್ನು ಈ ಶತಮಾನದ ಎರಡನೆಯ ದಶಕದಲ್ಲಿ ನಾಟಕಗಳು ಹೇಗೆ ಆಕ್ರಮಿಸಿದವೆಂಬುದನ್ನು ನಿರೂಪಿಸಲಾಗಿದೆ. ಈ ಕೃತಿಯ ಬಗೆಗೆ ಬರೆಯುತ್ತ "....ಶಾಸ್ತ್ರೀಯ ವಿವೇಚನೆಯಾಗಬೇಕಾಗಿದ್ದ ಕೃತಿಯನ್ನು ಸರಸ-ಸುಂದರ ಕಥಾನಕವನ್ನಾಗಿ ಮಾರ್ಪಡಿಸಿದ್ದು ಲೇಖಕರ ಬರವಣಿಗೆಯ ಕೌಶಲವನ್ನು ಎತ್ತಿ ತೋರಿಸುತ್ತದೆ....ಹಳ್ಳಿಯ ನಟರು, ಹಳ್ಳಿಯ ನಾಟಕ, ಪ್ರಚಾರದ ರಂಗಮಂಟಪ, ಮುಂತಾದ ಆಗಿನ ಸ್ಥಿತಿ ಗತಿಗಳನ್ನು ಬಹುಚೆನ್ನಾಗಿ ಚಿತ್ರಿಸಿದ್ದಾರೆ. ನಾಟಕದ ಕಥೆಯ ಸಾರ ಕೊಟ್ಟಿದ್ದು ಒಂದು ವಿಶೇಷ. ನಾಟಕದ ಹಾಡಿನ ಕೆಲವು ಚರಣಗಳನ್ನು ಉದ್ಧರಿಸಿದ್ದೂ ಸಾಮಾನ್ಯ ಮಾತಾಗಿಲ್ಲ.... ಗ್ರಾಮೀಣ ಜೀವನದಲ್ಲಿ ಕಲೆ ಹುಟ್ಟಿ ಬೆಳೆದುದನ್ನು ನಿರೂಪಿಸುವ ಈ ಕೃತಿ ಒಂದು ಐತಿಹಾಸಿಕ ದಾಖಲೆಯಾಗಿದೆ. ನಮಗಿಂದು ಮರೆತು ಹೋಗುತ್ತಿರುವ ಅಥವಾ ಗೊತ್ತೇ ಇಲ್ಲದ ಅನೇಕ ವಿಷಯಗಳನ್ನು ಲಿಂಗಣ್ಣನವರು ಇಲ್ಲಿ ಹಿಡಿದಿಟ್ಟಿದ್ದಾರೆ.... ಅಂತೆಯೇ ಇದು ವಿದ್ವಾಂಸರಿಗೂ ಕಲಾಪ್ರೇಮಿಗಳಿಗೂ ಪ್ರಯೋಜನಕಾರಿಯಾದ ಕೃತಿ...." [24] ಎಂದು ವಿಮರ್ಶಕರೊಬ್ಬರು ಇದರ ಮೌಲ್ಯಮಾಪನ ಮಾಡಿದ್ದಾರೆ.

---

24. ಜಿ. ಎಸ್. ಕಾಪಸೆ : ಹೇಮಕೂಟ (ಹಂಪಿ-ಹೊಸಪೇಟೆ) ಡಿಶಂಬರ ೧೯೭೭



'ನೂರು ಗಡಿಗೆ, ಒಂದು ಬಡಿಗೆ'- ಇದು ೧೧೮ ಪ್ರಬಂಧಗಳ ಸಂಕಲನ. ಇವುಗಳನ್ನು ೧) ರಾಜ್ಯ, ರಾಷ್ಟ್ರ, ರಾಷ್ಟ್ರೀಯತೆ ೨) ಜೀವನ, ಶಿಕ್ಷಣ ೩) ಆಧ್ಯಾತ್ಮ, ಸಾಹಿತ್ಯ, ಬುದ್ಧಿವಂತಿಕೆ. ೪) ಗ್ರಾಮ, ಮಾನವ ಸ್ವಭಾವ, ಸ್ತ್ರೀ ೫) ಸಮಾಜ, ಇತಿಹಾಸ - ಹೀಗೆ ಐದು ಗೊಂಚಲುಗಳಲ್ಲಿ ವಿಭಾಗಿಸಲಾಗಿದೆ. ಇಡೀ ಕೃತಿಗೆ ಇಟ್ಟ ಹೆಸರೂ, ಪ್ರತಿಯೊಂದು ಲೇಖನಗಳಿಗೆ ಕೊಟ್ಟ ಹೆಸರೂ ಮನವನ್ನು ಆಕರ್ಷಿಸುತ್ತವೆ. ಅವುಗಳಲ್ಲಿ ಕೆಲವು : ಹರಿಯುವ ಹನ್ನೆರಡು, ತುರಿಸುವ ಮೂವತ್ತು ; ಗುಡ್ಡದಂಥ ರಾಗ ಮಾಡಿ ಅದೆಂಥದೋ ಪದ ; ಅರರೇ ಎನ್ನಯ ಸಮಾನರಾರು ; ಹತ್ತು ಆಡಿದರೆ ಎತ್ತಿಗೆ, ನೂರು ಆಡಿದರೆ ಹೋರಿಗೆ ; ಕಾಯದ ಕತ್ ತಲೆಯ ನೀ ಕಳೆಯಯ್ಯ ; ಕಚ-ಗುಚ-ಗಿಚಿಕೆ ಉಚಿತವೇ ಬದುಕು ; ಶಿಕ್ಷಕ ಸಾವಿತ್ರಿಯಿಂದ ಯಮನ ಸೋಲು ; ಸೂಳೆ ಮುಪ್ಪಾಗಿ ಜೋಗತಿ ; ಇಪ್ಪತ್ತಾದರೆ ಇನ್ನೂ ಹುಡುಗ ; ಕೊಟ್ಟೇನಪ್ಪ ಚೌಲ, ಇಟ್ಟಾಳಪ್ಪ ಡೌಲ ; ಹಬ್ಬದ ದಿನವೂ ಹಳೆಯ ಗಂಡನೇ ; ಶಿವದಾನವೆನಿಸಿತ್ತು ಮಜ್ಜಿಗೆ ; ಹೊಲಗೇರಿ ಇದ್ದಲ್ಲಿ ಊರು ; ಜಾಹೀರಾತಿನ ಔಷಧಿ ; ಸತ್ತವರು ಕೈಯೆತ್ತಲಿ ಹೀಗೆಯೇ ಇದನ್ನು ಮುಂದುವರಿಸಬಹುದು. ತಲೆಬರಹವೇ ಇಷ್ಟೊಂದು ಆಕರ್ಷಕವಾಗಿರುವಾಗ ವಿಷಯ ನಿರೂಪಣೆ ಇನ್ನಷ್ಟು ಕುತೂಹಲ ಹುಟ್ಟಿಸುವಂತಹದು. ಇವು ಒಮ್ಮೆ ಓದಿ ಬಿಡುವ ಬರಹಗಳಲ್ಲ, ನಿತ್ಯ ಚಿಂತನ ಮಾಡುವ ಬರಹಗಳು. ಅಂತೆಯೇ ಇದು ಕನ್ನಡದ ವೈಚಾರಿಕ ಸಾಹಿತ್ಯಕ್ಕೆ ಸಿಂಪಿಯವರ ವಿಶಿಷ್ಟ ಕೊಡುಗೆ ಎನಿಸಿದೆ.

ಉದಾಹರಣೆಗಾಗಿ 'ಶಿವದಾನವೆನಿಸಿತ್ತು ಮಜ್ಜಿಗೆ' ಎಂಬ ಪ್ರಬಂಧವನ್ನು ನೋಡಬಹುದು. ಇದರಲ್ಲಿ ಇಂದಿನ ಮಾನವ ಸ್ವಭಾವದ ಚಿತ್ರಣವಿದೆ. ಅಂದಿನದು ಹಾಲು ಕೂಡ ಪುಕ್ಕಟೆಯಾಗಿ ದೊರೆಯುತ್ತಿದ್ದ ಕಾಲ, ಇಂದಿನದು ನೀರೂ ಕೊಂಡು ಕೊಳ್ಳುವ ಕಾಲ. ಮಜ್ಜಿಗೆಯನ್ನಂತೂ ನಿರ್ವಿವಾದವಾಗಿ ಅಂದಿನ ಕಾಲದಲ್ಲಿ ಕೊಂಡು ತರುತ್ತಿರಲಿಲ್ಲ. ಅದಕ್ಕೆ ಶಿವದಾನವೆಂಬ ಹೆಸರಿತ್ತು. ಅಂದಿನ ಎಮ್ಮೆಗಳು ಆನೆ ಮರಿಗಳಂತಹವು. ಅಂದಿನ ಬೆಣ್ಣೆ-ತುಪ್ಪಗಳು ಇಂದು ಕನಸಿನ ಮಾತಾಗಿವೆ. ಆಗ ಮಜ್ಜಿಗೆ ಇದ್ದವರ ಮನೆಯಿಂದ ಬೇಕಾದವರು ಬೇಕಾದಷ್ಟು ಮಜ್ಜಿಗೆಯನ್ನು ಕೇಳದೇ ತರುತ್ತಿದ್ದರು.

ಗುಜ್ಜರು-ಮಾರವಾಡಿಗಳು ಆಂಧ್ರ, ತೆಲಂಗಾಣ ನಾಡುಗಳಿಂದ ಪದ್ಮಸಾಲಿ ಜನರು ನಮ್ಮ ನಾಡಿಗೆ ಬಂದರು. ವ್ಯಾಪಾರ ಮನೋಭಾವ ಬೆಳೆಯಿತು. ಇಷ್ಟರಲ್ಲಿ ವಾಹನ ಸೌಕರ್ಯವೂ ಹೆಚ್ಚಾಗಿತ್ತು. ಪದ್ಮಸಾಲಿಗರ ಆಹಾರ ಅನ್ನ-ಹುಳಿ. ಹುಳಿಗಾಗಿ ಹುಣಸೇ ಹಣ್ಣು ದುರ್ಮಿಳವಾದಾಗ ಮಜ್ಜಿಗೆಯನ್ನು ಕೊಂಡುಕೊಳ್ಳ ಹತ್ತಿದರು. ಮಾರುವವರು ಮಾರವಾಡಿಗಳು. ಅಂದಿನಿಂದ ದಾನದ ಪ್ರವೃತ್ತಿ

ಬದಲಾಯಿತು. ಈ ವೃತ್ತಿಯನ್ನು ಸೇರದವರು 'ಮೋರಿಯಲ್ಲಿ ರೊಜ್ಜು ಸೊಕ್ಕ ಬಾರದು ಊರಲ್ಲಿ ಗುಜ್ಜ ಸೊಕ್ಕಬಾರದು'– ಎಂದು ಕೆರಳಿ ನುಡಿದದ್ದೇ ಇಂದು ಲೋಕೋಕ್ತಿಯಾಗಿದೆ ಎಂದಿದ್ದಾರೆ.

ಹೀಗೆ ಇಲ್ಲಿಯ ಯಾವದೇ ಪ್ರಬಂಧವನ್ನು ತೆಗೆದುಕೊಂಡರೂ ಅಲ್ಲಿ ಅನುಭವದ ಅರ್ಕವಿರುವದನ್ನು ಕಾಣಬಹುದು. ಸಿಂಪಿಯವರೇ ನಿರ್ಮಿಸಿದ ಕೆಲವು ಲೋಕೋಕ್ತಿಗಳು ಗ್ರಂಥದಲ್ಲಿ ಕಾಣಸಿಗುತ್ತವೆ. ಮಾದರಿಗಾಗಿ

೧) ಪಕ್ಷಾಂತರವೆಂದರೆ ಮದುವೆಯ ಗಂಡನನ್ನು ಬಿಟ್ಟು ಉಡಿಕೆಯ ಗಂಡನ ಕೈ ಹಿಡಿಯುವದು.
೨) ಸಂಯಮವಿಲ್ಲದ ಬಾಳು ಬ್ರೇಕು ಇಲ್ಲದ ಸಾಯಕಲ್ಲಿನಂತೆ.
೩) ಪಾರತಂತ್ರ್ಯ ಹೋದರೂ ಪರಾಧೀನತೆ ಹೋಗಿಲ್ಲ.
೪) ಏಕೇಕ ಪತ್ನಿಯರು ನೂರು ಕಾಲಕ್ಕೆ ಕೈಗೂಡಿದರೂ ಅದು ಏಕ ಪತ್ನೀವ್ರತವೇ ಸರಿ.

ಈ ಕೃತಿಯ ಕುರಿತು ವಿಮರ್ಶಕರೊಬ್ಬರು "ಅವರ ಇತ್ತೀಚಿನ 'ನೂರು ಗಡಿಗೆ ಒಂದು ಬಡಿಗೆ' ನನ್ನ ದೃಷ್ಟಿಯಲ್ಲಿ ಅಪೂರ್ವವಾದುದು. ಅದು ವಿಶ್ವ ಜೀವನ ಕೋಶ ; ಲೋಕ ವ್ಯವಹಾರ ಸಂಹಿತೆ ; ನಿತ್ಯ ಜೀವನದ ಉಪನಿಷತ್ತು. ಕನ್ನಡ ನುಡಿಗಳ ಅದರಲ್ಲೂ ಜನಪದ ನುಡಿಗಟ್ಟುಗಳ ಸಡಗರವನ್ನು ನಾವಲ್ಲಿ ನೋಡಬೇಕು" [25] ಎಂದಿದ್ದಾರೆ.

ಸಿಂಪಿ ಲಿಂಗಣ್ಣನವರು ಬಡತನದಲ್ಲಿ ಬೆಂದರೂ ಅತ್ಯಂತ ಅಪರೂಪದ ಜಾನಪದ ಸಾಹಿತ್ಯವನ್ನು ನಮಗಾಗಿ ಬಿಟ್ಟು ಹೋಗಿದ್ದಾರೆ. ಅವರು ಜೀವನದ ಕುಲುಮೆಯಲ್ಲಿ ಬೆಂದ ಸಿದ್ಧಹಸ್ತರು. ಅವರ ಬದುಕು ತುಂಬಿದ ಕೊಡ. ಅದು ಮುಂದಿನ ತಲೆಮಾರಿನವರಿಗೆ ಸಂಜೀವಿನಿ. ಅವರ ಸೇವೆಗೆ ಪ್ರತಿಫಲವಾಗಿ ಜಾನಪದ ಕ್ಷೇತ್ರದಲ್ಲಿ ಅವರಿಗೆ ಅನೇಕ ಸ್ಥಾನಮಾನಗಳು ದೊರಕಿದ್ದು, ಅವುಗಳ ವಿವರ ಇಂತಿದೆ ;

೧) ಕ್ರಿ.ಶ. ೧೯೪೪ರ ಡಿಶಂಬರ ೨೮ರಿಂದ ೩೦ರವರೆಗೆ ರಬಕವಿಯಲ್ಲಿ ಜರುಗಿದ ೨೮ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಜಾನಪದ ಗೋಷ್ಠಿಯ ಅಧ್ಯಕ್ಷರಾಗಿದ್ದರು.
೨) ಕ್ರಿ.ಶ. ೧೯೬೬ರಲ್ಲಿ ಕರ್ನಾಟಕ ಜಾನಪದ ಪರಿಷತ್ತಿನ ಕಾರ್ಯ ಸಮಿತಿಯ ಸದಸ್ಯರಾಗಿ ಆಯ್ಕೆಯಾದರು.

25. ಗೊ. ರು. ಚೆನ್ನಬಸಪ್ಪ : ಜಾನಪದ ಜಗತ್ತು ಸಂ. ೧. ಸಂಚಿಕೆ ೩ ಮೇ ೧೯೮೦



೩) ಕ್ರಿ.ಶ. ೧೯೬೯ರಲ್ಲಿ ಫೆಬ್ರುವರಿ ೩ರಿಂದ ೫ರವರೆಗೆ ಮಂಗಳೂರಿನಲ್ಲಿ ಮೈಸೂರು ವಿಶ್ವವಿದ್ಯಾಲಯದವರು ಏರ್ಪಡಿಸಿದ ಅಖಿಲ ಕರ್ನಾಟಕ ದ್ವಿತೀಯ ಜಾನಪದ ಸಮ್ಮೇಳನದ ಅಧ್ಯಕ್ಷರಾಗಿದ್ದರು.
೪) ಕ್ರಿ.ಶ. ೧೯೭೩ರಲ್ಲಿ ಜನವರಿ ೨೩ರಿಂದ ೨೫ರವರೆಗೆ ಕರ್ನಾಟಕ ವಿಶ್ವವಿದ್ಯಾಲಯದವರು ನಡೆಸಿದ ಅಖಿಲ ಕರ್ನಾಟಕ ಪ್ರಥಮ ಜಾನಪದ ಸಮ್ಮೇಳನದ ಗೋಷ್ಠಿಯೊಂದರ ಅಧ್ಯಕ್ಷರಾಗಿದ್ದರು.
೫) ಕ್ರಿ.ಶ. ೧೯೭೬ರ ಡಿಶಂಬರ ೧ರಿಂದ ೫ರವರೆಗೆ ಸಾಗರದಲ್ಲಿ ಜರುಗಿದ ರಾಜ್ಯ ಮಟ್ಟದ ಜಾನಪದ ಸಾಹಿತ್ಯೋತ್ಸವದಲ್ಲಿ ಮುಖ್ಯ ಅತಿಥಿಗಳಾಗಿದ್ದರು.
೬) ಕ್ರಿ.ಶ. ೧೯೭೯ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠವು ಇಲಕಲ್ಲಿನಲ್ಲಿ ಏರ್ಪಡಿಸಿದ ಅಖಿಲ ಕರ್ನಾಟಕ ಆರನೆಯ ಜನಪದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.
೭) ಬೆಂಗಳೂರಿನಲ್ಲಿ ದಿನಾಂಕ ೨-೧೦-೧೯೮೦ರಂದು ಜರುಗಿದ ಕರ್ನಾಟಕ ಜಾನಪದ ಟ್ರಸ್ಟಿನ ಮೊದಲ ಹುಟ್ಟು ಹಬ್ಬದಲ್ಲಿ ಹತ್ತು ಸಮಸ್ತರಲ್ಲೊಬ್ಬರಾಗಿ ಸನ್ಮಾನಿತರಾದರು.

ಹೀಗೆ ಅವರಿಗೆ ಜಾನಪದ ಕ್ಷೇತ್ರದಲ್ಲಿ ಹಲವಾರು ಗೌರವಗಳು ಸಂದಿವೆ.

ಜಾನಪದ ವಿಷಯ ಹಾಗೂ ಸಿಂಪಿಯವರ ಕುರಿತು ಬರೆಯುತ್ತ "ಇತ್ತೀಚೆಗೆ ಜಾನಪದ ಎಂಬುದು ಒಂದು Fad ಆಗಿ, Fashion ಆಗಿ ಬೆಳೆಯುತ್ತಿದೆ. ಸಿದ್ಧಿಗಿಂತ ಪ್ರಸಿದ್ಧಿಯ ಕಾಯಕವಾಗಿ ಕಂಗೊಳಿಸುತ್ತಿದೆ. ಸಿಂಪಿ ಲಿಂಗಣ್ಣನವರು ಜಾನಪದ ಸಿಂಪಿನಿಂದ ಉದ್ಭವಿಸಿದ ಅಸ್ಸಲ್ ಮುತ್ತು. ಈ ಮಾತನ್ನು ಅವರ ಬದುಕಿನ ಅನುಭವ ಪಾಕದಲ್ಲಿ, ಅವರ ಸಾಹಿತ್ಯದ ರಸಸಿದ್ಧಿಯಲ್ಲಿ, ಸಹಜ ಹಳ್ಳಿಯ ಸೊಗಡಿನ ಹಾಸ್ಯದಲ್ಲಿ ಕಾಣುತ್ತೇವೆ." [26] ಎಂದು ಶ್ರೀ ಎನ್ಕೆ ಅವರು ಹೇಳಿದ್ದಾರೆ. ಸಿಂಪಿ ಲಿಂಗಣ್ಣನವರ ಅನೇಕ ಕೃತಿಗಳಿಗೆ ಕರ್ನಾಟಕ ರಾಜ್ಯ ಸರಕಾರದ ಹಾಗೂ ರಾಜ್ಯ ಸಾಹಿತ್ಯ ಆಕಾಡೆಮಿಯ ಬಹುಮಾನ ಹಾಗೂ ಪ್ರಶಸ್ತಿಗಳು ಬಂದಿವೆ. ಅಲ್ಲದೆ ಕೇಂದ್ರ ಸರಕಾರದ ಆದರ್ಶ ಶಿಕ್ಷಕ ಪ್ರಶಸ್ತಿ ಬಂದಿದೆ. ೧೯೮೯ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯವು ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ೧೯೯೦ರಲ್ಲಿ ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಬಂದಿದೆ. ಇದೇ ವರ್ಷ

26. ಶ್ರೀ ಎನ್ಕೆ : ಜಾನಪದ ಸಾಹಿತ್ಯ ಶಿಲ್ಪಿ ಸಿಂಪಿ ಲಿಂಗಣ್ಣ. ಕಸ್ತೂರಿ, ಜುಲೈ ೧೯೯೩ ಪು. ೧೬

ಕನ್ನಡ ಸಾಹಿತ್ಯ ಪರಿಷತ್ತು 'ಗೌರವ ಸದಸ್ಯತ್ವ' ನೀಡಿ ತನ್ನ ಗೌರವ ಹೆಚ್ಚಿಸಿಕೊಂಡಿದೆ. ೧೯೯೩ರ ಫೆಬ್ರುವರಿ ೫ರಿಂದ ೭ರವರೆಗೆ ರಾಯಚೂರ ಜಿಲ್ಲೆಯ ಕೊಪ್ಪಳದಲ್ಲಿ ಜರುಗಿದ ಅಖಿಲ ಭಾರತ ೬೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆ ಪೀಠವನ್ನು ಅಲಂಕರಿಸಿದ್ದರು. ಗಜ್ಜರಿಗೆಂಪಿನ ದೃಢಕಾಯದ ಮಾಗಿದ ಚಿಂತನಶೀಲ ೮೮ರ ಹಳ್ಳಿಯ ರಸಋಷಿ ಸಿಂಪಿ ಲಿಂಗಣ್ಣನವರು ಇದೇ ವರ್ಷ ಮೇ ೫ರಂದು ನಮ್ಮನ್ನು ಅಗಲಿದುದು ತುಂಬಿಬಾರದ ಹಾನಿ. ಅವರ ಪಂಚಭೂತಾತ್ಮಕ ಶರೀರ ಅಳಿದರೂ, ಅವರು ಬಿಟ್ಟು ಹೋದ ಸಾಹಿತ್ಯ ಸಿರಿಯಿಂದ ಅವರು ಕೀರ್ತಿಶೇಷರು. ಅಲ್ಲದೆ ಅಮರರು.

# ಹಲಸಂಗಿ ಗೆಳೆಯರ ಗುಂಪಿನ ಕೊಡುಗೆ : ಗರತಿಯ ಹಾಡು

ಡಾ|| ಬಸವರಾಜ ಮಲಶೆಟ್ಟಿ

'ಗರತಿಯ ಹಾಡು' ಹಲಸಂಗಿ ಗೆಳೆಯರು ಕನ್ನಡ ಜನಪದ ಸಾಹಿತ್ಯಕ್ಕೆ ನೀಡಿರುವ ಒಂದು ಅಪೂರ್ವ ಕೊಡುಗೆಯಾಗಿದೆ. ಕರ್ನಾಟಕದಲ್ಲಿ ಜನಪದ ಸಾಹಿತ್ಯದ ಬಗ್ಗೆ ಒಲವು ಉತ್ಸಾಹ ಮೂಡಿಸುವ ಕ್ರಿಯೆಯಲ್ಲಿ ಈ ಸಂಕಲನ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದ್ದು ಐತಿಹಾಸಿಕ ಸಂಗತಿಯಾಗಿದೆ. ಆರು ದಶಕಗಳಿಂದಲೂ ನಿರಂತರ ಜನಪ್ರಿಯತೆಯನ್ನು ಉಳಿಸಿಕೊಂಡು ಬಂದಿರುವ ಜಾನಪದ ಸಂಕಲನ ಕರ್ನಾಟಕದಲ್ಲಿ ಇದೊಂದೇ.

'ಗರತಿಯ ಹಾಡು' ಬೆಳಕಿಗೆ ಬಂದದ್ದು 1933ರಲ್ಲಿ. ಇದಕ್ಕೂ ಪೂರ್ವದಲ್ಲಿ ಇಂಥ ಸಂಕಲನವೊಂದು ಬಂದಂತಿಲ್ಲ. ಕಳೆದ ಶತಮಾನದಲ್ಲಿ ವಿದೇಶಿ ವಿದ್ವಾಂಸರು ನಮ್ಮ ಜನಪದ ಹಾಡುಗಳ ಬಗ್ಗೆ ವಿಶೇಷ ಆಸಕ್ತಿ ವಹಿಸಿ ಹಲವು ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ಅವರಿಂದ ಪ್ರೇರಣೆ ಹೊಂದಿದ ನಮ್ಮ ಸ್ಥಳೀಯ ಆಸಕ್ತರು ಅಷ್ಟಿಷ್ಟು ಜನಪದ ಸಾಹಿತ್ಯ ಸಂಗ್ರಹಕಾರ್ಯ ಮಾಡಿದರೂ ಅದು ಪ್ರಭಾವಶಾಲಿಯಾಗಿರಲಿಲ್ಲ. ಈ ಶತಮಾನದ ಆರಂಭದ ಒಂದೆರಡನೆಯ ದಶಕಗಳಲ್ಲಿ ಜನಪದ ಬಗೆಗಿನ ಕಾಳಜಿ ಗರಿಗಟ್ಟಿಕೊಳ್ಳತೊಡಗಿತು. ಈ ಸಂದರ್ಭದಲ್ಲಿ ಹಲಸಂಗಿ ಗೆಳೆಯರ ಗುಂಪು ನಡೆಸಿದ ಕಾರ್ಯ ಚಟುವಟಿಕೆಗಳು ಮುಂದಿನ ಬೆಳವಣಿಗೆಗೆ ಬುನಾದಿಯಂತಾದವು.

ಆಧುನಿಕ ವಿದ್ಯಾಭ್ಯಾಸದ ಪರಿಣಾಮದಿಂದಾಗಿ ಪಾಶ್ಚಾತ್ಯ ಸಾಹಿತ್ಯಲೋಕ ನಮ್ಮವರಿಗೆ ಪರಿಚಯವಾಯಿತು. ಅದರಿಂದಾಗಿ ನವೋದಯಕ್ಕೆ ನಾಂದಿ ಹಾಡಲಾಯಿತು. ಸ್ಪಂದನೆ ಕಳೆದುಕೊಂಡಿದ್ದ ನಮ್ಮ ಸಾಹಿತ್ಯದ ಬಗ್ಗೆ ಜಿಗುಪ್ಸೆ ಹಾಗೂ ಪಾಶ್ಚಾತ್ಯ ಸಾಹಿತ್ಯ ಮಾದರಿಗಳ ಬಗ್ಗೆ ಆಕರ್ಷಣೆ ಏಕಕಾಲಕ್ಕೆ ಉಂಟಾದವು. ಈ ಆಕರ್ಷಣೆ ವಿಪರೀತ ವ್ಯಾಮೋಹವಾಗಿ ಬೆಳೆದು ನಮ್ಮ ಸಾಹಿತ್ಯ-ಸಂಸ್ಕೃತಿಗಳನ್ನು ಕುಹಕ ದೃಷ್ಟಿಯಿಂದ ನೋಡುವ ಹೊಸ ರೋಗ ಹುಟ್ಟಿತು. ಇಂಥ ಪರಿಸ್ಥಿತಿಯಲ್ಲಿ ನಮ್ಮ ಪರಂಪರೆಯ ಬಗ್ಗೆ ಅಭಿಮಾನ ಮೂಡಿಸುವ ಒಂದು ಚಳುವಳಿ ಅನಿವಾರ್ಯವಾಯಿತು. ಅಂದು ದೇಶವನ್ನು ವ್ಯಾಪಿಸಿದ್ದ ರಾಷ್ಟ್ರೀಯ ಚಳುವಳಿಯು ಸಾಂಸ್ಕೃತಿಕ ಜಾಗೃತಿಯ ಚಳುವಳಿಗೆ ಪ್ರೇರಣೆ ನೀಡಿದ್ದು ಸಹಜವಾದುದು. ಇದರ

ಪರಿಣಾಮದಿಂದಾಗಿ, ಪಾಶ್ಚಾತ್ಯರ ದಟ್ಟ ಪ್ರಭಾವದ ಚಾಳೀಸು ಹಾಕಿಕೊಂಡು ನಮ್ಮ ಪರಂಪರಾಗತ ಸಾಂಸ್ಕೃತಿಕ ಪರಿಕರಗಳನ್ನು ಅವಜ್ಞೆಯಿಂದ ನೋಡುತ್ತಿದ್ದವರು ಎಚ್ಚರಗೊಂಡರು. ನಮ್ಮ ಕಲೆ-ಸಾಹಿತ್ಯಗಳನ್ನು ಸಮರ್ಥ ರೀತಿಯಲ್ಲಿ ವ್ಯಾಖ್ಯಾನಿಸುವ ಅವುಗಳ ಗುಣಾಂಶಗಳ ಬಗ್ಗೆ ಅಭಿಮಾನ ಮೂಡಿಸುವ ಚಟುವಟಿಕೆಗಳು ರಭಸದಿಂದ ನಡೆದವು. ಆಧುನಿಕ ವಿದ್ಯಾಭ್ಯಾಸವು ನಮ್ಮಲ್ಲಿ ಅಕ್ಷರಸ್ಥ-ಅನಕ್ಷರಸ್ಥ ಎಂಬ ವರ್ಗಗಳನ್ನು ಸೃಷ್ಟಿಸಿ ಅವುಗಳ ಮಧ್ಯೆ ದೊಡ್ಡ ಕಂದರವನ್ನುಂಟು ಮಾಡಿದ ಸಂದರ್ಭವದು. ಆಗ ನಮ್ಮ ಸಂಸ್ಕೃತಿಯ ಬೇರುಗಳು ಅನಕ್ಷರಸ್ಥ ಗ್ರಾಮೀಣ ಜನಸಮೂಹದಲ್ಲಿ ಮಾತ್ರ ಇವೆ ಎಂಬುದನ್ನು ಮನಂಬುಗುವಂತೆ ತಿಳಿಸಿ ಹೇಳ ಬೇಕಾಯಿತು. ಈ ಎಲ್ಲ ಹಿನ್ನೆಲೆಯಲ್ಲಿ 'ಗರತಿಯ ಹಾಡು' ಪ್ರಕಟಗೊಂಡಿದೆ. ಆಧುನಿಕತೆಯ ಎಲ್ಲ ಸಾಧ್ಯತೆಗಳಿಗೆ ತಮ್ಮನ್ನು ತಾವು ಮುಕ್ತವಾಗಿ ತೆರೆದು ಕೊಂಡಿದ್ದರೂ ಗ್ರಾಮೀಣ ಬದುಕಿನೊಂದಿಗೆ ಸಮರಸರೂಪದಲ್ಲಿ ಬೆರೆತು ಅದರ ಸಾರಸರ್ವಸ್ವವನ್ನು ಹೀರಿಕೊಂಡು ಬೆಳೆದ ಹಲಸಂಗಿ ಗೆಳೆಯರಂಥವರಿಂದ ಮಾತ್ರ ಅಂದು ಇಂಥದೊಂದು ಕೃತಿ ಬೆಳಕು ಕಾಣುವುದು ಸಾಧ್ಯವಿತ್ತು.

ಹಲಸಂಗಿ ಗೆಳೆಯರಲ್ಲಿ ಹಿರಿಯರಾದ ಮಧುರಚೆನ್ನರು ಮೊದಲು ಜನಪದ ಸಾಹಿತ್ಯದ ಸೊಬಗಿಗೆ ಮಾರುಹೋದರು. ಪ್ರತಿಭಾನ್ವಿತ ಕವಿಯಾಗಿದ್ದ ಅವರಿಗೆ ತ್ರಿಪದಿಗಳ ಕಾವ್ಯಗುಣ ಹುಚ್ಚು ಹಿಡಿಸಿದ್ದರಲ್ಲಿ ಅಚ್ಚರಿಯೇನಲ್ಲ. ಅವರು 1923ರಲ್ಲಿ ವಿಜಾಪುರದಲ್ಲಿ ನಡೆದ ಒಂಭತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹಳ್ಳಿಯ ಹಾಡುಗಳ ಬಗ್ಗೆ ಮಂಡಿಸಿದ ಪ್ರಬಂಧವು ಒಂದು ಐತಿಹಾಸಿಕ ದಾಖಲೆಯಾಗಿದೆ. (ಹಲಸಂಗಿ ಗೆಳೆಯರ ಗುಂಪಿನ ಪಿ. ಧೂಲಾ ಅವರು ಇದೇ ಸಮ್ಮೇಳನದಲ್ಲಿ ಲಾವಣಿ ಕುರಿತು ಪ್ರಬಂಧ ಮಂಡಿಸಿದ್ದು ಗಮನಾರ್ಹವಾಗಿದೆ) ಮಧುರಚೆನ್ನರು ಹಳ್ಳಿಗಳನ್ನು ಹಾಗೂ ಹಳ್ಳಿಯ ಹಾಡುಗಳನ್ನು ತಿರಸ್ಕಾರದಿಂದ ನೋಡುತ್ತಿದ್ದ ಶಿಷ್ಟ ಪರಿಸರದ ಪಂಡಿತೋತ್ತಮರನ್ನು ಗಮನದಲ್ಲಿಟ್ಟುಕೊಂಡು "ಇದೀಗಿನ ಕಾಲದಲ್ಲಿ ಹಳ್ಳಿಯನ್ನು ಕಾಡಿಗೆ ಬಗೆದು 'ಹಳ್ಳಿಗಾಡು' ಎಂದು ಏಳಿಸಿ ನುಡಿಯುವವರನೇಕರಾದರು. ಇದು ಹಳ್ಳಿಯೇ ? ಕನ್ನಡ ನಾಡಿಗೆ ಬರಲಿಕ್ಕಿರುವ ಹಿರಿ ಹಗಲಿನ ಮುಂಬೆಳಗಿನಲ್ಲಿ ಮೂಡಿ ಮಿಣುಗುತ್ತಿರುವ ಬೆಳ್ಳಿ.......ಅಲ್ಲಿ ಬಗೆಯನ್ನರಳಿಸುವ ಹಾಡುಗಳ ಹಳ್ಳವೇ ಹರಿಯುತ್ತಿದೆ....[1] ಎಂದು ಹೇಳಿದ್ದಾರೆ. ಹಳ್ಳಿ ಹಾಡುಗಳ ಮಹತ್ವವನ್ನು ಪರಿಣಾಮಕಾರಿಯಾಗಿ ವಿವರಿಸುತ್ತ ದೇಶದ ವಿವಿಧ ಭಾಗಗಳಲ್ಲಿ ವಿಶೇಷವಾಗಿ ಬಾಂಗ್ಲಾ ಮತ್ತು ಮಹಾರಾಷ್ಟ್ರಗಳಲ್ಲಿ ನಡೆದಿರುವ ಜನಪದ ಹಾಡುಗಳ ಸಂಗ್ರಹ-ಪ್ರಕಟಣೆಗಳ ಬಗ್ಗೆ ತಿಳಿಸಿ ಅಂಥ ಕಾರ್ಯ ಚಟುವಟಿಕೆಗಳು

1. ಮಧುರಚೆನ್ನರ ಲೇಖನಗಳು ಪು. 246 (ಸಂ. ಡಾ॥ ಜಿ. ಎಸ್. ಕಾಪಸೆ).



ಕನ್ನಡ ನಾಡಿನಲ್ಲಿ ತೀವ್ರಗತಿಯಲ್ಲಿ ನಡೆಯಬೇಕೆಂಬ ಅಪೇಕ್ಷೆ ವ್ಯಕ್ತಪಡಿಸಿದ್ದಾರೆ. "ಹಳ್ಳಿಯ ಸಾಹಿತ್ಯವು ಕನ್ನಡಕ್ಕೇನೂ ಕಡಿಮೆಯಿಲ್ಲ. ಮೈಸೂರಿನ ಶಾಸನಗಳಂತೆ ಗ್ರಾಮ ಸಾಹಿತ್ಯವು ಕೂಡ ಹಲವು ದೊಡ್ಡ ದೊಡ್ಡ ಪುಸ್ತಕಗಳ ರೂಪದಿಂದ ಮೆರೆಯಬಹುದು. ಅಂತಹ ಕಾಲವು ಇನ್ನೆಂದಿಗೆ ಬರುವುದೋ ಬರಲಿ...."[2] ಎಂಬ ಆಸೆ ತೋಡಿಕೊಂಡಿದ್ದಾರೆ. ಮುಂದೆ 1924ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ಮಧುರಚೆನ್ನರ 'ಹಳ್ಳಿಯ ಹಾಡುಗಳು' ಎಂಬ ಲೇಖನ ಪ್ರಕಟಗೊಂಡು ಜನಪದ ಸಾಹಿತ್ಯದತ್ತ ಶಿಷ್ಟರ ಗಮನ ಸೆಳೆಯಿತು. ಇಷ್ಟೊತ್ತಿಗಾಗಲೆ ಹಲಸಂಗಿ ಗೆಳೆಯರು ತ್ರಿಪದಿಗಳನ್ನು ಸಂಗ್ರಹಿಸುವ ಕಾರ್ಯ ನಡೆಸಿದ್ದರು. ಕೆಲವನ್ನು 'ಜಯ ಕರ್ನಾಟಕ'ದಲ್ಲಿ ಪ್ರಕಟಿಸಿದ್ದರು. ಹೀಗೆ ಪ್ರಕಟಗೊಂಡ ತ್ರಿಪದಿಗಳು ಅಂದಿನ ಸಾಹಿತಿಗಳನ್ನು ಸಾಹಿತ್ಯಾಸಕ್ತರನ್ನು ತುಂಬಾ ಆಕರ್ಷಿಸಿದವು. ಹೀಗೆ ಆಕರ್ಷಿತ ರಾದವರಲ್ಲಿ ಬೇಂದ್ರೆ, ಮಾಸ್ತಿ, ಬಿ.ಎಂ.ಶ್ರೀ. ಮುಂತಾದವರು ಪ್ರಮುಖರು. ಬೇಂದ್ರೆಯವರು ಹೋದ ಹೋದಲ್ಲೆಲ್ಲ ಈ ತ್ರಿಪದಿಗಳನ್ನು ಹೇಳಿ ಅರ್ಥ ವಿವರಿಸಿ ಜನಪದ ಸಾಹಿತ್ಯದ ರುಚಿ ಉಣಬಡಿಸಿದರು. ಮಾಸ್ತಿಯವರು ಈ ತ್ರಿಪದಿಗಳಲ್ಲಿ ವ್ಯಕ್ತವಾಗಿರುವ ಸಂಸ್ಕೃತಿಯನ್ನು ಕುರಿತು ಲೇಖನ ಬರೆದು ಸಾಹಿತ್ಯಿಕ ವಲಯದಲ್ಲಿ ಹೊಸ ಚಿಂತನೆಯ ಅಲೆ ಎಬ್ಬಿಸಿದರು. ಇಷ್ಟೆಲ್ಲ ಆದ ಮೇಲೆ ತಾವು ಸಂಗ್ರಹಿಸಿದ ತ್ರಿಪದಿಗಳನ್ನು ಪುಸ್ತಕ ರೂಪದಲ್ಲಿ ಹೊರತರುವ ಅನಿವಾರ್ಯ ಕೆಲಸಕ್ಕೆ ಗೆಳೆಯರು ಕೈಹಾಕಿದರು. ಸಾಹಿತಿ ಮಿತ್ರರ ಒತ್ತಾಯವೂ ಇದರೊಂದಿಗೆ ಕೂಡಿಕೊಂಡಾಗ 1933ರಲ್ಲಿ 'ಗರತಿಯ ಹಾಡು' ಪ್ರಕಟವಾಯಿತು.

'ಗರತಿಯ ಹಾಡು' ಸಂಗ್ರಹದ ತ್ರಿಪದಿಗಳನ್ನು ಹಲಸಂಗಿ ಗೆಳೆಯರು ತಮ್ಮ ಊರಲ್ಲಿ ಸುತ್ತು ಮುತ್ತಲಿನ ಹಳ್ಳಿಗಳಲ್ಲಿ ಸಂಗ್ರಹಿಸಿದ್ದಾರೆ. ಈ ಅಂಶವನ್ನು ಬೇಂದ್ರೆಯವರು "ಈ ಸಂಗ್ರಹದಲ್ಲಿ ವಿಶೇಷವಾಗಿ ವಿಜಾಪುರದ 'ತದ್ದೆವಾಡ' ನಾಡಿನ ಪದಗಳೆ ಮೂರು ಮುಕ್ಕಾಲು ಪಾಲು ಇವೆ" ಎಂದು ಸ್ಪಷ್ಟಪಡಿಸಿದ್ದಾರೆ (ಗರತಿಯ ಹಾಡು ಸಂಕಲನಕ್ಕೆ ಬರೆದಿರುವ 'ಪರಿಚಯ'ದಲ್ಲಿ). ಇನ್ನು ಉಳಿದ ಕಾಲು ಭಾಗದ ಪದ್ಯಗಳನ್ನು ಎಲ್ಲೆಲ್ಲಿಂದ ಸಂಗ್ರಹಿಸಲಾಯಿತು ? ಎಂಬುದು ತಿಳಿದುಬರುವುದಿಲ್ಲ. ಈ ಉಳಿದ ಪದ್ಯಗಳು ಹಲಸಂಗಿ ಗೆಳೆಯರು ಅಲ್ಲಲ್ಲಿಗೆ ಹೋದಾಗ ಸಂಗ್ರಹಿಸಿದ ಮತ್ತು ಬೇರೆ ಬೇರೆ ಕಡೆಯ ಸ್ನೇಹಿತರಿಂದ ಬರೆದು ತರಿಸಿಕೊಂಡ ರಚನೆಗಳಾಗಿರುವ ಸಾಧ್ಯತೆಯಿದೆ. ಈ ಸಂಕಲನದ ತ್ರಿಪದಿಗಳ ಭಾಷಿಕ ಸ್ವರೂಪದಲ್ಲಿ ಸೂಕ್ಷ್ಮ ವ್ಯತ್ಯಾಸವಿರುವುದು ತೀರಾ ಗಮನವಿಟ್ಟು ನೋಡಿದಾಗ ತಿಳಿದುಬರುತ್ತದೆ.

ಹಲಸಂಗಿ ಗೆಳೆಯರು ಸಹೃದಯರು ಕವಿಗಳು ರಸಗ್ರಾಹಿಗಳು ಸಂಸ್ಕೃತಿಯ

2. ಮಧುರಚೆನ್ನರ ಲೇಖನಗಳು ಪು. 246 (ಸಂ. ಡಾ॥ ಜಿ. ಎಸ್. ಕಾಪಸೆ).

ಅಭಿಮಾನಗಳು. ಅವರು ಹಳ್ಳಿಯ ಹಾಡುಗಳನ್ನು ಕೇಳಿ ಸಂತೋಷಗೊಂಡವರು. ಆ ಸಂತೋಷವನ್ನು ನಾಡವರೊಂದಿಗೆ ಹಂಚಿಕೊಂಡು ಅನುಭವಿಸುವ ಇಚ್ಛೆಯಿದ್ದವರು. ಆದ್ದರಿಂದಲೇ ಜನಪದ ಹಾಡುಗಳ ಸಂಕಲನಗಳನ್ನು ಪ್ರಕಟಿಸಿದರು. ಇದು ಮುಖ್ಯ ಉದ್ದೇಶವೆಂಬುದು ಸ್ಪಷ್ಟವಿದೆ. ಆದರೆ ಅವರು 'ಗರತಿಯ ಹಾಡು' ಪ್ರಕಟಿಸಲು ಇನ್ನೂ ಬೇರೆ ಬೇರೆ ಉದ್ದೇಶಗಳಿದ್ದವು. ಬೇಂದ್ರೆಯವರು ಈ ಉದ್ದೇಶಗಳನ್ನು ವಿವರಿಸಿದ್ದಾರೆ. "ಬೀದರ ಹೈದರಾಬಾದಗಳ ಉತ್ತರದ ತುದಿಯಿಂದ ನೀಲಗಿರಿ ಕೊಯಿಮತ್ತೂರಿನ ದಕ್ಷಿಣದ ತುದಿಯವರೆಗೆ ಹಬ್ಬಿರುವ ಕರ್ನಾಟಕವು ಒಂದೆಂಬುದಕ್ಕೆ ಒಂದು ನಿದರ್ಶನವು ಈ ಹಾಡುಗಳಲ್ಲಿದೆ. ಅಲ್ಪ ಸ್ವಲ್ಪ ಪಾಠಭೇದದಿಂದ ಇವುಗಳಲ್ಲಿ ಅರ್ಧಕ್ಕರ್ಧ ಹಾಡುಗಳು ಎಲ್ಲ ಕನ್ನಡ ಮನೆಗಳಲ್ಲಿ ಹರಡಿಕೊಂಡಿರಲು ಸಾಕು. ಈ ಜನಪದ ವೇದವೇ ಎಲ್ಲ ಕನ್ನಡಿಗರಿಗೂ ಸಾಮಾನ್ಯವಾದ ತಾಯ ಮೊಲೆವಾಲು ಎಂಬುದು, ಇದನ್ನೋದಿದವರ ಅನುಭವಕ್ಕೆ ಬಾರದೆ ಇರದು" ಎಂದು ಬೇಂದ್ರೆಯವರು ಹೇಳಿದ್ದರಲ್ಲಿ ಚಿಂತನಶೀಲ ಅಂಶಗಳಿವೆ. ಮುಖ್ಯವಾದದ್ದೆಂದರೆ ಈ ಮಾತಿನಲ್ಲಿ ಅಡಗಿರುವ ಕರ್ನಾಟಕ ಏಕೀಕರಣದ ಕನಸು ಅಚ್ಚರಿಯನ್ನುಂಟುಮಾಡುವಂತಿದೆ. ಆರು ದಶಕಗಳ ಹಿಂದೆ ಬದಲಾವಣೆಯ ಗಾಳಿ ಬೀಸಲಾರಂಭಿಸಿತ್ತು. ಆಗ ಸಾಂಪ್ರದಾಯಿಕ ಕಲೆ ಸಾಹಿತ್ಯಗಳ ಬಗ್ಗೆ ಮೊದಲಿನ ಆಸ್ಥೆ ಉಳಿದಿರಲಿಲ್ಲ. ಇಂಥ ಸಂಕ್ರಮಣಾವಸ್ಥೆಯಲ್ಲಿ ಪರಂಪರಾಗತವಾಗಿ ಹರಿದು ಬಂದಿರುವ ಗ್ರಾಮೀಣ ಸಾಹಿತ್ಯ ಸಂಪದವನ್ನು ಉಳಿಸಿಕೊಂಡು ರಕ್ಷಿಸಿಕೊಳ್ಳಬೇಕೆಂಬ ಹಂಬಲ ಗರತಿ ಹಾಡಿನ ಪ್ರಕಟಣೆಗೆ ಮತ್ತೊಂದು ಮಹತ್ವದ ಕಾರಣವಾಗಿದೆ. ಈ ಅಭಿಪ್ರಾಯವು ಬೇಂದ್ರೆಯವರ—"ಯಾರಿಂದ ಇವು ಬಂದವೋ, ಆ ಹೆಣ್ಣು ಮಕ್ಕಳಲ್ಲಿಯೇ ಈ ಹಾಡುಗಳ ವಾಡಿಕೆಯು ಕಡಿಮೆಯಾಗುತ್ತ ಬಂದಿದೆ, ಹಾಗಾಗ ಬಾರದು. ಹೆಣ್ಣು ಮಕ್ಕಳ ಹಾಡುಗಳನ್ನು ಅವರ ಕೊಳಲ ಕೊಳಲಿನಿಂದ ಕೇಳುವುದರಲ್ಲಿ ಒಂದು ಸೊಗಸಿದೆ, ಒಂದು ಜೀವದಾಯಕ ಶಕ್ತಿಯಿದೆ. ನವನಾಗರಿಕತೆಯೋ, ನೂತನ ಶಿಕ್ಷಣ ಸಂಪ್ರದಾಯವೋ, ಏನೋ ಒಂದು ಬಂದು ಆ ಹಳೆಯ ಹಾಡಿನ ಸಂಪ್ರದಾಯವನ್ನು ಬೀಳುಗಳೆಯುತ್ತಿದೆ. ಕನ್ನಡ ಕವನ-ತುಂಗೆಯ ತವರೂರು ಈ ಹಾಡುಗಳು. ಅವುಗಳ ಸಂಸ್ಕಾರ ಬೇಡವೇ ಕನ್ನಡ ಮಕ್ಕಳಿಗೆ ಚಿಕ್ಕಂದಿನಲ್ಲಿ ? ಕನ್ನಡಿಗರಿಗೆ ಬೇಡವೇ, ಬೆಳೆದು ದೊಡ್ಡವರಾದ ಮೇಲೆ ?—" ಈ ಮಾತುಗಳಲ್ಲಿ ವ್ಯಕ್ತಗೊಂಡಿದೆ. ಹಲಸಂಗಿ ಗೆಳೆಯರು ತಾವು ಸಂಗ್ರಹಿಸಿದ ಎಲ್ಲ ತ್ರಿಪದಿಗಳನ್ನು 'ಗರತಿಯ ಹಾಡು' ಸಂಗ್ರಹದಲ್ಲಿ ಸೇರಿಸಿಲ್ಲ. ಆಯ್ಕೆ ಮಾಡಿದ ತ್ರಿಪದಿಗಳನ್ನಷ್ಟೇ ಇಲ್ಲಿ ಸೇರಿಸಿರುವುದನ್ನು ಕೂಡ ಬೇಂದ್ರೆ ಹೇಳಿದ್ದಾರೆ. ಈ ಸಂಗ್ರಹಕ್ಕೆ ಬಿಎಂಶ್ರೀಯವರು ಬರೆದಿರುವ ಪ್ರಸ್ತಾವನೆ ಅಂದಿನ ಸಂದರ್ಭದಲ್ಲಿ ಉಂಟು ಮಾಡಿದ ಪ್ರಭಾವ ಅಷ್ಟಿಷ್ಟಲ್ಲ. "ಮೊದಲು ಹುಟ್ಟಿದುದು ಜನವಾಣಿ. ಅದು ಬೆಳೆದು, ಪರಿಷ್ಕೃತವಾಗಿ ವೃದ್ಧಿಯಾದುದು ಕವಿವಾಣಿ. ಜನವಾಣಿ



ಬೇರು, ಕವಿವಾಣಿ ಹೂ...." ಎಂದು ಜನಪದ ಸಾಹಿತ್ಯದ ಮಹತ್ವವನ್ನು ವಿವರಿಸಿ ಶಿಷ್ಟವಲಯದಲ್ಲಿ ಆಲೋಚನೆಯ ಅಲೆಗಳನ್ನೆಬ್ಬಿಸಿದ ಆ ಪ್ರಸ್ತಾವನೆ 'ಗರತಿಯ ಹಾಡು' ಸಂಗ್ರಹದ ತೂಕ ಹೆಚ್ಚಿಸಿದ್ದಲ್ಲದೆ ಒಟ್ಟಾರೆ ಕನ್ನಡ ಜನಪದ ಸಾಹಿತ್ಯದ ಗೌರವ ಹೆಚ್ಚಿಸಿತು.

ಹಲಸಂಗಿ ಗೆಳೆಯರು ತಮ್ಮ ತ್ರಿಪದಿ ಸಂಕಲನಕ್ಕೆ 'ಗರತಿಯ ಹಾಡು' ಎಂದು ಹೆಸರಿಟ್ಟುದು ಕೂಡ ತುಂಬಾ ಉಚಿತವಾಗಿದೆ. 'ಗರತಿ' ಎಂಬ ಪದ ಸತಿ, ಗೃಹಿಣಿ, ಪತಿವ್ರತೆ ಮುಂತಾದವುಗಳ ಅರ್ಥವನ್ನು ಮೀರಿ ಅವೆಲ್ಲವುಗಳನ್ನೊಳಗೊಂಡ ವಿಶಿಷ್ಟ ಅರ್ಥ ನೀಡುವ ಕನ್ನಡ ಪದವಾಗಿದೆ. ಗೌರವಾನ್ವಿತ ಸ್ತ್ರೀಕುಲಕ್ಕೆ ಸಂಕೇತವಾಗಿರುವ 'ಗರತಿ' ಪದದಲ್ಲಿರುವ ಧ್ವನಿಶಕ್ತಿ ಅಗಾಧವಾದುದು. ಸಂಕಲನದ ಗುಣ ಮೌಲ್ಯ ಎಷ್ಟು ಹೆಚ್ಚಿನದೋ ಸಂಕಲನದ ಹೆಸರು ಕೂಡ ಅಷ್ಟೇ ಹೆಚ್ಚಿನದಾಗಿದೆ. (ಹೆಣ್ಣು ಮಕ್ಕಳ ಹಾಡುಗಳನ್ನು 'ಗರತಿಯ ಹಾಡುಗಳು' ಎಂದು ಕರೆಯುತ್ತ ಬಂದಿರುವುದನ್ನು ಇತ್ತೀಚೆಗೆ ಆಕಾಶವಾಣಿಯವರು ಕೈಬಿಟ್ಟು 'ಸಂಪ್ರದಾಯದ ಪದಗಳು' ಎಂದು ಕರೆಯುತ್ತಿರುವುದು ಅನುಚಿತವಾಗಿದೆ).

ತ್ರಿಪದಿಗಳು ಬಿಡಿ ರಚನೆಗಳು. ಅವುಗಳ ಸಂಕಲನ ಸಿದ್ಧಗೊಳಿಸಬೇಕಾದಾಗ ಅವನ್ನು ಹೇಗೆ ಗುಂಪುಗೂಡಿಸಬೇಕು, ಹೇಗೆ ವರ್ಗೀಕರಿಸಬೇಕು ಎಂಬ ಸಮಸ್ಯೆ ಹಲಸಂಗಿ ಗೆಳೆಯರಿಗೆ ಎದುರಾಯಿತು. 'ಗರತಿಯ ಹಾಡು' ಸಂಕಲನದ ತ್ರಿಪದಿಗಳನ್ನು—ಪರಂಪರೆ, ಸ್ತುತಿ, ತವರುಮನೆ-ತಾಯ್ತಂದೆ, ಅಣ್ತಮ್ಮ-ಅಕ್ಕ-ತಂಗಿ-ಅತ್ತಿಗೆ-ನಾದಿನಿಯರು, ಗೆಳತಿ, ಅತ್ತೆಯ ಮನೆಯ ಕಷ್ಟ, ಮನಸ್ತಾಪ, ಸತಿ-ಪತಿ, ಬಸುರೆ-ಬಾಣಂತಿ, ಲಾಲಿ, ಮಗ-ಮಗಳು-ಸೊಸೆ, ಹರಕೆ, ಬಂಜೆ, ವೈಧವ್ಯ, ಹಾಸ್ಯ, ಪೌರಾಣಿಕ, ಐತಿಹಾಸಿಕ ವರ್ಣನೆ, ಸಂವಾದ, ಪ್ರಾರ್ಥನೆ, ಪರ್ಯಾಯ ನೀತಿ, ಸ್ಪಷ್ಟ ನೀತಿ, ಕೊನೆ—ಹೀಗೆ ವರ್ಗೀಕರಿಸಲಾಗಿದೆ. ಹೆಣ್ಣುಮಕ್ಕಳ ತ್ರಿಪದಿಯನ್ನು ಪ್ರಥಮ ಬಾರಿಗೆ ವರ್ಗೀಕರಿಸಿದ ಹಲಸಂಗಿ ಗೆಳೆಯರು ಅಭಿನಂದನಾರ್ಹ ಕಾರ್ಯ ಮಾಡಿದ್ದಾರೆ. ಈ ವರ್ಗೀಕರಣ ಎಷ್ಟೊಂದು ಬಂಧುರವಾಗಿದೆಯೆಂದರೆ ಮುಂದೆ ಬಂದ ತ್ರಿಪದಿ ಸಂಕಲನಗಳೆಲ್ಲ ಹೆಚ್ಚಾಗಿ ಈ ಕ್ರಮವನ್ನೇ ಅನುಸರಿಸಿದವು. ಸ್ತುತಿ ಮತ್ತು ಪ್ರಾರ್ಥನೆ, ಸ್ಪಷ್ಟ ನೀತಿ ಮತ್ತು ಪರ್ಯಾಯ ನೀತಿ ಇವು ಬೇರೆ ಬೇರೆಯಾಗ ಬೇಕಾಗಿರಲಿಲ್ಲ. ವಾಸ್ತವವಾಗಿ ಅವು ಒಂದರೊಳಗೊಂದು ಬೆರೆತುಕೊಂಡಿವೆ.

'ಗರತಿಯ ಹಾಡು' ಸಂಕಲನದ ತ್ರಿಪದಿಗಳ ಕೇಂದ್ರ ವಸ್ತು ಹೆಣ್ಣು. ಹೆಣ್ಣಿನ ಬದುಕು ಹಾಗೂ ಹೆಣ್ಣಿನ ಕಣ್ಣಿಗೆ ಕಾಣುವ ಬದುಕುಗಳೆರಡೂ ಇಲ್ಲಿ ಚಿತ್ರಿತವಾಗಿವೆ. ಈ ವಿಷಯವನ್ನು ಸಿಂಪಿ ಲಿಂಗಣ್ಣನವರು "'ಗರತಿಯ ಹಾಡು' ನಮ್ಮ ಸ್ತ್ರೀ ಜೀವನದ ಒಳಗನ್ನಡಿ. ಅದು ನಮ್ಮ ಹೆಣ್ಣುಮಕ್ಕಳ ಹೃದಯದ ಪಡಿಗನ್ನಡಿ. ಅದರಲ್ಲಿ ಮಮತೆಯ ಮಾಧುರ್ಯವು ಮೈವೆತ್ತಿದೆ, ಪ್ರೇಮದ ಸತ್ವವು ಅಳವಟ್ಟಿದೆ.

ಅದರಲ್ಲಿ ಹೆಣ್ಣಿನ ತ್ಯಾಗ ಬುದ್ಧಿಯು ತುಳುಕುತ್ತಿದೆ. ಕೌಟುಂಬಿಕ ಬಾಳಿನ ರಸವು ಪರಿಪಾಕಗೊಂಡಿದೆ. ಅದು ಜೀವನದ ಜೀವಾಳವಾಗಿದೆ" ಎಂದೂ (ಅರಿಕೆಯಲ್ಲಿ) ಬೇಂದ್ರೆಯವರು "ಜೀವನವೇ ದೇವತೆಯಾದ, ತ್ರಿಪದಿ ಛಂದದಲ್ಲಿ ಹೊರ ಹೊಮ್ಮಿದ 'ಗರತಿಯ ಹಾಡಿ'ನ ಋಷಿಗಳು ಹೆಣ್ಣುಮಕ್ಕಳು ನಮ್ಮ ತಾಯಿ ತಂಗಿಯರು, ಅಮ್ಮ-ಅಕ್ಕಂದಿರು, ಮಡದಿ-ಮಕ್ಕಳು" ಎಂದು ಹೇಳಿದ್ದಾರೆ. ಹೆಣ್ಣಿನ ಜೀವನದ ಒಳನೋಟಗಳು, ಅವಳ ಬದುಕಿನ ವಿವಿಧ ಘಟ್ಟಗಳು ಈ ತ್ರಿಪದಿಗಳಲ್ಲಿ ಒಡ ಮೂಡಿವೆ. ಇಲ್ಲಿ ಹೆಣ್ಣು ಜೀವ ತನ್ನನ್ನು ತಾನೇ ವಿವಿಧ ದೃಷ್ಟಿಕೋನಗಳಿಂದ (ತಾಯಿ ಮಗಳನ್ನು, ಸೊಸೆ ಅತ್ತೆಯನ್ನು ಹೀಗೆ) ಗಂಡನ್ನು ವಿವಿಧ ನೆಲೆಗಳಿಂದ (ಅಪ್ಪ, ಮಾವ, ಗಂಡ, ಮಗ ಹೀಗೆ) ನೋಡಿದೆ. ತ್ರಿಪದಿಗಳು ಸಮೂಹ ಸೃಷ್ಟಿ. ಬೇರೆ ಬೇರೆಯವರು ಬೇರೆ ಬೇರೆ ಸಂದರ್ಭದಲ್ಲಿ ಬೇರೆ ಬೇರೆಯವರನ್ನು ಬೇರೆ ಬೇರೆ ಸನ್ನಿವೇಶಗಳನ್ನು ತಮಗೆ ಸರಿಕಂಡಂತೆ ಪರಿಭಾವಿಸಿದ್ದರಿಂದ ಈ ತ್ರಿಪದಿಗಳ ಸಮೂಹದಲ್ಲಿ ವೈವಿಧ್ಯತೆ ಸಂಕೀರ್ಣತೆ ಹಾಗೂ ವೈರುದ್ಧ್ಯಗಳು ಉಂಟಾಗಿರುವುದು ಸಹಜವಾಗಿದೆ, ಒಬ್ಬಳಿಗೆ ಆಕಳದಂತೆ ಕಾಣುವ ಅವಳ ಅತ್ತೆ ಇನ್ನೊಬ್ಬಳಿಗೆ ರಾಕ್ಷಸಿಯಾಗಿ ಕಾಣುತ್ತಾಳೆ. ಒಬ್ಬ ಹೆಣ್ಣು ಏಕಕಾಲಕ್ಕೆ ಮಮತೆಯ ತಾಯಿಯೂ ಕಾಡುವ ಅತ್ತೆಯೂ ಆಗಿರುತ್ತಾಳೆ. ತವರು ಮನೆಯ ಬಗ್ಗೆ ಅತಿಯಾದ ವ್ಯಾಮೋಹ ಹರಿದು ಬಂದಿರುವುದರೊಂದಿಗೇ ಗಂಡನ ಮನೆಯ ಬಗ್ಗೆ ಅಭಿಮಾನ ಮತ್ತು ಸ್ವಾಭಿಮಾನದ ಕೆಚ್ಚು ವ್ಯಕ್ತವಾಗಿದೆ. ಇಂಥ ವೈವಿಧ್ಯತೆ ವೈರುದ್ಧ್ಯತೆಗಳಿರುವುದ ರಿಂದಾಗಿ 'ಗರತಿಯ ಹಾಡು' ಹೆಣ್ಣಿನ ಬದುಕಿನ ಬಗೆಗಿನ ಸರಳೀಕೃತ ವ್ಯಾಖ್ಯಾನ ವಾಗದೆ ಸಂಕೀರ್ಣ ಅನುಭವ ನೀಡುವ ಕುತೂಹಲದ ಕೃತಿಯಾಗಿದೆ. ಆಧುನಿಕತೆಯ ಸೋಂಕು ತಾಗಿದ ಮುನ್ನಿನ ಗ್ರಾಮೀಣ ಬದುಕಿನ ಯಥಾರ್ಥ ಚಿತ್ರಣ ಇಲ್ಲಿದೆ. ಈ ಸಂಕಲನದಲ್ಲಿ ಏಕ ಸೂತ್ರವಾಗಿ ವ್ಯಾಪಿಸಿರುವ ಹೆಣ್ಣು ಪರಂಪರಾಗತ ಮೌಲ್ಯಗಳ ಘನೀಕೃತ ರೂಪವಾಗಿದ್ದಾಳೆ. ಮೌಲ್ಯಗಳ ಪ್ರಖರ ಬೆಳಕಿನಲ್ಲಿ ಅವಳಿಗೆ ತನ್ನ ಯಾತನೆಗಳು ಮಂದವಾಗಿ ಗೋಚರಿಸುತ್ತವೆ. ಅವಳ ಸ್ಥಾಯಿಭಾವ-ತಾಳ್ಮೆ, ಹೊರಗಿನಿಂದ ಬಂದೆರಗುವ ಆತಂಕ ವಿಪತ್ತು ಅನ್ಯಾಯಗಳೆಲ್ಲ ಅವಳ ಸಹನೆಯ ಪಡಿಯಚ್ಚಿನಲ್ಲಿ ಎರಕಗೊಂಡು ಅನುಕಂಪೆಯ ಪ್ರತಿಕ್ರಿಯೆಗಳಾಗುತ್ತವೆ.

ಕನ್ನಡ ಸಾಹಿತ್ಯ ಚರಿತ್ರೆ ಬರೆದ ವಿದ್ವಾಂಸರಿಗೆ ಬೆರಳೆಣಿಕೆಯಷ್ಟು ಕವಿಯತ್ರಿಯರು ಕಂಡರು. ಈ ಕೊರತೆಗಾಗಿ ಮರುಗುತ್ತಿದ್ದವರ ಎದುರಿಗೆ ಗರತಿಯ ಹಾಡು ಆಘಾತಕರ ರೀತಿಯಲ್ಲಿ ಪ್ರತ್ಯಕ್ಷವಾಯಿತು. ಸಾವಿರಾರು ವರ್ಷ ಗಳಿಂದ ನಮ್ಮ ಅಸಂಖ್ಯಾತ ಅನಕ್ಷರಸ್ಥ ಹೆಣ್ಣುಮಕ್ಕಳು ಬೆಳೆಸಿಕೊಂಡು ಬಂದ ಬೆಟ್ಟದಂಥ ಸಾಹಿತ್ಯ ಸಂಪತ್ತನ್ನು ಕಂಡು ಶಿಷ್ಟವಲಯದ ಸಾಹಿತಿಗಳು ವಿಮರ್ಶಕರು ಹುಬ್ಬೇರಿಸಲು ಈ 'ಗರತಿಯ ಹಾಡು' ಕಾರಣವಾಯಿತು. ಕಾಡು ಕುಸುಮ ದಂತಿರುವ ಗ್ರಾಮೀಣ ಪ್ರತಿಭೆಯ ಸಹಜ ಚೆಲುವು ತನ್ನ ಅಸ್ತಿತ್ವವನ್ನು ಈ



ಸಂಕಲನದ ಮೂಲಕ ವ್ಯಕ್ತಪಡಿಸಿತು. ಇಲ್ಲಿಯ ತ್ರಿಪದಿಗಳಿಗಿರುವ ಹೃದಯಸ್ಪರ್ಶಿ ಗುಣ ಅಗಾಧವಾದುದು. ಅಂತರ್ಮುಖಿಯಾದ ಮುಗ್ಧ ಹೆಣ್ಣಿನ ಅಂತರಂಗದ ಅನಿಸಿಕೆಗಳು ಪ್ರಖರ ಪ್ರತಿಭೆಯ ಮೂಲಕ ಹೊರ ಹೊಮ್ಮಿದಾಗ ಮನಮುಟ್ಟುವುದು ಮನಕಲಕುವುದು ಸಹಜವೇ.

'ಗರತಿಯ ಹಾಡು' ಸಂಕಲನದ ತ್ರಿಪದಿಗಳ ರಸ ವಿಮರ್ಶೆ ಒಂದು ಪರಂಪರೆಯಾಗಿ ನಮ್ಮಲ್ಲಿ ಬೆಳೆದು ಬಂದಿದೆ. ಕಾವ್ಯ ಮೀಮಾಂಸೆಯ ಸೂತ್ರಗಳನ್ನು ಅನ್ವಯಿಸಿ ನೋಡುವ ವಿವಿಧ ದೃಷ್ಟಿಕೋನಗಳಿಂದ ವಿಶ್ಲೇಷಿಸುವ ಕಾರ್ಯ ಅವ್ಯಾಹತವಾಗಿ ನಡೆದಿದೆ. ಈ ಸಂಕಲನದ ಸಾಹಿತ್ಯಿಕ ಮೌಲ್ಯದ ಶ್ರೇಷ್ಠತೆಯನ್ನು ಪರಿಗಣಿಸುವ ಉದ್ದೇಶದಿಂದ ಕೆಲವು ಉದಾಹರಣೆಗಳನ್ನಿಲ್ಲಿ ಗಮನಿಸಬಹುದಾಗಿದೆ.

ಬಾಲಕರಿಲ್ಲದ ಬಾಲಿದ್ಯಾತರ ಜನ್ಮ
ಬಾಡೀಗಿ ಎತ್ತು ದುಡಿದಂಗ । ಬಾಳೆಲೆಯ
ಹಾಸ್ಯುಂಡು ಬೀಸಿ ಒಗೆದಂಗ ॥

ಬಂಜೆಯ ಬದುಕು ನಿಷ್ಫಲವಾದುದು, ನಿರರ್ಥಕವಾದುದು. ಅವಳು ಕೇವಲ ಭೋಗವಸ್ತುವಾಗಿ ನಂತರ ತಿರಸ್ಕರಿಸಲ್ಪಡುತ್ತಾಳೆಂಬುದನ್ನು ಉಂಡಮೇಲೆ ಬಿಸಾಕುವ ಬಾಳೆಯ ಎಲೆಗೆ ಹೋಲಿಸಲಾಗಿದೆ. ಇದರ ಅರ್ಥ ಹಿಂಜಿದಷ್ಟು ಹಿಗ್ಗುತ್ತ ಹೋಗುವುದರಿಂದ ಇಲ್ಲಿರುವ ಧ್ವನಿ ಶಕ್ತಿ ಅದ್ಭುತವಾಗಿದೆ.

ಗೆಣತಿ ಗೆಣತಿ ಕೂಡಿ ವರತಿ ನೀರಿಗಿ ಹೋಗಿ
ಗರತಿ ನಮ್ಮನ್ನು ಪರಸಂಗ । ತಗದರ
ವರತೀಯ ನೀರ ಸೆಲಿ ಬಂದ

ಎಂದು ಹೇಳುವಲ್ಲಿ ತಾಯಿಯ ಮಹಿಮೆಯ ವಿವರ ಧ್ವನಿಪೂರ್ಣವಾಗಿ ಬಂದಿದೆ.

ಕಂದನ ಕಿರಿಕಿರಿ ಇಂದೇನು ಹೇಳಲಿ
ಬಿಂದೀಗಿ ಹಾಲು ಸುರುವಂದ । ಭೆಂಜೇಯ
ಚಂದ್ರಮನ ತಂದು ನಿಲಿಸೆಂದಾ ।

ಇಲ್ಲಿರುವ ನಿಂದಾಸ್ತುತಿ ಅಲಂಕಾರ ಹೃದ್ಯವಾಗಿದೆ.

ರಾಯ ಬರತಾರಂತ ರಾತ್ರೀಲಿ ನೀರಿಟ್ಟ
ರನ್ನ ಬಚ್ಚಲಕ ಮಣಿ ಹಾಕೆ । ಕೇಳೇನ
ಸಣ್ಣವಳ ಮ್ಯಾಲ ಸಂವತ್ಯಾಕ ।

ಇದು ಕಾಂತಾ ಸಂಮಿತಿಗೆ ಶ್ರೇಷ್ಠ ಉದಾಹರಣೆಯಾಗಿದೆ. ಅವಳಿಗೆ ತನ್ನ ಗಂಡನ ಮೇಲೆ ಕೋಪವಿದೆ. ಆದರೆ ಅದನ್ನು ನೇರವಾಗಿ ಪ್ರಕಟಗೊಳಿಸದೆ, ಹಿತವಾದ ವಾತಾವರಣದಲ್ಲಿ ಹೃದ್ಯವಾದ ರೀತಿಯಲ್ಲಿ ತನ್ನ ಅಸಮಾಧಾನ ಹೇಳಲು

ಸಿದ್ಧಳಾಗುತ್ತಾಳೆ. ಗಂಡನ ಬರುವಿಕೆಗಾಗಿ ಕಾಯುತ್ತ ಅವನನ್ನು ಪ್ರೀತಿಯ ಉಪಚಾರದಿಂದ ಒಲಿಸಿಕೊಂಡು ಆಮೇಲೆ ತನ್ನ ಅಭಿಪ್ರಾಯ ಬಿಂಬಿಸಿ ಹೇಳುವ ಉದ್ದೇಶ ಅವಳಿಗಿದೆ. ಕಾಂತೆ ಉಪದೇಶ ನೀಡುವ ಯಥಾರ್ಥ ಕ್ರಮವಿದು.

ಕಾವ್ಯ ಸೃಷ್ಟಿಗೊಳ್ಳುವ ವಿವಿಧ ಪರಿಗಳು ಗರತಿಯ ಹಾಡಿನ ತ್ರಿಪದಿಗಳಲ್ಲಿ ಧಾರಾಳವಾಗಿ ವ್ಯಕ್ತಗೊಂಡಿವೆ. ಮಾತನ್ನು ಆಡುತ್ತಾಡುತ್ತಲೇ ಅದನ್ನು ತ್ರಿಪದಿಯ ಆಕಾರದಲ್ಲಿ ಕಾವ್ಯದ ನೆಲೆಗೇರಿಸಿದಂಥ ಉದಾಹರಣೆಗಳು ಈ ಸಂಕಲನದ ತುಂಬ ವ್ಯಾಪಿಸಿವೆ. ಅನುಭವವನ್ನು ನಿರಾಲಂಕಾರವಾಗಿ ನೇರವಾಗಿ ಕಾವ್ಯವಾಗಿಸಿದ ತ್ರಿಪದಿಗಳು ಇಲ್ಲಿವೆ. ಕವಿಗಿರಬೇಕಾದ ಸೂಕ್ಷ್ಮ ನಿರೀಕ್ಷಣೆಗೆ ಇಲ್ಲಿಯ ಹಲವಾರು ತ್ರಿಪದಿಗಳನ್ನು ಉದಾಹರಿಸಬಹುದಾಗಿದೆ. ಮನಮಿಡಿಯುವ ಯಾವ ಅನುಭವ-ಸನ್ನಿವೇಶಗಳನ್ನೂ ಗರತಿಯರು ಕಾವ್ಯವಾಗಿಸದೆ ಬಿಟ್ಟಿಲ್ಲ. ಉತ್ಕಟ ಪ್ರಣಯ ಭಾವಗಳನ್ನು ಕೂಡ ಸಂಯಮದ ನೆಲೆಯಲ್ಲಿ ಪರಿಣಾಮಕಾರಿಯಾಗಿ ನಿರೂಪಿಸಿದ್ದಾರೆ. ಸುಸಂಸ್ಕೃತ ಅಭಿರುಚಿಯನ್ನು ಅಪಾರ ಹೃದಯ ಸಂಸ್ಕಾರವನ್ನು ಇಲ್ಲಿ ಮೆರೆದಿದ್ದಾರೆ. ಹೃದಯದಲ್ಲಿ ತುಂಬಿ ನಿಂತ ತೀವ್ರತರ ಭಾವಗಳು ಕಾವ್ಯರೂಪದಲ್ಲಿ ಹೊರ ಹೊಮ್ಮುವಾಗ ತಾಂತ್ರಿಕತೆ ಗೌಣವಾಗುತ್ತದೆ. ಅಥವಾ ಪ್ರತಿಭೆಯ ಕ್ರಿಯಾ ಶೀಲತೆಯನ್ನು ಸುಮ್ಮನೇ ಹಿಂಬಾಲಿಸುತ್ತದೆಂಬುದಕ್ಕೆ

ಅರಗಿನಂಥಾ ನಲ್ಲ ತಿರುಗಿ ಬಾರದೆ ಹೊಂದಾ
ಅರಗಿಣಿ ಹೋಗಿ ಕರತಾರ । ನಗರದ
ದರಬಾರದಾಗ ಇರತಾರ ॥

ಈ ತ್ರಿಪದಿಯನ್ನು ಗಮನಿಸಬೇಕು. ರ ಕಾರದ ಅನುಪ್ರಾಸ ತಾನೇ ತಾನಾಗಿ ಸಹಜ ರೀತಿಯಲ್ಲಿ ಬಂದಿದೆ.

ಗರತಿಯ ಹಾಡಿನ ಸಂಗ್ರಹದಲ್ಲಿರುವ ತ್ರಿಪದಿಗಳೆಲ್ಲ ಬಿಡಿ ತ್ರಿಪದಿಗಳಲ್ಲ. ಕೊನೆಯಲ್ಲಿ 'ಸಂವಾದ' ವಿಭಾಗದಲ್ಲಿ ತ್ರಿಪದಿ ಘಟಕಗಳಿವೆ. ಒಂದು ತ್ರಿಪದಿ ತನ್ನಷ್ಟಕ್ಕೆ ತಾನು ಸ್ವತಂತ್ರವಾಗಿರುತ್ತದೆ. ಒಮ್ಮೊಮ್ಮೆ ಒಂದೇ ತ್ರಿಪದಿಯಲ್ಲಿ ಹೇಳುವುದನ್ನೆಲ್ಲ ಹೇಳಲಿಕ್ಕಾಗದು. ಅಂಥ ಸಂದರ್ಭದಲ್ಲಿ ಹೇಳುವ ವಿಷಯ ಎರಡು ಮೂರು ನಾಲ್ಕು ತ್ರಿಪದಿಗಳಿಗೆ ವ್ಯಾಪಿಸುತ್ತದೆ. ಇಂಥವುಗಳನ್ನು ತ್ರಿಪದಿ ಘಟಕಗಳೆನ್ನಬಹುದು. ಎರಡು ತ್ರಿಪದಿಗಳಿರುವಲ್ಲಿ ಅವು ಸಾಮಾನ್ಯವಾಗಿ ಸಂವಾದ ರೂಪದಲ್ಲಿರುತ್ತವೆ. ಇಂಥ ಸಂವಾದ ರೂಪಿ ತ್ರಿಪದಿಗಳ 'ಸಂವಾದ' ವಿಭಾಗದಲ್ಲಿ ಸೇರಿಸಲಾಗಿದೆ.

ಚಿಂತಾಕ ಇಟಗೊಂಡು ಚಿಪ್ಪಾಟ ಬಳಿವಾಕಿ
ಚಿಂತಿಲ್ಲ ಏನ ನಿನಗಿಷ್ಟು । ನಿನ ರಾಯ
ಅಲ್ಲೊಬ್ಬ ಕೂಡ ನಗತಿದ್ದಾ !



ನಕ್ಕರೆ ನಗಲೆವ್ವ ನಗೆ ಮುಖದ ಕ್ಯಾದೀಗಿ
ನಾ ಮುಚ್ಚಿ ಮುದ ಪರಿಮಳದಾ ಹೂವ
ಅವಳೊಂದು ಘಳಿಗೆ ಮುಡಿಯಲಿ ॥

ಇದು ಅಂಥ ಒಂದು ತ್ರಿಪದಿ ಘಟಕವಾಗಿದೆ. ಈ ಘಟಕಗಳನ್ನು ಸ್ವತಂತ್ರವಾಗಿ ಹಾಡಲಾಗುತ್ತದೆ.

ಕಂಠಸ್ಥ ಸಂಪ್ರದಾಯದ ಸಾಹಿತ್ಯವನ್ನು ಬರಹಕ್ಕೆ ಇಳಿಸುವಾಗ ಹಲವಾರು ಸಮಸ್ಯೆಗಳು ಎದುರಾಗುತ್ತವೆ. ಆಡುಮಾತನ್ನು ನೇರವಾಗಿ ಇದ್ದಕ್ಕಿದ್ದಂತೆ ಅದರ ಎಲ್ಲ ಸೂಕ್ಷ್ಮತೆಗಳೊಂದಿಗೆ ಲಿಪಿಗಿಳಿಸುವುದು ಅಸಾಧ್ಯ. ಲಿಪಿಗಿಳಿಸುವವ ಅಕ್ಷರಸ್ಥ ನಾಗಿದ್ದು ಗ್ರಾಂಥಿಕ ಭಾಷೆಯ ಪ್ರಭಾವದಲ್ಲಿರುವುದರಿಂದ ಅವನಿಗರಿವಿಲ್ಲದಂತೆ ಆಡು ಮಾತಿನ ಕೆಲವು ಸೂಕ್ಷ್ಮತೆಗಳು ಉಚ್ಚಾರದ ವ್ಯತ್ಯಾಸಗಳು ಕೈಜಾರಿ ಗ್ರಾಂಥಿಕ ರೂಪ ಸಿದ್ಧಗೊಳ್ಳುತ್ತದೆ. ಈ ಸಮಸ್ಯೆಯನ್ನು ಪ್ರಥಮ ಪ್ರಯತ್ನದ ಕರ್ತೃಗಳಾಗಿರುವ ಹಲಸಂಗಿ ಗೆಳೆಯರು ಹೇಗೆ ಪರಿಹರಿಸಿಕೊಂಡರೆಂಬುದು ಕುತೂಹಲಪೂರ್ಣವಾಗಿದೆ. ಮೂಲ ಪಾಠಕ್ಕೆ ಹೆಚ್ಚು ಹತ್ತಿರವಾಗಿರುವಂತೆ ಅವರು ತ್ರಿಪದಿಗಳನ್ನು ಲಿಪಿಗಿಳಿಸಿದ್ದಾರೆ. ತೀರಾ ಪ್ರಾದೇಶಿಕತೆಯ ಜಟಿಲತೆಗೆ ಒಳಗಾಗದಂತಹ ಗ್ರಾಂಥಿಕವೂ ಅನಿಸದಂತಹ ಒಂದು ಸುವರ್ಣ ಮಾಧ್ಯಮವನ್ನು ಅವರು ಕಂಡುಕೊಂಡಿದ್ದಾರೆ. ಈ ತ್ರಿಪದಿಗಳನ್ನು ಕನ್ನಡಿಗರೆಲ್ಲ ಓದಿ ಸವಿಯಬೇಕೆಂಬ ಉದ್ದೇಶ ಅವರಿಗಿದ್ದುದರಿಂದ ಅವರು ಇಂಥ ಕ್ರಮವನ್ನು ಅನುಸರಿಸಬೇಕಾಯಿತು. ಆದ್ದರಿಂದ ಧರೆಯಲ್ಲಿ, ಮುಖದವನೆ, ಶಿವಧ್ಯಾನ, ಶ್ರೀಗಂಧ, ಶಂಖು, ಮುಂತಾದ ಗ್ರಾಂಥಿಕ ಪ್ರಯೋಗಗಳು ನುಸುಳಿಕೊಂಡಿವೆ.

ತ್ರಿಪದಿಗಳೆಲ್ಲ ಖಂಡಿತವಾಗಿಯೂ ಹಾಡುಗಳು. ಹಾಡಿನ ಮೂಲಕವೇ ಅವು ಅಭಿವ್ಯಕ್ತಿಗೊಳ್ಳುತ್ತವೆ. ಹಾಡನ್ನು ಬರಹಕ್ಕಿಳಿಸುವುದೂ ಒಂದು ತೊಡಕು. ಹಾಡಿನ ವಿನ್ಯಾಸ ಬರಕ್ಕೆಲ್ಲಿಂದ ಬಂದೀತು ? ನೇರವಾಗಿ ಇದ್ದಕ್ಕಿದ್ದಂತೆ ಹಾಡಿನ ಪದಪುಂಜಗಳನ್ನು ಬರಹಕ್ಕಿಳಿಸಿದರೆ ಹಾಡಿನ ಗೇಯಗುಣವನ್ನು ಲೋಪ ಮಾಡಿದಂತಾ ಗುತ್ತದೆ. ಈ ಅರಿವು ಹಲಸಂಗಿ ಗೆಳೆಯರಿಗಿತ್ತು. ತ್ರಿಪದಿಯ ಗೇಯಗುಣ ಅವರ ಕಿವಿತುಂಬಿದ್ದರಿಂದ ಅವುಗಳನ್ನು ಬರಹಕ್ಕಿಳಿಸುವಾಗ ಗೇಯತೆಯ ವಾಸನೆಯನ್ನು ಸೂಚಿಸಿದ್ದಾರೆ. ಈ ಪ್ರಯತ್ನದ ಕುರುಹುಗಳನ್ನು ದೀರ್ಘಸ್ವರ ಮತ್ತು ಪ್ಲುತಗಳ ಬಳಕೆಯಲ್ಲಿ ಗುರುತಿಸಬಹುದು. ಗಚ್ಚೀನ ಗುಡಿಯ ಜಕ್ಕವ್ವ, ಸೆಲ್ಲೆಲ್ಲ ಮಲ್ಲೀಗಿ, ಗಂಗೀಯ ನೀರೊತ್ತಿ, ಮಂದಿ ಮಂದೀಯೆಂದು, ನೀ ಇದ್ದೀರ ನಮಗ ಸಂಪರಾಜ್ಯ, ಬಿಳ್ಳದು, ಬೆಟ್ಟದ ಬಿದಿರೆ, ಜಲ್ಲ ಜಲ್ಲಣ ಮುಂತಾದವು ಇದಕ್ಕೆ ಉದಾಹರಣೆ ಗಳಾಗಿವೆ.

ತ್ರಿಪದಿಗಳನ್ನು ಹಾಡುವ ಕ್ರಮ ವಿಶಿಷ್ಟವಾಗಿದೆ. ಬರೀ ತ್ರಿಪದಿಗಳನ್ನು

ಹಾಡಲಾಗುವುದಿಲ್ಲ, ಆರಂಭಕ್ಕೆ 'ದನಿ' ಎಂಬುದೊಂದಿರುತ್ತದೆ. ದಕ್ಷಿಣ ಕರ್ನಾಟಕದಲ್ಲಿ ಇದಕ್ಕೆ ಸೊಲ್ಲು ಎನ್ನುವರು. ದನಿ ಎಂಬುದು ಒಂದು ಪದಪುಂಜ ನಾಲ್ಕಾರು ಪದಗಳನ್ನೊಳಗೊಂಡ ಈ ದನಿ ಒಂದು ಸ್ವತಂತ್ರ ಕಾವು ಘಟಕ. ಅದಕ್ಕೆ ನಿರ್ದಿಷ್ಟ ಧಾಟಿಯಿರುತ್ತದೆ. ಹಾಡಿನ ಆರಂಭಕ್ಕೆ, ತ್ರಿಪದಿಯ ಮಧ್ಯೆ ಮತ್ತು ಕೊನೆಯಲ್ಲಿ 'ದನಿ' ಪುನರಾವರ್ತನೆಗೊಳ್ಳುತ್ತದೆ. 'ದನಿ'ಯ ಧಾಟಿಯನ್ನನುಸರಿಸಿ ತ್ರಿಪದಿ ಹಾಡಲ್ಪಡುವದು. ಒಂದು 'ದನಿ'ಯಲ್ಲಿ ಕೆಲವು ತ್ರಿಪದಿಗಳನ್ನು ಹಾಡಿ ನಂತರ 'ದನಿ' ಬದಲಾಯಿಸುತ್ತಾರೆ. 'ದನಿ' ರಹಿತ ತ್ರಿಪದಿ ಹಾಡುಗಾರಿಕೆಯನ್ನು ಊಹಿಸಲಿಕ್ಕಾಗದು. ಆದರೆ ಗರತಿ ಹಾಡಿನಲ್ಲಿ ಇಂಥ ದನಿಗಳ ಪ್ರಸ್ತಾಪವೇ ಇಲ್ಲ. ಮೂಲ ತ್ರಿಪದಿಗಳ ಚೆಲುವಿಕೆಯಲ್ಲಿ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದ ಹಾಗೂ ತ್ರಿಪದಿಗಳ ಸಾಹಿತ್ಯಿಕ ಮೌಲ್ಯಕ್ಕೆ ಮರುಳಾಗಿದ್ದ ಹಲಸಂಗಿ ಗೆಳೆಯರಿಗೆ ಈ 'ದನಿ'ಗಳು ಗೌಣವಾಗಿ ಕಂಡಿರಲು ಸಾಕು. ಹಾಗೇ ಹಾಡು ಹೇಳಿದವರ ವಿವರ, ಸಂಗ್ರಹಿಸಿದವರ ಹೆಸರು, ಸಂಗ್ರಹಿಸಿದ ಊರು ಈ ಯಾವ ವಿವರಗಳೂ ಇಲ್ಲಿಲ್ಲ. ಇದೆಲ್ಲ ಅವರಿಗೆ ಗಮನಾರ್ಹವೆನಿಸಿರಲಿಲ್ಲ.

'ಗರತಿಯ ಹಾಡು' ಕನ್ನಡ ಶಿಷ್ಟ ಮತ್ತು ಜನಪದ ಸಾಹಿತ್ಯ ಕ್ಷೇತ್ರಗಳ ಮೇಲೆ ಬೀರಿರುವ ಪ್ರಭಾವ ಅಷ್ಟಿಷ್ಟಲ್ಲ. ಕನ್ನಡ ನವೋದಯದ ಸಂದರ್ಭದಲ್ಲಿ ಹೊಸ ವಸ್ತು ಹೊಸ ಲಯಗಳಿಗಾಗಿ ಪರದಾಡುತ್ತಿದ್ದ ನಮ್ಮ ಕವಿಗಳ ಮೇಲೆ ಇದು ಪ್ರತ್ಯಕ್ಷ ಅಪ್ರತ್ಯಕ್ಷ ಪ್ರಭಾವ ಬೀರಿತು. ಗರತಿ ಹಾಡಿನ ತ್ರಿಪದಿಗಳನ್ನು ಉದಾಹರಿಸಿ ಶಿಷ್ಟ ಸಾಹಿತ್ಯದೊಂದಿಗೆ ತುಲನೆ ಮಾಡಿ ಜನಪದ ಸಾಹಿತ್ಯದ ಸೌಂದರ್ಯವನ್ನು ಪ್ರಚುರ ಪಡಿಸುವ ಒಂದು ಪರಂಪರೆಯೇ ಬೆಳೆಯಿತು.

ಆರು ದಶಕಗಳಲ್ಲಿ ಹಲವಾರು ಜನಪದ ತ್ರಿಪದಿ ಸಂಗ್ರಹಗಳು ಬೆಳಕು ಕಂಡಿವೆ. ವಾಸ್ತವವಾಗಿ ಅವು ಗರತಿ ಹಾಡಿನಷ್ಟೇ ಮೌಲಿಕ ಅಂಶಗಳನ್ನು ಒಳಗೊಂಡಿದ್ದರೂ ಹೆಚ್ಚು ಜನಪ್ರಿಯವಾಗಲಿಲ್ಲ. ಗರತಿಯ ಹಾಡಿನ ಪ್ರಭಾವವನ್ನು ಭೇದಿಸಿಕೊಂಡು ಹೊರಬರಲು ಅವುಗಳಿಗೆ ಸಾಧ್ಯವಾಗಲಿಲ್ಲ. ಜನಪದ ಸಾಹಿತ್ಯದ ಪ್ರಸ್ತಾಪ ಬಂದಲ್ಲೆಲ್ಲ ಗರತಿಯ ಹಾಡಿನ ತ್ರಿಪದಿಗಳು ಉದಾಹರಿಸಲ್ಪಡುತ್ತವೆ. ಈ ಪ್ರಭಾವ ಎಲ್ಲಿಗೆ ಮುಟ್ಟಿದೆಯೆಂದರೆ ಕನ್ನಡ ಜನಪದ ಸಾಹಿತ್ಯವೆಂದರೆ ಗರತಿಯ ಹಾಡಿನ ತ್ರಿಪದಿಗಳು ಎಂದು ಸಮೀಕರಿಸುವ ಹಂತ ತಲುಪಲಾಗಿದೆ. ತ್ರಿಪದಿಗಳಲ್ಲದೆ ಹಾಡ್ಗತೆ, ಕತೆ, ಗಾದೆ, ಮುಂತಾದ ಇತರ ಸಾಹಿತ್ಯ ಪ್ರಕಾರಗಳಿವೆಯೆಂಬ ಅರಿವು ಜನಸಾಮಾನ್ಯರಲ್ಲಿ ಮೂಡಲಾರದಷ್ಟು ಗರತಿಯ ಹಾಡು ತನ್ನ ಪ್ರಭಾವದ ಮುದ್ರೆ ಒತ್ತಿದೆ.

ಇಂಥ ಅಪರೂಪದ ತ್ರಿಪದಿ ಸಂಕಲನವನ್ನು ನಮಗೆ ನೀಡಿ ಹೋದ ಹಲಸಂಗಿ ಸಹೋದರರು ಚಿರಸ್ಮರಣೀಯರಾಗಿದ್ದಾರೆ.

## ಹಲಸಂಗಿ ಗೆಳೆಯರ ಗುಂಪಿನ ಕೊಡುಗೆ : ಜೀವನ ಸಂಗೀತ

ಡಾ|| ವೀರಣ್ಣ ದಂಡೆ

ಹಲಸಂಗಿ ಗೆಳೆಯರ ಗುಂಪಿನ ಶ್ರೀ ಸಿಂಪಿ ಲಿಂಗಣ್ಣ ಹಾಗೂ ಪಿ. ಧೂಲಾ ಸಾಹೇಬರು 'ಜೀವನ ಸಂಗೀತ'ವನ್ನು ಸಂಪಾದಿಸಿಕೊಟ್ಟಿದ್ದಾರೆ. ೧೯೩೩ರಲ್ಲಿ ಮೊದಲನೇ ಸಲ ಪ್ರಕಟವಾಗುವಾಗ ೧೨ ಲಾವಣಿಗಳು, ಮೊದಲಿಗೆ ಒಂದು ಸಖಿ, ಕೊನೆಗೆ ಒಂದು ಖ್ಯಾಲಿ-ಇಷ್ಟು ಹಾಡುಗಳನ್ನು ಪ್ರಕಟಿಸಲಾಗಿತ್ತು. ೧೯೭೧ರಲ್ಲಿ ಮರುಮುದ್ರಣವಾಗುವಾಗ ನಾಲ್ಕು ಲಾವಣಿಗಳನ್ನು ಅನುಬಂಧದ ರೂಪದಲ್ಲಿ ಸೇರಿಸಲಾಗಿದೆ. ಈ ಸಂದರ್ಭದಲ್ಲಿ ೧೯೩೩ರಲ್ಲಿ ಪ್ರಕಟವಾದ 'ಜೀವನ ಸಂಗೀತ'ವನ್ನು ಗಮನಿಸುವುದು ಇಲ್ಲಿಯ ಉದ್ದೇಶವಾಗಿದೆ.

ಹಲಸಂಗಿ ಗೆಳೆಯರು ೧೯೩೧ರಲ್ಲಿ ಪ್ರಥಮ ಸಂಕಲನವಾಗಿ ಹೆಣ್ಣುಮಕ್ಕಳು ಹಾಡಿಕೊಳ್ಳುವ ತ್ರಿಪದಿಗಳ ಸಂಗ್ರಹ ಕೊಟ್ಟದ್ದರಿಂದ, ಎರಡನೇ ಕೊಡುಗೆಯಾಗಿ ೧೯೩೩ರಲ್ಲಿ 'ಜೀವನ ಸಂಗೀತ'ದ ಮೂಲಕ ಗಂಡಸರ ಹಾಡುಗಳ ಸಂಗ್ರಹ ಕೊಟ್ಟರೆಂದು ತೋರುತ್ತದೆ.

ಜನಪದ ಪದ್ಯ ಪ್ರಕಾರದಲ್ಲಿ ಹಲಸಂಗಿ ಗೆಳೆಯರು ಕಂಡುಕೊಂಡ ಹೆಂಗಸರ ಹಾಡುಗಳು ಮತ್ತು ಗಂಡಸರ ಹಾಡುಗಳು ಎಂಬ ವೈಜ್ಞಾನಿಕ ದೃಷ್ಟಿಯು ಇಲ್ಲಿ ಕಾಣುತ್ತದೆ. ಗರತಿಯ ಹಾಡಿನಲ್ಲಿ ಹೆಣ್ಣಿನ ಮನೋಭಾವನೆ ಹುದುಗಿದ್ದರೆ, ಜೀವನ ಸಂಗೀತದಲ್ಲಿ ಗಂಡಸರ ಮನೋಭಾವನೆಯನ್ನು ಕಾಣುತ್ತೇವೆ.

'ಜೀವನ ಸಂಗೀತ'ವು ಕಥನ ಪರವಾದ ಹಾಡುಗಳನ್ನು ಹೊತ್ತ ಕನ್ನಡ ಜನಪದ ಸಾಹಿತ್ಯದ ಪ್ರಥಮ ಕೃತಿ. ಅಲ್ಲದೆ ಹಳೆಯ ಲಾವಣಿಗಳ ಮೊದಲ ಸಂಗ್ರಹ ಎಂಬುದು ಗಮನಾರ್ಹ ಸಂಗತಿ. ಈ ಮಾತು ಈಗ ಪ್ರಚಲಿತದಲ್ಲಿರುವ ಗೀಗೀ ಹಾಡುಗಳನ್ನು ಗಮನಿಸಿ ಹೇಳಿದ್ದು. ಜೀವನ ಸಂಗೀತದ ಸಂಗ್ರಹಕಾರರು ಹೇಳುವಂತೆ, ಆಗಿನ ಕಾಲಕ್ಕೂ-ಅಂದರೆ ೧೯೩೩ರ ಸುಮಾರಿಗೆ ಲಾವಣಿಗಳ ವಸ್ತು, ರಚನೆಯಲ್ಲಿ ಬದಲಾವಣೆಗಳಾಗುತ್ತಿದ್ದವು ಎಂಬುದನ್ನು ದಾಖಲಿಸುತ್ತಾರೆ :

"ಈಚೆಗಿನ ಕಾಲದ ಜನಜೀವನದಲ್ಲಿ ಹೊರಜಂಬ ಹೆಚ್ಚಾಗಿ ಒಳ ಜೊಳ್ಳುತನ ಬೆಳೆದು ಬಂದದ್ದರಿಂದ ಜನರಲ್ಲಿದ್ದ ಸವಿಗಾರಿಕೆಯೆಲ್ಲ ಲೋಪವಾಗಿ ರಸವಂತಿಕೆಯು ಮುಳುಗಿ ಹೋಗಿದೆ. ಜೀವನದಲ್ಲಿಯೇ ರಸವಿಲ್ಲದಾಗ ಅವರ ಹಾಡಿನಲ್ಲಿ ಎಲ್ಲಿಯ ರಸವು ಬರಬೇಕು ? ಈಚೆಗಿನ ಹಾಡುಗಳೆಂದರೆ ನೀರಸವಾದ ಲೆಕ್ಚರನ್ನು ಧ್ವನಿಗೂಡಿಸಿ

ತಾಳದಲ್ಲಿ ಹೇಳಿದಂತೆ....ಒಟ್ಟಿನಲ್ಲಿ ಈಚೆಗೆ ಇಪ್ಪತ್ತು ವರ್ಷಗಳಲ್ಲಿ ಹೊರಟ ಹೊಸ ಲಾವಣಿಕಾರರ ಹಾಡುಗಳಲ್ಲಿ ಕಾವ್ಯದ ವಿಲಾಸವಿಲ್ಲ, ಬರೀ ಸಂಗೀತಮಯ ಲೆಕ್ಚರ್" (ಪರಿಚಯ VI).

ಈ ರೀತಿ ಆಗಿನ ಕಾಲದ ಲಾವಣಿ ಸಾಹಿತ್ಯ ಮತ್ತು ಜನರ ಅಭಿರುಚಿ ಇವುಗಳ ಸ್ಥಿತಿಗತಿಗಳನ್ನು ಗಮನಿಸಿ, ತಾವು ಉತ್ತಮವಾದ ಹಳೆಯ ಇಪ್ಪತ್ತು ವರ್ಷಗಳ ಹಿಂದಿನ ಲಾವಣಿಗಳನ್ನು ಸಂಗ್ರಹಿಸಿ ಕೊಡುತ್ತಿರುವುದಾಗಿ ಹೇಳಿದ್ದಾರೆ. ಅಂದರೆ ಸು. ೧೯೧೦ರ ಸುಮಾರಿಗೆ ರಚನೆಗೊಂಡ ಲಾವಣಿಗಳು 'ಜೀವನ ಸಂಗೀತ'ದಲ್ಲಿವೆ ಎಂಬುದು ಇಲ್ಲಿ ಗಮನಿಸಬೇಕಾದ ಸಂಗತಿ.

ನಮ್ಮಲ್ಲಿ ಲಾವಣಿ ಪ್ರಕಾರ ಮಹಾರಾಷ್ಟ್ರದಿಂದ ಬಂದುದು ಎಂಬುದನ್ನು ವಿದ್ವಾಂಸರು ಅಲ್ಲಗಳೆದಿಲ್ಲ. ಮಹಾರಾಷ್ಟ್ರದ ಶಾಹಿರಿ ಕಾವ್ಯದ (೧೬೫೦–೧೮೧೮) ಪ್ರಮುಖವಾದ ಎರಡು ಪ್ರಕಾರಗಳು : ವೀರ ಕಾವ್ಯಗಳಾದ ಪೋವಾಡ ಮತ್ತು ಶೃಂಗಾರ ಕಾವ್ಯಗಳಾದ ಲಾವಣಿಗಳು ಈ ಪ್ರಕಾರದ ಹಳೆಯ ಉದಾಹರಣೆಗಳು ಜೀವನ ಸಂಗೀತದಲ್ಲಿ ದೊರೆಯುತ್ತವೆ. ಪೋವಾಡಕ್ಕೆ ಭೀಷ್ಮಪರ್ವ, ವತ್ಸಲಾಹರಣ ಉದಾಹರಣೆಗಳಾದರೆ, ಲಾವಣಿಗೆ ಸಂಪಿಗೆ ತೆನಿಯಂಥ ಹುಡುಗ, ಅಸಲಜಾತ ಹೆಣ್ಣು, ಚಂದ್ರಾಣಿ, ಗಿಡ್ಡಪೋರಿ, ಕರಿ ಹುಡಗಿ-ಮುಂತಾದವು ಉದಾಹರಣೆಗಳಾಗಿವೆ.

ಮಹಾರಾಷ್ಟ್ರದಲ್ಲಿ ಶಾಹಿರಿ ಕಾವ್ಯ (೧೬೫೦-೧೮೧೮) ರಾಷ್ಟ್ರೀಯ ಮನೋಧರ್ಮದ ಹಿನ್ನೆಲೆಯಲ್ಲಿಯೇ ಬೆಳೆದು ಬಂದಂತಹದು. ಅದರಂತೆ ಕನ್ನಡದಲ್ಲೂ ಕೂಡಾ 'ಲಾವಣಿ' ಸಾಹಿತ್ಯ[1] ಭಾರತೀಯ ನವೋದಯ ಸಂದರ್ಭದಲ್ಲಿ ಹುಟ್ಟಿಬಂದುದು. ಮುಖ್ಯವಾಗಿ ನಮ್ಮ ದಾಸ್ಯ ಮತ್ತು ಬಂಧನದ ವಿರುದ್ಧ ಒಂಡೆದ್ದ ಸಂಗತಿಗಳನ್ನು ಕನ್ನಡ ಜನಪದ ಸಾಹಿತ್ಯದಲ್ಲಿ ಕೇವಲ ಲಾವಣಿ ಪ್ರಕಾರದಲ್ಲೇ ಪ್ರಮುಖವಾಗಿ ದಾಖಲಾಗುತ್ತ ಬಂದಿದೆ. ಫ್ಲೀಟರು ಸಂಗ್ರಹಿಸಿದ ಲಾವಣಿಗಳನ್ನು ಗಮನಿಸಿದಾಗ 'ಹುಲಕುಂದ ಶಿವಲಿಂಗಸ್ವಾಮಿ ರಚಿತ ಕನ್ನಡ ಗೀಗೀ ಪದಗಳು' (೧೯೮೫), 'ಲಾವಣಿ ಸಾಹಿತ್ಯದಲ್ಲಿ ಸಂಗೊಳ್ಳಿ ರಾಯಣ್ಣ' (೧೯೭೫) ಈ ಕೃತಿಗಳನ್ನು ನೋಡಿದಾಗ ಈ ವಿಷಯ ನಮಗೆ ಮನದಟ್ಟಾಗುತ್ತದೆ.

ಹಲಸಂಗಿ ಗೆಳೆಯರು 'ಜೀವನ ಸಂಗೀತ'ದ ಹಾಡುಗಳನ್ನು ಆಯ್ಕೆ ಮಾಡುವಾಗ—ಈ ಪ್ರತಿಭಟನೆಯ ಮನೋಭಾವನೆಯ ಹಾಡುಗಳನ್ನು ಹೆಚ್ಚಾಗಿ ಆಯ್ಕೆ ಮಾಡದೆ, ಶೃಂಗಾರ ಪರ ಲಾವಣಿಗಳನ್ನೆ ಅಲ್ಲಿ ಆಯ್ಕೆ ಮಾಡಿರುವುದು ಕಂಡುಬರುತ್ತದೆ. ಒಂದರ್ಥದಲ್ಲಿ ಇದು ಜೀವನ ಸಂಗೀತದ ಕೊರತೆಯಂತಲೇ

1. ಇಲ್ಲಿ ಲಾವಣಿ ಎಂಬುದು ಮಹಾರಾಷ್ಟ್ರದ ಶಾಹಿರಿ ಅರ್ಥದಲ್ಲಿ ಬಳಕೆಯಾಗುತ್ತದೆ.



ಹೇಳಬೇಕು. ಆದರೆ 'ಅಪ್ಪೂರ ಮಾತಿದು' ಎಂಬ ಒಂದು ಲಾವಣಿ ಮಾತ್ರ ನೇರವಾಗಿ ಬ್ರಿಟಿಷ್ ಆಡಳಿತದಿಂದಾಗಿ ಹದಗೆಟ್ಟ ಜನಜೀವನವನ್ನೇ ವ್ಯಾಪಕವಾಗಿ ಚಿತ್ರಿಸುತ್ತದೆ. 'ಭೀಷ್ಮಪರ್ವ', 'ವತ್ಸಲಾಹರಣ'ದಂತಹ ವೀರರಸ ಪ್ರಧಾನವಾದ ಹಾಡುಗಳು ಜೀವನ ಸಂಗೀತದಲ್ಲಿ ಸೇರಿ ಹೋಗಿರುವುದು, ಈ ಕೊರತೆಯನ್ನು ಸ್ವಲ್ಪ ಮಟ್ಟಿಗೆ ತುಂಬಿಕೊಡುತ್ತದೆ.

ಗೋಪಾಳ ದುರದುಂಡಿ ವಿರಚಿತ 'ಅಪ್ಪೂರ ಮಾತಿದು' ಲಾವಣಿ ಹೀಗೆ ಪ್ರಾರಂಭವಾಗುತ್ತದೆ :

ಅಪ್ಪೂರ ಮಾತಿದು ನಿಪ್ಪೂರ ಹೇಳತಿನಿ
ಬಿಟ್ಟಿಲ್ಲ ತುಂಬೀತು ಜಗವೆಲ್ಲ
ಹೊಟ್ಟಿಯಂಥ ವೈರಿ ಯಾವುದಿಲ್ಲ
ರೊಟ್ಟಿಯಂಥ ಮೈತರು ಇಲ್ಲ ।

....ವಿಶ್ವಾಸ ಗೆಳೆತನ ಗೆಳೆತನ ವಿಶ್ವಾಸ
ಅಳಿದು ಬಳಸತಿರಿ ನೀವೆಲ್ಲ
ಹಿರಿಯರ ಕಿರಿಯರ ಮರಿಯಾದೆ ಉಳಿದಿಲ್ಲ
ಕಾಯ್ದೆ ಬುಕ್ಕ ಓದಿದ ಮ್ಯಾಲ !

ಸೆರೆಗಾರರನ ಅಂಗಡಿ ಶಿವನ ಗದ್ದುಗೀ
ನ್ಯಾಯ ನಡಿಯದು ರಾತರಿ ಹಗಲ
ಸಿಂದಿಖಾನ್ಯಾಗ ಮಂದೆಷ್ಟು ಇರತಾರ
ಕುಡುದು ಬಿಟ್ರು ಎಮ್ಮೀಯ ಹಾಲ ।

....................

ಇಳವು : ಆನಿ ಹೋಗಿ ಉಳಿಯಿತಪ್ಪ ಬಾಲ
ನನ್ನ ಕಡಿ, ನಿನ್ನ ಮೊದಲ
ಉತ್ತಮರದು ಅಡಗಿತಪ್ಪ ಸಲ್ಲ
ಕೆಟ್ಟ ಮಂದಿದು ಎಷ್ಟು ಬೋಲ್ಬಲ
ಈಗೈತಪ್ಪ ಇಂಗ್ರೇಜಿ ಅಮಲಾ
ಗಂಡಸೊತ್ತುದು ಹೆಂಗಸರ ಕಾಲ ।

ಏರು : ಹೆಣ್ಣು ಸರಕಾರ ಇದು ಮಣ್ಣಾಗ ಹಾಕಲಿ
ಸವನ ಮಾಡಿ ಇಟ್ಟೈತೆ ಎಲ್ಲ ಕುಲ
ಹೊಟ್ಟಿಯಂಥ ವೈರಿ ಯಾವುದಿಲ್ಲ
ರೊಟ್ಟಿಯಂಥ ಮೈತರು ಇಲ್ಲ.

ಇಷ್ಟೆಲ್ಲ ಪರಿಸ್ಥಿತಿ ಹದಗೆಡಲು ಬ್ರಿಟಿಷರ ಆಡಳಿತವೇ ಕಾರಣವೆಂದು ಹೇಳಿ, "ಹೆಣ್ಣು ಸರಕಾರ ಇದು ಮಣ್ಣಾಗ ಹಾಕಲಿ" ಎಂಬ ಪ್ರತಿಭಟನೆಯ ಮಾತ ನಾಡುತ್ತಾನೆ.

'ಅಪ್ಪೂರ ಮಾತಿದು' ಲಾವಣಿಯ ನಂತರ ನಾವು ಗಮನಿಸಬಹುದಾದ ಮಹತ್ವದ ಲಾವಣಿಗಳೆಂದರೆ-'ಭೀಷ್ಮಪರ್ವ' ಮತ್ತು 'ವತ್ಸಲಾಹರಣ'. ನಾವು ಈ ಹಾಡುಗಳ ಆಯ್ಕೆಯ ಮಹತ್ವವನ್ನು ಗುರುತಿಸುವಲ್ಲಿ ಎರಡು ಕಾರಣಗಳನ್ನು ಹೇಳ ಬಹುದಾಗಿದೆ :

೧. ಇವೆರಡೂ ಭೀಷ್ಮ ಮತ್ತು ಅಭಿಮನ್ಯುವಿನಂಥ ವೀರರ ವೃತ್ತಾಂತ ಗಳನ್ನೊಳಗೊಂಡು, ಸ್ವಾಭಿಮಾನ ಮತ್ತು ವೀರತ್ವ ಎರಡನ್ನೂ ಹೇಳುವ ಹಾಡು ಗಳಾಗಿವೆ. ಈ ದೃಷ್ಟಿಯಿಂದ ನವೋದಯದ ಸಂದರ್ಭದ ಗಮನಾರ್ಹ ಗೀತೆಗಳೆನಿಸುತ್ತವೆ.

೨. ಪೌರಾಣಿಕ ಸಂಗತಿಗಳನ್ನು ಜನಪದರು-ತಮ್ಮ ಕಾವ್ಯಕ್ಕೆ ಆಯ್ಕೆ ಮಾಡಿ ಕೊಳ್ಳುವಾಗ, ತಮ್ಮ ಜೀವನಕ್ಕೆ ಹತ್ತಿರವಾದ ಮತ್ತು ತಮ್ಮ ಜೀವನವನ್ನು ಪ್ರತಿಬಿಂಬಿಸುವ ಭಾಗಗಳನ್ನು ಮಾತ್ರ ಆಯ್ದುಕೊಳ್ಳುತ್ತಾರೆ. ಜೊತೆಗೆ ಆ ಘಟನೆಗಳನ್ನು ವಾಸ್ತವದ ಹಿನ್ನೆಲೆಯಲ್ಲಿ ನಡೆಸುತ್ತಾರೆ. ಈ ದೃಷ್ಟಿಯಿಂದ "ಕೃಷ್ಣಲೀಲೆ", ಮತ್ತು "ಗೋಕುಲಾಷ್ಟಮಿ ದಿನ" ಈ ಹಾಡುಗಳನ್ನು ಗಮನಿಸ ಬಹುದಾಗಿದೆ.

'ಭೀಷ್ಮಪರ್ವ'ದಲ್ಲಿ ರಣರಂಗದಲ್ಲಿ ವೀರರ ಪರಿಚಯವನ್ನು ಕವಿ ಹೀಗೆ ಮಾಡಿಕೊಡುತ್ತಾನೆ.

ಇಳುವು :

ತ್ವಾಳಾಗಿ ಹೊಕ್ಕ ಅರ್ಜುನ ಮಾಡಿ ಕುರಿಹಿಂಡ । ಕೌರವರ ದಂಡ
ಗರ್ಜನೆ ಮಾಡಿ ಬಾಣ ಬಿಟ್ಟು ಹಾರಿಸಿದ ರುಂಡ । ಆಡಿದಂಗ ಚಂಡ
ಆ ಭೀಮ ಹೊಡೆದ ಹಾಕಾರಿ ಗದಾ ಎತಗೊಂಡ । ಹೊಕ್ಕನವ ಪುಂಡ
ಆನಿಸೊಂಡಿ ಹಿಡಿದು ಗರರರ । ತಿರುವಿಕೇರಿ ಒಗದ । ಒಗೆದ ತಾ ಒಗೆದ ।
ಕಾಲ ಮಂದಿನ ಹಿಡಿದು ದರರರ । ಎಳದು ಭೀಟಿ ಜಗಿದ ।
ಜಗಿದ ತಾ ಜಗಿದ ।
ಸಿಟ್ಟಿಗೇರಿ ಭೀಷ್ಮ ಕರರರ । ಹಲ್ಲ ತಿಂದು ತೆಗೆದ । ತೆಗೆದ ಬಾಣ ತೆಗೆದಾ ॥

ಇಂತಹ ಸನ್ನಿವೇಶಗಳ ಚಿತ್ರಣ – ನಮ್ಮ ದಾಸ್ಯ ಮತ್ತು ಬಂಧನದ ದಿನಗಳಲ್ಲಿ ನಮ್ಮಲ್ಲಿ ವೀರತ್ವವನ್ನು ತುಂಬುವ ಕೆಲಸವನ್ನು ಮಾಡುವಂತಹವು.

ಪೌರಾಣಿಕ ಸಂಗತಿಗಳಲ್ಲಿ ವಾಸ್ತವಿಕ ಜೀವನವನ್ನು ಕಂಡುಕೊಳ್ಳುವ



ರೀತಿಯನ್ನು ವತ್ಸಲಾಹರಣದಲ್ಲಿ ನೋಡುತ್ತೇವೆ ; ಪಾಂಡವರೆಲ್ಲ ವನವಾಸಕ್ಕೆ ಹೋಗಿಯಾಗಿದೆ. ಅರ್ಜುನನ ಹೆಂಡತಿ ಸುಭದ್ರಾಳು ಅಣ್ಣ ಬಲರಾಮನ ಮನೆಗೆ ಹೋದಾಗ, ಅತ್ತಿಗೆ ಬಸುರಿಯಾಗಿರುವುದನ್ನು ಗಮನಿಸಿ, ಹೆಣ್ಣು ಹುಟ್ಟಿದರೆ ತನ್ನ ಮಗ ಅಭಿಮನ್ಯುವಿಗೆ ಕೊಡಬೇಕೆಂದು ನಿಶ್ಚಯಿಸುತ್ತಾಳೆ. ಅಣ್ಣ ಬಲರಾಮನು ತಂಗಿಯ ಮುಲಾಜಿಗೆ ಒಪ್ಪಿಗೆಯಿತ್ತರೂ, ಪಾಂಡವರಂತಹ ಬಡವರ ಮನೆಗೆ ಮಗಳನ್ನು ಕೊಡಲು ಬಯಸದೆ, ಶ್ರೀಮಂತರಾದ ಕೌರವರ ಮನೆಯಲ್ಲಿ ಮಗಳು ಸುಖವಾಗಿರಬಹುದೆಂದು ಬಯಸಿ, ಕೊಟ್ಟ ಮಾತಿಗೆ ತಪ್ಪಿ ನಡೆಯುತ್ತಾನೆ. ಸುದ್ದಿ ತಿಳಿದ ಸುಭದ್ರ :

ತವರ ಮನಿಯ ಆಶೆಯಿಂದ ನನ್ನ ಪತಿ ಅರ್ಜುನನ ನಾ ಮರೆತೇನೋ ।
ನಮ್ಮಣ್ಣಗಳದಿಂದ ಧೈರ್ಯ ಹಿಡಿದೆನೋ ।
ನನ್ನ ನೋಡ್ತಾರ ಅಂತ ಭಾಳ ನಂಬಿದೆನೋ ॥

ಎಂಬಿತ್ಯಾದಿಯಾಗಿ ಗೋಳಾಡುತ್ತಾಳೆ. ಅಭಿಮನ್ಯು ತನಗೆ ಕೊಟ್ಟ ಹೆಣ್ಣನ್ನು ತಾನು ಗೆದ್ದು ತರುತ್ತೇನೆಂದು ಆರ್ಭಟಮಾಡುವುದು, ಘಟೋತ್ಕಜನೊಂದಿಗೆ ವತ್ಸಲಾಳನ್ನು ಗೆದ್ದು ತರುವುದು - ಇತ್ಯಾದಿ ಸನ್ನಿವೇಶಗಳು ನಮ್ಮ ನೆರೆಮನೆಯವೇನೋ ಎನಿಸುವಷ್ಟು ಸಹಜವಾಗಿವೆ.

'ಜೀವನ ಸಂಗೀತ' ಒಂದು ಅಪ್ಪಟ ನವೋದಯದ ಕೊಡುಗೆ ಎನ್ನುವುದರಲ್ಲಿ ಎರಡು ಮಾತಿಲ್ಲ. ದೈವಭಕ್ತಿಪರವಾದ ಜನಪದ ಸಾಹಿತ್ಯ ವಿಪುಲವಾಗಿ ನಮಗೆ ದೊರೆಯುತ್ತದೆ ದೇವರ ಅಗಾಧ ಲೀಲೆಯನ್ನು ಒಪ್ಪಿದ ನವೋದಯದ ಭಾವನೆಯ ಹಿನ್ನೆಲೆಯಲ್ಲಿ ಇಲ್ಲಿಯ ಸಖಿ 'ಪ್ರಾರ್ಥನೆ', ಹಾಗೂ ಖ್ಯಾಲಿ - 'ನಿನ್ನ ಹೊರತು ದೇವರೇ ಇಲ್ಲ'- ಎಂಬವುಗಳನ್ನು ಗಮನಿಸಬಹುದಾಗಿದೆ ;

ಭುವನದೊಳಗೆ ಬಂದೆನು ಜನಿಸಿ
ಹರಿಯ ಪಾದ - ಸೇವಕ ಅನಿಸಿ
ನಿಮ್ಮ ಪಾದ ಮೌಲ್ಯ ನನ್ನ ಆಶಿ
ನಿಜಾ ತೋರಿಸೋ ಗುರು ಪರಿಹರಿಸಿ ।

ಎಂಬಂತಹ ಅರ್ಪಣಭಾವ 'ಪ್ರಾರ್ಥನೆ'ಯಲ್ಲಿ ಕಾಣುತ್ತೇವೆ. 'ನಿನ್ನ ಹೊರತು ದೇವರೇ ಇಲ್ಲ' ಎಂಬ ಖ್ಯಾಲಿಯಲ್ಲಿ - ಖಾಜಾಭಾಯಿಯವರು ದೇವರು ಒಬ್ಬನೇ ಎಂಬುದನ್ನು ಹೇಳುತ್ತಾರೆ. ಇಲ್ಲಿಯ ಉದಾಹರಣೆಯನ್ನು ಗಮನಿಸುವ ಮುನ್ನ ಈತ ಮುಸ್ಲಿಂ ಕವಿ ಎಂಬುದನ್ನು ಗಮನಿಸಬೇಕು. ಖಾಜಾಭಾಯಿ ಹೀಗೆ ಬರೆಯುತ್ತಾರೆ.

ಸೋಹಂ ಶಿವನೇ ನಿನ್ನ ಹೊರತು ದೇವರೇ ಇಲ್ಲ ॥

........................................................

ಕಲ್ಲ ಇರುವುದು ಮಡ್ಡ್ಯಾಗ
ಕಲ್ಲ ದೇವರ ಹುಟ್ಟು ಒಡ್ಡರ ತಿಮ್ಮಯ್ಯನ ಕೈಯ್ಯಾಗ ।
ತಾಮ್ರ ಹಿತ್ತಾಳಿ ದೇವರ ಹುಟ್ಟುವುದು ಪತ್ತಾರನ ಮನಿಯಾಗ ।
ಕಟಗಿ ದೇವರ ಹುಟ್ಟುವುದು ಬಡಿಗ್ಯಾನ ಕೈಯ್ಯಾಗ ।
ಮಣ್ಣದೇವರ ಹುಟ್ಟುವುದು ಕುಂಬಾರ ಗುಂಡಯ್ಯನ ಮನಿಯಾಗ ।

ಇಂಥ ದೇವರ ಆಗುವುದಿಲ್ಲ
ಈ ಮಂದಿಗಿ ತಿಳಿಯುವುದಿಲ್ಲ
ಸುಳ್ಳೆ ಆಗತಾರ ಖರ್ಚಿಗೆ ಮೂಲ
ದೇವರಂಬವ ಒಬ್ಬ ಹಾನ ಮ್ಯಾಲ
ಅವನ ಹೊರತು ದೇವರೇ ಇಲ್ಲ ॥
ಸೋಹಂ ಶಿವನೇ ನಿನ್ನ ಹೊರತು ದೇವರೇ ಇಲ್ಲ ॥
ಕಲಬುರ್ಗಿ ಕಲ್ಯಾಣ ಹಂಪಿ ಹದರಿಯ ಪೀರಾ
ಹುಲಜಂತಿ ಉಮರ್ಜಿ ಸೊಲ್ಲಾಪುರ ಸಿದ್ರಾಮೇಶ್ವರ
ಇವರು ದೇವರೇ ಅಲ್ಲ
ಇವರು ಹಾರೊ ಮಾನೊ ಮನುಸ್ಯಾರ
ದುಡುಕೊಂಡು ದುಡುಕೊಂಡು ಇವರು ಆಗ್ಯಾರ
ದೊಡ್ಡ ದೊಡ್ಡ ಶರಣರ ।

........................................................

ಸೋಹಂ ಶಿವನೇ ನಿನ್ನ ಹೊರತು ದೇವರೇ ಇಲ್ಲ ॥

ಹಲಸಂಗಿ ಗೆಳೆಯರ ಮೂರೂ ಸಂಗ್ರಹಗಳನ್ನು ಗಮನಿಸಿದರೆ, ಅಲ್ಲಲ್ಲ ಅವರ ದೃಷ್ಟಿ - ಅತ್ಯುತ್ತಮ ಕಾವ್ಯ ಮಾದರಿಗಳನ್ನು ಆರಿಸುವ ಕಡೆಗೆ ಇರುವುದು ಸ್ಪಷ್ಟ ವಾಗುತ್ತದೆ. ಜೀವನ ಸಂಗೀತದ ಶೃಂಗಾರ ಮತ್ತು ರಂಜನಾಯುಕ್ತ ಲಾವಣಿಗಳು ಈ ಮಾತಿಗೆ ತಕ್ಕ ಉದಾಹರಣೆಗಳಾಗಿವೆ. ಇದಕ್ಕೆ ಕಾರಣ ಅವರಿಗೆ ಸತ್ವಯುತವಾದ ಕಾವ್ಯ ಕನ್ನಡ ಸಾಹಿತ್ಯದಲ್ಲೂ ಬೆಳೆಯಲಿ ಎಂಬ ಉದ್ದೇಶವಿರುವುದು. ಸಂಗ್ರಹಕಾರರು ಹೀಗೆ ಬರೆದುಕೊಳ್ಳುತ್ತಾರೆ.

"ಬರಿ ಹೊಸಗನ್ನಡದವರಿಗೆ ಕಾವ್ಯವೆಂದರೆ ಧ್ವನಿ ತೆಗೆದು ಹೇಳುವುದೊಂದೇನೋ ಎಂಬುದಕ್ಕಿಂತ ಹೆಚ್ಚಿಗೇನೂ ಗೊತ್ತಾಗುವಂತಿರಲಿಲ್ಲ. ಅದರಲ್ಲಿ ನಾಲ್ಕೈದು ವರ್ಷಗಳಲ್ಲಿ ಮಾತ್ರ ಇಂಥವರಿಗೆ ತುಸು ತುಸು ಅನ್ನವು ಸಿಗಹತ್ತಿದೆ. ಈಗ ನಾವು ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಇದೇ ಕಾರ್ಯಕ್ಕೆ ಕೈಲಾದಷ್ಟು ಕೈ ಹಚ್ಚುತ್ತಿದ್ದೇವ". (ಪರಿಚಯ VII).



ಈ ಮಾತುಗಳಲ್ಲಿ ಕನ್ನಡ ಕಾವ್ಯದ ಕೃಷಿಯ ಕೊರತೆ ಮನಗಂಡು, ಜನರಿಗಾಗಿ ಉತ್ತಮ ಕಾವ್ಯದ ಶೋಧ ನಡೆಸಿದಾಗ, ಅವರಿಗೆದುರಾದುದು ಜನಪದ ಕಾವ್ಯ ಕ್ಷೇತ್ರ. ಈ ಕಾವ್ಯದ ಅಭ್ಯಾಸ ಕನ್ನಡದಲ್ಲಿ ಉತ್ತಮ ಕಾವ್ಯ ಬರಲು ಕಾರಣ ವಾಗುತ್ತದೆ ಎಂಬ ಭಾವನೆ ನಮಗಿಲ್ಲಿ ಕಾಣುತ್ತದೆ.

ಜೀವನ ಸಂಗೀತದ ಉತ್ತಮ ಕಾವ್ಯ ಮಾದರಿಗಳೆಂದರೆ, ಶೃಂಗಾರ ಲಾವಣಿಗಳು. ಇವುಗಳ ಜೊತೆಗೆ "ಬಸುರಿದ್ದೇನ್ನೆ ಸರೇನಿಡೋಣ", ಹಾಗೂ 'ನಾಗರಪಂಚಮಿ'ಯಂತಹ ಹಾಡುಗಳು ಪಾರತಂತ್ರ್ಯದಿಂದಾಗಿ ಅದುಮಿ ಹೋದ ಜನರ ಜೀವನದ ಬೇಸರವನ್ನು ದೂರೀಕರಿಸಿ,-ನವೋಲ್ಲಾಸವನ್ನು ತುಂಬುವ ಕೆಲಸ ಮಾಡಬಲ್ಲವಾಗಿವೆ. ದಾಸ್ಯದಲ್ಲಿದ್ದಾಗಲೂ ನಗು ನಗುತ್ತ ಖುಷಿಪಡುವ ಗುಣವನ್ನು ಈ ಹಾಡುಗಳು ವ್ಯಕ್ತಪಡಿಸುತ್ತವೆ.

ಕನ್ನಡದಲ್ಲಿ ಸ್ತ್ರೀಪರವಾದ ಸಾಹಿತ್ಯ ಗಂಡಸರು ಸೃಷ್ಟಿ ಮಾಡಿದ್ದು, ಜನಪದ ಕಾವ್ಯದಲ್ಲಿ ಮಾತ್ರ ; ಅದೂ ಲಾವಣಿ ಸಾಹಿತ್ಯದಲ್ಲಿ. ಹರದೇಶಿ-ನಾಗೇಶಿ, ಕಲ್ಗಿ-ತುರಾ ಎಂದು ಕರೆಸಿಕೊಳ್ಳುವ ಹೆಣ್ಣು-ಗಂಡಿನ ವಾದ-ವಿವಾದ, ಅದು ಸಾಮಾನ್ಯ ಗಂಡು-ಹೆಣ್ಣಿನ ಎಳೆ ಹಿಡಿದು ಸ್ವರ್ಗದ ಮೆಟ್ಟಲು ಹತ್ತುವ ಅದ್ಭುತ ವಿಧಾನವನ್ನು ನಾವು ಲಾವಣಿಗಳಲ್ಲಿ ಕಾಣುತ್ತೇವೆ. ಆದರೆ ಜೀವನ ಸಂಗೀತದ ಇನ್ನೊಂದು ಕೊರತೆಯೆಂದರೆ, ಇಲ್ಲಿ ಕೇವಲ ಗಂಡು ಹೆಚ್ಚೆಂದು ವಾದ ಮಾಡುವ ಹಾಡುಗಳನ್ನೇ ಆಯ್ಕೆ ಮಾಡಿದ್ದು. ಹೆಣ್ಣಿನ ಪರವಾದ ಹಾಡುಗಳನ್ನು ಕೈ ಬಿಟ್ಟಿದ್ದು.

ಇಲ್ಲಿಯ ಶೃಂಗಾರ ಲಾವಣಿಗಳಲ್ಲಿ ಕಾಣುವದು ವಾಮ ಪ್ರಣಯವನ್ನು. ಅಂದರೆ ಮದುವೆಯಾದ ಹೆಣ್ಣಿನ ವರ್ಣನೆ ಮತ್ತು ಆಕೆ, ಪರ ಪುರುಷನ ಜೊತೆ ಸ್ನೇಹ ಬೆಳೆಸುವ ರೀತಿಯನ್ನು. ಇದು ಸಾಹಿತ್ಯದಿಂದ ಕಲಿಯುವ ಪಾಠಕ್ಕೆ ಮಾದರಿಯಾಗಿರದೆ, ಕೇವಲ ರಂಜನೆಗಾಗಿ ಮಾತ್ರ ಈ ಸಂಭೋಗ ಶೃಂಗಾರ ಲಾವಣಿಗಳನ್ನು ಗ್ರಹಿಸುವುದನ್ನು ನಾವು ಗಮನಿಸಿದ್ದೇವೆ. ಈ ವಸ್ತು ತಾತ್ವಿಕ ಲೋಕ ಪ್ರವೇಶವಾದಾಗ, ಈ ಗಂಡು-ಹೆಣ್ಣಿನ ಸಂಬಂಧ ಒಂದು ಲೀಲೆಯೆಂಬಂತೆ ಜನ ಗ್ರಹಿಸುತ್ತಾರೆ, ಕೃಷ್ಣ-ಗೋಪಿಕೆಯರಂತೆ, ಶಿವ-ಗಂಗಿಯರ ಪ್ರಸಂಗದಂತೆ. ಅಲ್ಲಿ ಲೌಕಿಕದ ವಾಸನೆ ಸುಳಿಯಲಾರದು, ಸುಳಿಯಬಾರದೆಂಬುದು ಜನಪದರ ಭಾವನೆ.

ಶೃಂಗಾರ ಲಾವಣಿಗಳಿಗೆ 'ಜೀವನ ಸಂಗೀತ' ಹೆಸರಾಗಿದೆ. ಇಲ್ಲಿಯ ;

ಅಸಲಜಾತ ಹೆಣ್ಣು, ಸಂಪಿಗೆ ತೆನಿಯಂಥ ಹುಡುಗ, ಚಂದ್ರಾಣಿ, ಕರಿಹುಡುಗಿ, ಗಿಡ್ಡಪೋರಿ - ಸಂಭೋಗ ಶೃಂಗಾರಕ್ಕೆ ಪ್ರಸಿದ್ಧವಾದ ಲಾವಣಿಗಳು. 'ಗೋಕುಲಾಷ್ಟಮಿ ದಿನ', 'ಕೃಷ್ಣಲೀಲೆ' ಭಕ್ತಿಶೃಂಗಾರಕ್ಕೆ ಉತ್ತಮ ಮಾದರಿಗಳು. 'ಬಸರಿದ್ದೇನ್ಹೆಸರೇನಿಡೋಣ' ಹಾಸ್ಯ ಬೆರೆತ ಶೃಂಗಾರಕ್ಕೆ ಒಂದು ಮಾದರಿ. ಹೀಗೆ ೧೨ ಲಾವಣಿಗಳಲ್ಲಿ ೮ ಲಾವಣಿಗಳು ಶೃಂಗಾರದ ರಸ ಪ್ರಧಾನವಾದವುಗಳೇ. ಇವೆಲ್ಲ ಅತ್ಯುತ್ತಮ ಕಾವ್ಯದ ಮಾದರಿಗಳಾಗಿರುವುದು ಗಮನಾರ್ಹ.

'ಅಸಲಜಾತ ಹೆಣ್ಣು' ಹಾಗೂ 'ಚಂದ್ರಾಣಿ' - ಇವೆರಡೂ ತುಂಬಿ ಬಂದ ಸೌಂದರ್ಯವತಿಯರ ವರ್ಣನೆಗಳಾದರೆ, 'ಕರಿ ಹುಡುಗಿ' ಹಾಗೂ 'ಗಿಡ್ಡಪೋರಿ' ಎಂಬಿವು – ಬಣ್ಣ ಹಾಗೂ ನಿಲುವುಗಳನ್ನು ಗಮನಿಸಿದ ವರ್ಣನೆಗಳಾಗಿವೆ. ಈ ನಾಲ್ಕು ಲಾವಣಿಗಳ ಪ್ರಾರಂಭ ಮುಖ್ಯವಾಗಿ ಹೆಣ್ಣಿನ ವರ್ಣನೆಯಿಂದಲೇ ಕೂಡಿದೆ. ಮೊದಲಿನ ಚೌಕಗಳಲ್ಲಿ ಬರುವ ವರ್ಣನೆ - ಅದ್ಭುತ ಮತ್ತು ಅಸಾಧಾರಣವೆನಿಸು ವಷ್ಟಿದ್ದು, ಅತ್ಯುತ್ತಮ ಕಾವ್ಯಭಾಗಗಳೆನಿಸುತ್ತವೆ.

**ಅಸಲಜಾತ ಹೆಣ್ಣು :**

ಹೆಣ್ಣಸಲಜಾತ ಪದ್ಮಿನಿ । ಸುರತ ಚಂದ್ರಾಣಿ
ಹೊಂಟೆ ನಾಗಿಣಿ । ನೋಡ ತಿರುಗಿ
ಮರಿಗುದರಿ ಕುಣಿಸಿದಂಗ ನಾಜೂಕ ನಿನ್ನನಡಗಿ
ಹೊಳಿ ನೀರ ಥೆರಿಯು ಹೊಡಿದಂಗ ಒದುತೆ ನಿಲಗೀ
ತ್ರಿಲೋಕ ತಿರುಗಿ ಬಂದೆ ಹಾಡಿ । ಇಲ್ಲ ನಿನ್ನ ಜೋಡಿ
ರಂಬಿ ನಿನ್ನ ನೋಡಿ । ನಾಚ್ಯಾಳ ಕಡಿಗೀ ॥

ಗರಗರಾ ತಿರುವುತೇ ಕಣ್ಣ । ಕೆಂಪ ಮೈಬಣ್ಣ
ಬೇತಲ ಸಣ್ಣ । ಕತ್ತಿಧಾರಿ ।
ನಿನ್ನ ಕಂಡು ಪಕ್ಷಿಗಳು ನಿಂತು ಹೌವ್ವಹಾರಿ
ನಿನ್ನ ನಡಿಗಿ ನೋಡಿ ನವಿಲ ಕುಣಿವುದ ಮರೆತಿತರಿ
ನಿನ್ನ ಶಬ್ದ ಕೇಳಿ ಆಗಿ ಲುಬ್ದ । ಕೋಗಿಲೆ ನಾಚಿಕದ್ದ
ವನಾ ಬಿಟ್ಟು ಎದ್ದ । ಹೊಯ್ತು ಹಾರಿ ॥

**ಚಂದ್ರಾಣಿ :**

ಚಂದ್ರಾಣಿ ಚಂದನದ ಗೊಂಬಿ । ರತ್ನದ ಕಂಬಿ
ಆದಿ ಜಗದಂಬಿಯಂಗ ಡೌಲ ।
ನಿನ್ನ ಸರಿ ಈಗ ದೇವತೆರು ಯಾರೂ ಇಲ್ಲ
ಏನು ಬೇಡಿ ಬಂದೆ ಶಿವನಲ್ಲಿ ಎಷ್ಟು ಅಮಲ ।



ಮದವೇರಿಸಿ ಹೊಂಟಂಗ ಆನಿ ಜಾತ ಪದ್ಮಿನಿ
ಪಟ್ಟದಾ ರಾಣಿ ಗಾದಿ ಮ್ಯಾಲ ।

ನಿನ್ನ ಪ್ರಾಯ ತುಂಬಿದಾ ಹೊಳಿ । ಬಾಳಿಯ ಸುಳಿ
ಚಂದ್ರನ ಕಳಿ ಕಸರಯಿಲ್ಲ ।
ಆದಿ ವಿಷ್ಣು ಪಿಂಡ ಮಾಡಿದಾನ ತೆಗೆದ ಹೊಯ್ಲಾ
ಬಿನ್ನ ಬ್ಯಾಸರಿಲ್ಲದೆ ತಿದ್ದಿ ಕೈಕಾಲ ।

ಮಹೇಶ್ವರ ಜೀವದ ದನಿ । ಬ್ರಹ್ಮ ಬರೆದ ಘಣಿ
ಬೇಡಿ ಬಂದೆ ಜಾಣಿ ಸುಳ್ಳೇನಲ್ಲ ॥

ನಿನ್ನ ಮೂಗ ಸಂಪಿಗೀ ತೆನಿ । ಮುತ್ತಿನ ಗೊನಿ
ಕೋಗಿಲಂಗ ಧನಿ ಎಳಿಯ ಕಮಲ
ಓಣಿ ಹಿಡಿದ ಹೊಂಟೆ ಕುಣಿದಂಗ ಗಂಡ ನವಿಲ
ಮಂದಿದಂಗವರದ ನಿಂತ ನೋಡಿ ನಿನ್ನ ಮಜಲ ॥

ನಿನ್ನ ಒನಪ ನೋಡಿ ನಾ ಬೆರೆತ । ಮುನಿಯ ಮಾರ ಮರತ
ಹಾರಿತ ನನ್ನ ಸುರತ ಬಿದ್ದಂಗ ಸಿಡಲ ॥

ಈ ಮೇಲಿನ ಎರಡೂ ವರ್ಣನೆಗಳಿಗಿಂತ ಭಿನ್ನವಾದ ವರ್ಣನೆ 'ಗಿಡ್ಡಪೋರಿ' ಮತ್ತು 'ಕರಿಹುಡುಗಿ'ಯಲ್ಲಿ ಕಾಣುತ್ತೇವೆ. ಇವೆರಡೂ ಒಂದಕ್ಕೊಂದು – ತೋಡಿ ಎಂಬಂತೆ ಭಾಸವಾಗುತ್ತವೆ.

**ಗಿಡ್ಡಪೋರಿ :**

ಗಿಡ್ಡಪೋರಿ ಮಡ್ಡಹರಿ ಮಕ್ಕರ್ । ಕಣ್ಣ ತಿರುವಿ ಚಕ್ಕರ್
ನಿಂತು ನೀ ನಕ್ಕರ ಉಳ್ಳತಾವ ಮುತ್ತ ।
ವಸ್ತಕಾರಿ ಪಟ್ಟಿ ವಾಲಿಗಂಟ ಮೂಗನಾಗ ಸರಜಾಮನತ್ತ ।
ಶ್ರೀ ಸಾನಿದಪ ಪದನೀಸ ಸರಿಗಮ ನಾರಿ ನಿನಗತ್ತ ।

ನಮಕಂಡು ಹೋಗಬ್ಯಾಡ ಚದರಿ ।
ಓಡಿದಾಂಗ ಬೆದರಿ ಕಾರ್ಸ್ಥಾಣವಿ ಎತ್ತ ॥
ಏನು ಮುಂಗಾರಿ ಮಳಿಹಾಂಗ ಸಿಡಲ್ । ಬಿದ್ದಿತು ಖಿಡಲ್
ಎದಿ ಅಂತು ಧಡಲ್ ಆಗಿನಿಂತೆ ಮೂಕ ।
ನಿನ್ನ ಸುರತ ಕಂಡು ಮೈ ಮರೆತ । ಮಾತಾಡಧಾರಿತ ತರ್ಕ
ಮತ್ತ ಯಾದ ಹಬ್ಬೆ ಶೋಧ ಮಾಡಿ ಕೇಳತ । ನಿನಗೊಂದ ಸೋಕ ।
ಕುಡು ಭರಸ ಮಾಡೂನು ಸರಸ ಬೆಳ್ಳಬೆಳತನಕಾ ॥

ಕರೀಹುಡುಗಿ :

ನೀ ಬಾರ ಕರ್‍ರನ ಕರೀ ಹುಡುಗಿ । ಕರೀ ಉಡುಗಿ
ನವಿಲನಾಂಗ ನಡಿಗಿ ನಡುತೆ ಸವನಾ ।
ಕರಿ ಕೂದಲ ಬೇತಲಿ ತೀಡಿ ತೆಗೆದ ಸಣ್ಣ
ಕರಿ ಹುಬ್ಬ ಕೊರೆದಂಗ ಕರಿ ಕಾಡಿಗಿ ಗಣ್ಣ ।
ಏನು ಹೇಳಲಿ ನಾರಿ ನಿನ್ನ ಕಪ್ಪ ।
ಆಯಿತ ನೆಪ್ಪ ನೀಲದ್ದಣ್ಣ ॥೧॥
ಕರಿ ಹಣಬೆ ಒಟ್ಟಿನ ಖಲಿ । ಗಲ್ಲದ ಮ್ಯಾಲ ಬಾಲಿ
ಹಲ್ಲಿಗಿ ಜಾಜೀಲಿ ಹಚ್ಚಿದಿ ತುಂಬ
ಕರಿ ಕರಿಮಣಿ ಕೊರಳಾಗ ಒಪ್ಪತಾವ ರಂಭಾ
ಮೈ ನರೆದೆ ಉಚ್ಚಿದಂಗ ಕರಿ ಮಾವಿನ ತುಂಬ ।
ಕರಿಕೋಟ ಕೈಯಾಗ ಬಳಿ । ಚಿಕ್ಕ ಪ್ರಾಯ ಎಳಿ
ನಿನ್ನ ಈ ಬೆಳಿ ಕರಿಬಾಳಿಯ ಬಂಬಾ ॥೨॥

ಕನ್ನಡ ಸಾಹಿತ್ಯದಲ್ಲೂ ಜನಪದ ಸಾಹಿತ್ಯದಲ್ಲೂ ಗಂಡಸರ ವರ್ಣನೆಗಳು ಅಪರೂಪ. ಅಂತಹ ಅಪರೂಪದ ಉದಾಹರಣೆಯೊಂದು 'ಜೀವನ ಸಂಗೀತ'ದಲ್ಲಿ ದೊರೆಯುತ್ತದೆ. ಲಾವಣಿಯ ಹೆಸರೇ : 'ಸಂಪಿಗಿ ತೆನಿಯಂಥ ಹುಡುಗ'.

ಸಂಪಿಗಿ ತೆನಿಯಂಥ ಹುಡುಗ । ಸಂತ್ಯಾಗ್ಹಾಯ್ದು ಹೋಗ್ತಾನ
ಹಂತೀಲ್ಹೋಗಿ ಕೇಳಲೇನ ಹೆಸರ್ ।
ನನ್ನ ಕಾಂತನ ರೂಪ ಹೊಂಟಂಗ ಹುಣ್ವಿ ಚಂದರ್
ಇವನ ಚಿಂತೆಯೊಳಗ ಜೀವಕ್ಕಿಲ್ಲ ಸ್ಥಿರಾರ್ !
ಕನಸಿನಾಂಗ ಕಂಡಂಗಾಯ್ತು । ಮನಸಿನಂದು ಹೋಗವಲ್ದು
ಹಲಸಂಗಿ ಊರಾಗಿಲ್ಲ ಇವನಂಥ ವರ.

'ಗೋಕುಲಾಷ್ಟಮಿ' ಮತ್ತು 'ಕೃಷ್ಣಲೀಲೆ' ಈ ಎರಡರಲ್ಲಿ ಶೃಂಗಾರ – ಲೇಪಿತ ಭಕ್ತಿ ವ್ಯಕ್ತಪಡಿಸುವುದನ್ನು ಕಾಣುತ್ತೇವೆ :

ಶ್ರೀ ಗೋಪಿಕಾ ಸ್ತ್ರೀಯರು । ಅಷ್ಟ ನಾಯಕಿಣೆರು
ಬಾಲ ಗರುಡರು ಹುಡುಕುತಾರ ಕೃಷ್ಣನ ।
ಸಾವಿತ್ರಿ ಸತ್ಯಭಾಮೆ ಕೂಡಿ ಹುಡುಕುತಾರ
ಗೋಕುಲಾಷ್ಟಮಿ ದಿನ ।

ಎಂದು ಪ್ರಾರಂಭವಾಗುವ 'ಗೋಕುಲಾಷ್ಟಮಿ' ಹಾಡು, ಗೋಪಿಕೆಯರು



ಕೃಷ್ಣನಿಗಾಗಿ ಪರಿತಪಿಸುವ, ಜಪಿಸುವ ರೀತಿ – ಅವರಲ್ಲಿರುವ ಕೃಷ್ಣನ ಬಗೆಗಿನ ಭಕ್ತಿ ಭಾವುಕತೆಗಳನ್ನು ವ್ಯಕ್ತಪಡಿಸುತ್ತವೆ.

'ಕೃಷ್ಣಲೀಲೆ'ಯಲ್ಲಿ—

"ಹೊತ್ತು ಹಾಲ್ಮೊಸರ ಸೋರಿ
ಹಿಡಿದೆವೊ ಮಥುರಾ ದಾರಿ
ಹಾದಿ ಕಟ್ಟೆದಾರಿ ।
ಕಾಡಿದಾ ಮುರಹರಿ ಕೃಷ್ಣ ಬಿದ್ದ ಖ್ಯಾಲಕ ॥

ಮುಂತಾಗಿ ಪ್ರಾರಂಭವಾಗುವ ಈ ಹಾಡು ಕೃಷ್ಣನ ಶೃಂಗಾರ ಲೀಲೆಗಳನ್ನು ಹೇಳುತ್ತದೆ.

'ಬಸರಿದ್ದೇನ್ಹೆಸರೇನಿಡೋಣ' ಮತ್ತು 'ನಾಗರಪಂಚಮಿ' ಎಂಬೆರಡು ಹಾಡುಗಳು ಹಾಸ್ಯಭರಿತ ರಂಜನೀಯ ಹಾಡುಗಳೆನಿಸುತ್ತವೆ. 'ಬಸುರಿದ್ದೇನ್ಹೆಸರೇ ನಿಡೋಣ'ದಲ್ಲಿ – ಸತಿಪತಿಯರ ನಾಟಕೀಯ ಮಾತುಗಳು ಓದುಗರಿಗೆ ಕಚಗುಳಿ ಇಡುತ್ತವೆ. ರಾತ್ರಿ ಉಂಡು ಹಾಸಿಗೆ ಮೇಲೆ ಇಬ್ಬರೂ ಹರಿದಾಡುತ್ತ ಸಂಭಾಷಿಸುತ್ತಾರೆ.

ಸತಿ ಪತಿ ಕೂಡಿ ಜೋಡಿ । ಹಿತದಿಂದ ಮಲಗಿದಾಗ
ಗೊತ್ತ ಮಾಡಿ ಹೇಳ್ಗಂಡಾ ಹ್ಯಾಂಗ್ಮಾಡೂನ
ನಿನ್ಮುಂದ ಮಾತೊಂದು । ಬಿಚ್ಚಿ ಮುಚ್ಚಿ ಹೇಳ್ತೀನು
ಬಸುರಿದ್ದೇನ್ಹೆಸರಿನ್ನ ಏನಿಡೂನ ।

ಎಂದು ಪ್ರಾರಂಭವಾಗುವ ಈ ಹಾಡು ಉದ್ದಕ್ಕೂ ಕುತೂಹಲಭರಿತವಾಗಿದೆ.

ಹಡಿಯೂ ದಿನ ಸನೀ ಬಂತು । ಎಂಟೇ ತಿಂಗಳ ಮುಂದುಳಿತು
ಕೆಟ್ಟಗಿಟ್ಟ ಹಡೆದೀ ನಿನ್ನ ಚೆಟ್ಟಾ ಎತ್ತೀನ ।

ಎಂದು ಎಚ್ಚರಿಸಿದ ಗಂಡ—

ಜೋಡ್ನಿ ಎಲ್ಲ ಕೂಡ್ಸುದ್ರೊಳಗ । ದೀಡು ತಿಂಗಳಾಯಿತಪ್ಪ
ತಡದ ಹೊರಗ ಆದಳಲ್ಲಿಂದ ।

ಎಂದು ತೆರೆ ಎಳೆಯುತ್ತಾಳೆ.

'ಜೀವನ ಸಂಗೀತ'ದಿಂದಾಗಿ ಕನ್ನಡದಲ್ಲಿ ಲಾವಣಿ ಕೃತಿಗಳು ಬೆಳಕು ಕಾಣಲು ಕಾರಣವಾಯಿತು. ವಿಶೇಷವಾಗಿ ನಾನು ಗಮನಿಸಿದ್ದು, ಲಾವಣಿ ಕೃತಿ ಪ್ರಕಟಣೆಯ ಪರಂಪರೆ ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಬೆಳೆದುಕೊಂಡು ಬಂದಿದೆ. ಅದರಲ್ಲೂ ಒಬ್ಬ ಕವಿಯ ರಚನೆಗಳು ಒಂದೆಡೆ ಸಂಗ್ರಹಗೊಂಡು ಪ್ರಕಟವಾದದ್ದು ಜಾನಪದ

ಇತಿಹಾಸದಲ್ಲೇ ಒಂದು ಹೊಸ ಬಗೆಯದು. ಅಂದರೆ ಜನಪದ ಕಾವ್ಯ ಪ್ರಕಟಣೆಗಳೆಲ್ಲ ಹಲವರ ಕೃತಿಗಳ ಸಂಕಲನವಾಗಿದ್ದವು, ಮುಂದೆ ಒಬ್ಬ ಕವಿಯ ಕೃತಿಗಳನ್ನು ಒಂದೆಡೆ ಪ್ರಕಟಿಸುವ ರೂಢಿ ಪ್ರಾರಂಭವಾಯಿತು. ಇದರಿಂದ ಜನಪದ ಕಾವ್ಯ ಅಭ್ಯಾಸಕ್ಕೆ ಒಂದು ಹೊಸ ಹಾದಿ ತೆರೆದುಕೊಳ್ಳುವ ಸಾಧ್ಯತೆ ಇದೆ.

ನನ್ನ ಕಣ್ಣಿಗೆ ಬಿದ್ದ ಮೂರು ಪುಸ್ತಕಗಳಲ್ಲಿ ಭಾಗವಾಗಿ, ಮೂರು ಕೃತಿಗಳು ಒಬ್ಬನ ರಚನೆಗಳ ಸಂಗ್ರಹಗಳಾಗಿ, ಐದು ಕೃತಿಗಳು ಹಲವರ ಹಾಡುಗಳ ಸಂಗ್ರಹಗಳಾಗಿ – ಒಟ್ಟಿಗೆ ಎಂಟು ಪೂರ್ಣ ಕೃತಿಗಳು ಲಾವಣಿಗಳ ಸಂಗ್ರಹವಾದರೆ, ಮೂರು ಕೃತಿಗಳು ಭಾಗಶಃ ಲಾವಣಿಗಳನ್ನು ಪ್ರಕಟಿಸಿವೆ.

**1. ಭಾಗಶಃ ಪ್ರಕಟಿಸಿದ ಕೃತಿಗಳು :**

೧. ಕರ್ನಾಟಕ ಸಂಸ್ಕೃತಿ – ದೇವುಡು, ೧೯೩೫.
೨. ಹಳ್ಳಿಯ ಹಾಡುಗಳು - ವಿನೀತ ರಾಮಚಂದ್ರರಾಯ, ೧೯೬೦.
೩. ಗಂಡಸರ ಜನಪದ ಹಾಡುಗಳು - ಸಂ : ನಿಂಗಣ್ಣ ಸಣ್ಣಕ್ಕಿ, ೧೯೭೮.

**2. ಏಕ ಕವಿಕೃತ ಲಾವಣಿ ಸಂಗ್ರಹಗಳು :**

೧. ಕವಿ ಬಾಳಗೋಪಾಳನ ಲಾವಣಿಗಳು - ಸಂ : ನಿಂಗಣ್ಣ ಸಣ್ಣಕ್ಕಿ, ೧೯೭೪.
೨. ಹುಲಕುಂದ ಶಿವಲಿಂಗಸ್ವಾಮಿ ವಿರಚಿತ ಕನ್ನಡ ಗೀಗೀ ಪದಗಳು - ಧುಂಡಿರಾಜ ಲಿಮಯೆ (ಸಂ) ೧೯೮೫.
೩. ಸಾತು ಕ್ಯಾಮಣ್ಣನ ಲಾವಣಿಗಳು - ಸಂ ; ನಿಂಗಣ್ಣ ಸಣ್ಣಕ್ಕಿ, ೧೯೮೧.

**3. ಸಂಗ್ರಹಗಳು – ವಿವಿಧ ಕವಿಗಳ :**

೧. ಲಾವಣಿ ಸಾಹಿತ್ಯದಲ್ಲಿ ಸಂಗೊಳ್ಳಿ ರಾಯಣ್ಣ - ಸಂ : ನಿಂಗಣ್ಣ ಸಣ್ಣಕ್ಕಿ ೧೯೭೫.
೨. ಚಾಪ ಹಾಕತಿವ ಡಪ್ಪಿನ ಮ್ಯಾಲ - ಡಾ. ಸಂಗಮೇಶ ಬಿರಾದಾರ ೧೯೮೧.
೩. ದೈವದ ಎರಡು ಲಾವಣಿಗಳು – ಸಂ : ನಿಂಗಣ್ಣ ಸಣ್ಣಕ್ಕಿ, ೧೯೮೦.
೪. ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು - ಕ್ಯಾತನಹಳ್ಳಿ ರಾಮಣ್ಣ, ೧೯೭೨.
೫. ಹರದೇಶಿ - ನಾಗೇಶಿ - ಡಾ. ಬಿ. ಬಿ. ಹೆಂಡಿ, ಡಾ. ಎಂ. ಜಿ. ಬಿರಾದಾರ ಡಾ. ಎಂ. ಎಸ್. ಲಠ್ಠೆ, ೧೯೮೩.

# ಹಲಸಂಗಿ ಗೆಳೆಯರ ಗುಂಪಿನ ಕೊಡುಗೆ : ಮಲ್ಲಿಗೆ ದಂಡೆ

ಎಚ್. ಜೆ. ಲಕ್ಕಪ್ಪಗೌಡ

೧

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಗಮನವನ್ನು ಸೆಳೆದು ಅತ್ಯಂತ ಅರ್ಥಪೂರ್ಣವಾಗಿ, ವೈವಿಧ್ಯಮಯವಾಗಿ ಹಾಗೂ ಸಮರ್ಥವಾಗಿ ಬೆಳೆದಿರುವ ಕನ್ನಡ ಜಾನಪದ ಕ್ಷೇತ್ರದಲ್ಲಿ ಪ್ರಾತಃಸ್ಮರಣೀಯವಾದ ಹೆಸರುಗಳಲ್ಲಿ ಹಲಸಂಗಿ ಗೆಳೆಯರು ಅಗ್ರಗಣ್ಯರಾದವರು. "ಕಾವ್ಯಮಮ್ ಕಂಡವರ್ ಕೇಳ್ವಡೆ ಗೊರವರ್ ಡುಂಡುಚಿಯೋ, ಬೀದಿವರಿಯ ಬೀರನ ಕತೆಯೋ" ಎಂದು ನಮ್ಮ ಪ್ರಾಚೀನ ಕವಿಗಳೇ ಉಗ್ಗಡಿಸುವಷ್ಟರ ಮಟ್ಟಿಗೆ ತಿರಸ್ಕಾರಕ್ಕೆ ಶಿಷ್ಟರ ಅವಜ್ಞೆಗೆ ಗುರಿಯಾಗಿದ್ದ ಜನಪದ ಕಾವ್ಯಕ್ಕೆ ಒಂದು ವಿಶಿಷ್ಟ ಸ್ಥಾನಮಾನವನ್ನು ಕಲ್ಪಿಸಿ. ಪಂಡಿತರು, ಪ್ರಬುದ್ಧರು ಸಹ ಅವರೆಡೆಗೆ ಅಚ್ಚರಿಯಿಂದ ನೋಡುವಂತೆ ಮಾಡಿದ ಕೀರ್ತಿಶಾಲಿಗಳು ಇವರು. ಶುದ್ಧ ಕಾವ್ಯದಲ್ಲಿ ಒಳಗೊಂಡಿರುವ ಅರ್ಥ, ಭಾವ, ಕಲ್ಪನೆ, ಸೌಂದರ್ಯ ಮತ್ತು ಅಂತಃಕರಣದ ಧ್ವನಿಗಳು ಅಶಿಕ್ಷಿತರ, ಅನಕ್ಷರಸ್ಥರ ಮನದಲ್ಲೂ ಅಪೂರ್ವ ಭಾವ ಸೌಂದರ್ಯದಿಂದ ಒಡಮೂಡುವುದು ಸಾಧ್ಯ ಎಂಬುದನ್ನು ತಮ್ಮ ಸಂಗ್ರಹಗಳ ಮೂಲಕ ಸಮೃದ್ಧ ಸಾಕ್ಷ್ಯಾಧಾರಗಳನ್ನು ಒದಗಿಸಿದವರು ಇವರು.

ಹಳೇ ಮೈಸೂರು ಪ್ರಾಂತ್ಯದಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್, ದೇವುಡು, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಅರ್ಚಕ ರಂಗಸ್ವಾಮಿ, ಎಲ್. ಗುಂಡಪ್ಪ, ಮತಿಘಟ್ಟ ಕೃಷ್ಣಮೂರ್ತಿ, ಕೊಡಗಿನ ಚಿಣ್ಣಪ್ಪ ಮುಂತಾದವರು ಅಲ್ಲಿಯ ಜನರ ಭಾವದ ಗಣಿಗಳನ್ನು ತೋಡಿ ಅಮೂಲ್ಯ ಮುತ್ತು-ರತ್ನಗಳನ್ನು ರಾಶಿ ಹಾಕಿ ನಾಗರಿಕರ ಕಣ್ಮನಗಳನ್ನು ಕೋರೈಸುತ್ತಿದ್ದ ಕಾಲದಲ್ಲಿ ಉತ್ತರ ಕರ್ನಾಟಕದಲ್ಲಿ ಮಧುರಚೆನ್ನ, ಸಿಂಪಿ ಲಿಂಗಣ್ಣ, ಬೆಟಗೇರಿ ಕೃಷ್ಣಶರ್ಮ, ಕಾ.ಪ.ಸೇ. ರೇವಪ್ಪ, ಧೂಲ - ಮುಂತಾದ ಗೆಳೆಯರು ಗಣಿ ಖನನ ಕೆಲಸವನ್ನು ಕೈಗೊಂಡು ಕನ್ನಡ ಸಾಹಿತ್ಯದ ಭಾಷೆ, ಛಂದಸ್ಸು, ಭಾವ, ಲಯಗಳಿಗೆ ಹೊಸ ಆಯಾಮವನ್ನು ಕಲ್ಪಿಸಿದರು.

೨

ಪಂಪನಿಂದ ಮುದ್ದಣನವರೆಗೆ ಸಮೃದ್ಧವಾಗಿ ಬೆಳೆದು ಬಂದ ಕನ್ನಡ ಸಾಹಿತ್ಯ

ಬಹುಮಟ್ಟಿಗೆ ಮಾರ್ಗೀಯವಾಗಿಯೇ ತನ್ನ ಸತ್ವಾತಿಶಯಗಳನ್ನು ಪ್ರಕಟಿಸಿತು. ಅಲ್ಲಿಯವರೆಗಿನ ಸಾಹಿತ್ಯ ಬಹುಮಟ್ಟಿಗೆ ಸಂಸ್ಕೃತವನ್ನೇ ಆಧರಿಸಿ, ಅವಲಂಬಿಸಿ ಹೊರವಾಗಿ ಬೆಳೆದಿತ್ತು. ಆದರೆ ಮುದ್ದಣ ಬರುವ ವೇಳೆಗೆ ಸಂಸ್ಕೃತದ ಗಣೆಯಿಂದ ತೆಗೆಯಲಾಗುತ್ತಿದ್ದ ಭಾಷೆ, ಭಾವ, ಛಂದಸ್ಸು ಚರ್ಚಿತಚರ್ವಣವಾಗಿ, ಹಳಸಲಾಗಿ, ಅನಾಕರ್ಷಕವಾಗಿ, ಕಾವ್ಯ ಸುಂದರಿಯ ಮೈ ರಕ್ತಹೀನತೆಯ ದೋಷದಿಂದ ಕೃಶವಾಗಿತ್ತು. ಇಂತಹ ಸ್ಥಿತಿಯಲ್ಲಿ ಭಾಷೆಗೆ ಹೊಸ ಕಸುವನ್ನು, ತಿರುವನ್ನು, ಕಲ್ಪನೆಗಳಿಗೆ ಹೊಸ ದಾರಿಯನ್ನು ಕಂಡುಹಿಡಿಯಬೇಕಾದ ಸ್ಥಿತಿ ಅನಿವಾರ್ಯವಾಗಿತ್ತು. ಯಾವ ಸಾಹಿತ್ಯ ತನ್ನ ಜನತೆಯ ಮೂಲ ಭಾಷೆ ಹಾಗೂ ಭಾವನೆಗಳಲ್ಲಿ ಬೇರು ಬಿಟ್ಟು ಬೆಳೆಯುವುದಿಲ್ಲವೋ ಆ ಸಾಹಿತ್ಯ ಚಿರಂತನವಾದ ಕಾವ್ಯ ಸೌಂದರ್ಯದ ಚಿಗುರುಗಳನ್ನು ಹೊಮ್ಮಿಸಲು ಸಾಧ್ಯವಾಗುವುದಿಲ್ಲ. ಅಂತಹ ಕಾಲದಲ್ಲಿ ಕನ್ನಡ ನೆಲದಲ್ಲಿ ಶೋಧಿತವಾದ, ಸಂಗ್ರಹಿತವಾದ ಮತ್ತು ಪ್ರಕಟಿತವಾದ ಜನಪದ ಸಾಹಿತ್ಯ ಕೊರಕಲು ಬಿದ್ದಿದ್ದ ಕನ್ನಡ ಸಾಹಿತ್ಯಕ್ಕೆ ಹೊಸ ದಾರಿಯನ್ನೂ, ಸವಕಲು ಭಾಷೆಗೆ ಹೊಸ ಧ್ವನಿ ಹಾಗೂ ಬನಿಗಳನ್ನು ನೀಡಿ ನವಶಕ್ತಿಯನ್ನು ದಾನ ಮಾಡಿ ಅದನ್ನು ಪುಷ್ಟೀಕರಿಸಿತು ಎಂಬುದು ಸುಳ್ಳಲ್ಲ. ಇಂತಹ ಐತಿಹಾಸಿಕ ಕಾರ್ಯವನ್ನು ಹಲಸಂಗಿ ಗೆಳೆಯರ "ಗರತಿಯ ಹಾಡು", "ಜೀವನ ಸಂಗೀತ" ಮತ್ತು "ಮಲ್ಲಿಗೆ ದಂಡೆ" ಕೃತಿಗಳು ನಿರ್ವಹಿಸಿ ಕನ್ನಡಿಗರ ಚಿರಕೃತಜ್ಞತೆಗೆ ಪಾತ್ರವಾಗಿವೆ.

ಹಲಸಂಗಿ ಗೆಳೆಯರ ಗುಂಪು ಉತ್ತರ ಕರ್ನಾಟಕದಲ್ಲಿ ಅನಾಥವಾಗಿ ಮತ್ತು ಅಜ್ಞಾತವಾಗಿ ಉಳಿದಿದ್ದ ಜನಪದ ಕಾವ್ಯ ಸಂಪತ್ತನ್ನು ವ್ಯಾಪಕ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿತು. ಇವತ್ತಿಗೂ ಸಹ ಉತ್ತರ ಕರ್ನಾಟಕದ ಜನಪದ ಭಾಷೆ ಎಷ್ಟು ಸತ್ವಯುತವಾಗಿ ಕಾವ್ಯ ಲಯದಿಂದ ಮತ್ತು ಸಹಜ ಸೌಂದರ್ಯದಿಂದ ಕೂಡಿದೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ. ಹಳ್ಳಿಯ ಜನಗಳ ಜೀವನದ ಸಮೃದ್ಧವಾದ ಅನುಭವದ ಆಳದಿಂದ ಅವರ ಸಹಜ ಮನೋವಾಣಿಯಾಗಿ ಹೊಮ್ಮಿದ ಅಪಾರ ಜನಪದ ಗೀತೆಗಳನ್ನೆಲ್ಲ ಈ ಗೆಳೆಯರು ಹಾಗೆ ಹಾಗೆಯೇ ಪ್ರಕಟಿಸಲು ಹೋಗಲಿಲ್ಲ. ತಮ್ಮ ಕಾವ್ಯ ಸೌಂದರ್ಯ ದೃಷ್ಟಿಗೆ ಶ್ರೇಷ್ಠವೆಂದು ಕಂಡುಬಂದ ಗೀತೆಗಳನ್ನು ಮಾತ್ರ ಆಯ್ದು ಸಂಗ್ರಹಗಳನ್ನು ಪ್ರಕಟಿಸಿದರು. ಹೀಗೆ ಪ್ರಕಟಿತವಾದ ಮೊದಲನೇ ಸಂಗ್ರಹ "ಗರತಿಯ ಹಾಡು". ಹಳ್ಳಿಯ ಹೆಣ್ಣು ಮಕ್ಕಳ ಹಾಡುಗಳನ್ನಷ್ಟೇ ಆಯ್ದು ಅತ್ಯಂತ ಭಾವಪೂರ್ಣವಾದ ಗೀತೆಗಳನ್ನು ಈ ಸಂಕಲನದಲ್ಲಿ ಅವರು ಪ್ರಕಟಿಸಿದ್ದಾರೆ. ಅತ್ಯಂತ ಸುಸೂಕ್ಷ್ಮವಾದ ಹೊಚ್ಚ ಹೊಸತಾದ ಹಾಗೂ ಹೃದಯ ಕಲಕುವ ಮತ್ತು ಅರಳಿಸುವ ಮೌಲಿಕ ಗೀತೆಗಳನ್ನು ಈ ಸಂಕಲನ ಒಳಗೊಂಡಿದೆ. ಜನಪದ ಸಾಹಿತ್ಯ ಎಂದರೆ ಮೂಗು ಮುರಿಯುತ್ತಿದ್ದ ಶಿಷ್ಟರೆಲ್ಲರ ಕಣ್ಣು ತೆರೆಸಿ ಅವರ ಹೃನ್ಮನಗಳನ್ನು ಗೆದ್ದುಕೊಂಡ ಸಂಕಲನ ಇದು.



ಎರಡನೇ ಸಂಕಲನದಲ್ಲಿ ಮುಖ್ಯವಾಗಿ ಹಳ್ಳಿಯ ಗಂಡಸರ ಹಾಡುಗಳನ್ನು ಕಲೆ ಹಾಕಲಾಗಿದೆ. ಇದೇ "ಜೀವನ ಸಂಗೀತ". ತಮ್ಮ ಜೀವನ ಕ್ರಮದ ವಿವಿಧ ಸಂದರ್ಭಗಳಲ್ಲಿ, ಆ ಸಂದರ್ಭ ಮತ್ತು ಕ್ರಿಯೆಗನುಸಾರವಾಗಿ ಹುಟ್ಟಿಕೊಂಡ ಈ ಹಾಡುಗಳು ವೈವಿಧ್ಯಮಯವಾದ ಲಯ ಹಾಗೂ ಭಾವಗಳಿಂದ ಚೇತೋಹಾರಿಯಾಗಿವೆ.

ಮೂರನೇ ಸಂಕಲನವೇ "ಮಲ್ಲಿಗೆ ದಂಡೆ". ಮಲ್ಲಿಗೆ ದಂಡೆ ಸಂಕಲನವನ್ನು ಹಲಸಂಗಿ ಗೆಳೆಯರಲ್ಲಿ ಒಬ್ಬರಾದ ಮಾನ್ಯ ಶ್ರೀ ಕಾಪಸೆ. ರೇವಪ್ಪ ಸಂಗ್ರಹಿಸಿದ್ದಾರೆ. 1935ರಷ್ಟು ಹಿಂದೆಯೇ ಸಂಗ್ರಹಿತವಾದ ಈ ಸಂಕಲನ ಪ್ರಸಿದ್ಧ ಅನುಭಾವ ಕವಿ ಮಧುರಚೆನ್ನರ ಮುನ್ನುಡಿಯ ರಕ್ಷೆಯಲ್ಲಿ ಬೆಳಕು ಕಂಡಿದೆ. ಈಗಿನಂತೆ ಜನಪದ ಸಾಹಿತ್ಯದ ವೈಜ್ಞಾನಿಕ ವಿಭಾಗೀಕರಣ ಮತ್ತು ವಿಶ್ಲೇಷಣೆ ಸಾಧ್ಯವಾಗದಿದ್ದ ಕಾಲದಲ್ಲಿ ಪಶ್ಚಿಮದ ಜಾನಪದ ಮಾರುತ ಬಲವಾಗಿ ಬೀಸದಿದ್ದ ವೇಳೆಯಲ್ಲಿ ಪ್ರಕಟಗೊಂಡ ಈ ಸಂಕಲನಕ್ಕೆ ಮಧುರಚೆನ್ನರು ಸೊಗಸಾದ ಹಾಗೂ ಗಂಭೀರವಾದ ಮುನ್ನುಡಿಯನ್ನು ಬರೆದಿದ್ದಾರೆ. "ನುಡಿದದ್ದೆ ವೇದ, ನಡೆದದ್ದೆ ಯೋಗ" ಎಂಬ ವಾಣಿಗೆ ಜೀವಂತ ಪ್ರತೀಕವಾಗಿರುವ ಜನಪದರ ಜೀವದಿಂದ ಅನಿರ್ಬಂಧಿತವಾಗಿ ಹರಿಯುವ ನೀರಿನಷ್ಟು, ಬೀಸುವ ಗಾಳಿಯಷ್ಟು, ಪರಿಮಳಿಸುವ ಹೂವಿನಷ್ಟು ಸಹಜವಾಗಿ ಮತ್ತು ಜೀವಂತವಾಗಿ ಮೂಡಿ ಬಂದಿರುವ ಈ ಗೀತೆಗಳ ಸಾಹಿತ್ಯಾಂತರಂಗವನ್ನು ಬಿಚ್ಚುವ ಕೆಲಸವನ್ನು ಅತ್ಯಂತ ಗಂಭೀರವಾಗಿ ಹಾಗೂ ಆತ್ಮೀಯತೆಯಿಂದ ಮಧುರಚೆನ್ನರು ಈ ಮುನ್ನುಡಿಯಲ್ಲಿ ನೆರವೇರಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಸಾಮಾನ್ಯನ ಧ್ವನಿ ಕೇಳಿಸದಿರುವ ಸಂದರ್ಭದಲ್ಲಿ ಅತ್ಯಂತ ಪ್ರಸ್ಫುಟವಾಗಿ ಅವನ ಧ್ವನಿಯನ್ನು ಸಹೃದಯ ಲೋಕಕ್ಕೆ ಪರಿಣಾಮಕಾರಿಯಾಗಿ ಪರಿಚಯಿಸಿದ ಕೀರ್ತಿ ಇವರಿಗೆ ಸೇರಿದ್ದು. ಈ ಗೀತ ಗುಚ್ಛ, "ನಮ್ಮ ಕಾವ್ಯ ಕುಮಾರಿಯ ಕಳೆಯನ್ನು ಹೆಚ್ಚಿಸುವುದಕ್ಕೆಂದು ಅವಳಿಗೆ ಕಟ್ಟಿದ ಮಲ್ಲಿಗೆ ದಂಡೆ ಇದು" ಎಂಬ ಅವರ ಮಾತು ಯಥಾರ್ಥವಾಗಿದೆ. ಈ ಸಂಕಲನದ ಹಾಡುಗಳು ತಮ್ಮ ಬಾಹ್ಯಾಂತರ ಸೌಂದರ್ಯದಿಂದ ಜಡ್ಡು ಹಿಡಿದಿದ್ದ ಕನ್ನಡ ಕವಿತೆಗೆ ಹೊಸ ಸ್ಫೂರ್ತಿಯನ್ನು ನೀಡಿವೆ ಎಂಬುದನ್ನು ಮರೆಯುವಂತಿಲ್ಲ.

ಹೆಣ್ಣು ಮಕ್ಕಳ ಈ ಹಾಡಿನಲ್ಲಿ ತ್ರಿಪದಿಗಳ ಭಾಗ ಅಧಿಕ. ಕೆಲವು ವೃತ್ತಗಳು, ಭೋಗ ಷಟ್ಪದಿಗಳು ಮತ್ತು ರಗಳೆಯ ರೂಪಗಳು ಇಲ್ಲಿ ಇರುವುದನ್ನು ಕಂಡಾಗ ನಮ್ಮ ಜನಪದರು "ಕುರಿತೋದದೆಯುಂ ಕಾವ್ಯ ಪ್ರಯೋಗ ಮತಿಗಳ್" ಎಂಬ ಕವಿರಾಜಮಾರ್ಗಕಾರನ ಮಾತು ಸತ್ಯಸ್ಯಸತ್ಯ ಎನಿಸುತ್ತದೆ. ಈ ಛಂದೋರೂಪಗಳು ಜನಪದರ ಭಾವಾಲೋಚನೆಗಳಿಗೆ ಮತ್ತು ಕ್ರಿಯೆಗಳಿಗೆ ತಕ್ಕಂತೆ ಸಹಜಾವತರಣ ಮಾಡಿವೆ ಎಂಬುದು ಮನದಟ್ಟಾಗುತ್ತದೆ. ಶಿಷ್ಟ ಕವಿಗಳ ಪರಿಶ್ರಮಶೀಲತೆಗೂ, ಜನಪದ ಕವಿಗಳ ಸಹಜ ಸೃಜನಶೀಲತೆಗೂ ವ್ಯತ್ಯಾಸ ಇಲ್ಲಿ ಸ್ಪಷ್ಟ ಗೋಚರ. ಜನಪದ

ವಿದ್ವಾಂಸರ ಇತ್ತೀಚಿನ ಧೋರಣೆಯಂತೆ ಜನಪದ ಸಾಹಿತ್ಯವನ್ನು ಆಯಾ ವಕ್ತೃಗಳ ಮೂಲ ಭಾಷೆಯಲ್ಲಿಯೇ ಸಂಗ್ರಹಿಸಬೇಕು. ಏಕೆಂದರೆ ವಕ್ತೃವಿನ ಭಾಷೆ ಅವನ ಮೂಲ ಸಂಸ್ಕಾರ, ಅನುಭವದ ಆಳ - ವಿಸ್ತಾರ ಹಾಗೂ ಸಹಜ ಸೃಜನಶೀಲತೆಯ ದ್ಯೋತಕವಾಗಿರುತ್ತದೆ. ಆದರೆ ಮೂಲ ವಕ್ತೃ ಹಾಡುವಾಗ ಲಯ, ಭಾಷೆ ಎಲ್ಲವೂ ಅವನ ಸ್ವಸೃಷ್ಟಿಯಾಗಿರುವುದರಿಂದ ಅಲ್ಲಲ್ಲಿ ಪ್ರಾಸ, ಛಂದಸ್ಸು, ಭಾಷೆಗಳಲ್ಲಿ ಶಿಥಿಲತೆ ಅಥವಾ ದೋಷ ಕಾಣಬರುವುದುಂಟು. ಶಿಷ್ಟರು ಇವುಗಳನ್ನು ಸಂಗ್ರಹಿಸುವಾಗ ಅವುಗಳನ್ನು ಕೆಲಮಟ್ಟಿಗೆ ಸಂಸ್ಕರಿಸಿ ಗ್ರಾಂಥಿಕ ಸ್ವರೂಪಕ್ಕೆ ತಿರುಗಿಸಿ ಅವು ಸ್ಪಷ್ಟ ರೂಪದಲ್ಲಿ ಜನಕ್ಕೆ ಅರ್ಥ ಆಗಬೇಕೆಂಬ ಕಾಳಜಿಯಿಂದ ಸಂಗ್ರಹಿಸಿ ಪ್ರಕಟಪಡಿಸಿರುವುದೂ ಉಂಟು. ಇಲ್ಲಿರುವ ಹಲವು ಹಾಡುಗಳು ಜನಪದರ ಮೂಲ ಭಾಷೆಯಲ್ಲಿಯೇ ಸಂಗ್ರಹಿತವಾಗಿವೆ. ಇನ್ನು ಕೆಲವನ್ನು ಸ್ವಲ್ಪ ಮಟ್ಟಿಗೆ ಅಲ್ಲಲ್ಲಿ ತಿದ್ದಿದಂತೆಯೂ ಕಾಣಿಸುತ್ತದೆ. ಮಲ್ಲಿಗೆ ದಂಡೆಯ ಸಂಗ್ರಹದ ಪೂರ್ಣ ಹೊಣೆ ಹಲಸಂಗಿ ಗೆಳೆಯರಲ್ಲಿ ಒಬ್ಬರಾದ ಕಾಪಸೇ. ರೇವಪ್ಪ ಅವರದು. ಜಾನಪದದ ಈಗಿನ ವೈಜ್ಞಾನಿಕ ದೃಷ್ಟಿಯಿಂದ ಈ ಸಂಕಲನದ ಸಂಪಾದನೆ ಇತ್ಯಾದಿಗಳ ಬಗ್ಗೆ ಏನೇ ದೋಷಗಳನ್ನು ಹೇಳಬಹುದಾದರೂ, ಜಾನಪದ ಸಂಶೋಧನೆ ಹಾಗೂ ಸಂಪಾದನೆ ಬಗ್ಗೆ ವೈಜ್ಞಾನಿಕ ದೃಷ್ಟಿಯ ಅಭ್ಯಾಸ ನಡೆಯದಿದ್ದ ಕಾಲದಲ್ಲಿ ತಮ್ಮ ಮನಸ್ಸು ತೋರಿದ ಮತ್ತು ತಾವು ಸರಿ ಎಂದು ಭಾವಿಸಿದ ದಾರಿಯಲ್ಲಿ ಈ ಸಂಗ್ರಹಕಾರರು ಕ್ರಮಿಸಿ ಜನಪದ ಸಾಹಿತ್ಯದ ವಿಶಿಷ್ಟ ಗಣಿಯೊಂದನ್ನು ಆ ಮೂಲಕ ತೆರೆದಿದ್ದಾರೆ ಎಂಬ ಮಾತನ್ನು ಮರೆಯುವಂತಿಲ್ಲ. ಹಲಸಂಗಿ ಗೆಳೆಯರು ತಮ್ಮ ಕೃತಿಗಳಿಗೆ ಹೆಸರಿಡುವಲ್ಲಿ ತಮ್ಮ ಕಾವ್ಯ ಸೌಂದರ್ಯ ದೃಷ್ಟಿಯನ್ನು ಮೆರೆದಿದ್ದಾರೆ. "Imagination is an ability to name a cat". ಎಂದು ಆಂಗ್ಲ ವಿಮರ್ಶಕರೊಬ್ಬರು ಉದ್ಧರಿಸಿದ್ದಾರೆ. ಪ್ರತಿಭೆ ಎಂಬುದು ಅಖಂಡ ಕಾವ್ಯ ರಚನೆಯಲ್ಲಿ ಹೇಗೋ ಹಾಗೆ ಆ ಕಾವ್ಯಕ್ಕೆ ಹೆಸರಿಡುವಲ್ಲಿಯೂ ಕೂಡ ಗೋಚರವಾಗುತ್ತದೆ. ಹಳ್ಳಿಯ ಕಷ್ಟ ಕಾರ್ಪಣ್ಯದ ಹೆಚ್ಚು ಭಾಗವನ್ನು ಹೊತ್ತು ನಿರ್ವಹಿಸುವವರು ಹಳ್ಳಿಯ ಗೃಹಿಣಿಯರು. ಅವರ ಅಂತರಂಗದ ನೋವು ಎಷ್ಟೋ ಸಲ ಅವಿಭಕ್ತ ಕುಟುಂಬದ ಗಂಡಸರ ಗಮನಕ್ಕೆ ಬರುವುದಿಲ್ಲ. ತನ್ನ ತೀವ್ರವಾದ ನೋವು-ನಲಿವುಗಳಿಗೆ ಕೇವಲ ಮಾತಿನ ಮೂಲಕ ತನ್ನ ಕುಟುಂಬದವರೊಡನೆ ಅಭಿವ್ಯಕ್ತಿಯನ್ನು ಕೊಡುವಲ್ಲಿಯೂ ಅವಳಿಗೆ ಸಮಯವಿಲ್ಲ. ಹೀಗಾಗಿ ದೈನಂದಿನ ಕೆಲಸಗಳ ವೇಳೆಯಲ್ಲಿ ತನ್ನ ಅಂತರಂಗದ ಪಾಡನ್ನು ಹಾಡನ್ನಾಗಿ ಮಾಡಿ ಹರಿಸುವ ಕಲೆ ಅವಳದು. ಆ ಪಾಡು ಹಾಡಾಗಿ ಹೊಮ್ಮಿದಾಗ ಕೇಳಿದವರ ಕಿವಿ ಮನಸ್ಸನ್ನು ಅದು ಆವರಿಸಿಬಿಡುತ್ತದೆ. ಅಲ್ಲಿ ಭಾಷಾ ಸೌಂದರ್ಯ, ಭಾವ ಸೌಂದರ್ಯ, ಗೇಯ ಸೌಂದರ್ಯ ಮುಪ್ಪುರಿಗೊಂಡು ಅನ್ಯಾದೃಶ್ಯವಾದ ಪರಿಣಾಮವನ್ನು ಉಂಟು ಮಾಡುತ್ತದೆ. ಹಳ್ಳಿಯ ಹೆಣ್ಣುಮಕ್ಕಳ ದೈನಂದಿನ ಕಾರ್ಯಗಳ ಲಯಕ್ಕೆ



ಸಂಬಂಧಿಸಿದಂತೆ ಆ ಭಾವಗಳು ಕೂಡ ಹೊರ ಹೊಮ್ಮುತ್ತವೆ. ಅಂತೆಯೇ ಈ ಗೃಹಿಣಿಯ ಗೀತೆಗಳೇ "ಗರತಿಯ ಹಾಡು"ಗಳಾಗಿವೆ.

ಮನುಷ್ಯನ ಜೀವನ ಒಂದು ರೀತಿಯಲ್ಲಿ ಲಯಬದ್ಧ. ಆದ್ದರಿಂದ ಅವನ ಭಾವನೆಗಳೂ ತೀವ್ರತೆಯ ಕಾರಣದಿಂದಾಗಿ ಲಯತ್ವವನ್ನು ಪಡೆದುಕೊಳ್ಳುತ್ತವೆ. ಹಾಗೆಯೇ ಜೀವನ ಎಂಬುದು ಒಂದು ರೀತಿಯಲ್ಲಿ ಸಂಗೀತದ ಹಾಗೆ. ಸಂಗೀತದಲ್ಲಿ ನಾನಾ ರಾಗಗಳು ಇರುವಂತೆಯೇ, ನಾನಾ ಲಯಗಳು ಇರುವಂತೆಯೇ ಜೀವನದಲ್ಲೂ ರಾಗ ಲಯ ಆರೋಹಣ ಅವರೋಹಣ ವೈವಿಧ್ಯಗಳಿರುತ್ತವೆ. ಆದ್ದರಿಂದಲೇ ಜೀವನವನ್ನು ಸಂಗೀತಕ್ಕೆ ಹೋಲಿಸಬಹುದು. ಅಷ್ಟೇ ಅಲ್ಲ ಸಂಗೀತ ಎಂಬುದು ಒಂದು ಶ್ರೇಷ್ಠ ಕಲೆ. ಆ ಸಂಗೀತದಲ್ಲಿ ಶೋಕ ಭಾವದ ರಾಗವಿರಲಿ, ಆನಂದ ಭಾವದ ರಾಗವಿರಲಿ, ಭಕ್ತಿ ಭಾವದ ರಾಗವಿರಲಿ ಅವೆಲ್ಲವೂ ಏಕಪ್ರಕಾರವಾಗಿ ಸಂತೋಷವನ್ನು ನೀಡುತ್ತವೆ. ಆದ್ದರಿಂದ ಜೀವನದ ಎಲ್ಲಾ ಶೃತಿ–ಅಪಶೃತಿಗಳನ್ನು ಒಟ್ಟಾಗಿ ಆನಂದಿಸಿದಾಗ ಜೀವನವನ್ನು ಜನಪದರು ಸಂಗೀತಕ್ಕೆ ಹೋಲಿಸಿರುವ ಅವರ ಹೃದಯೌನ್ನತ್ಯ ಇಲ್ಲಿ ಭಾಸವಾಗುತ್ತದೆ. ಆದ್ದರಿಂದ "ಜೀವನ ಸಂಗೀತ" ಎಂಬ ಹೆಸರು ಕೂಡ ಸಾರ್ಥಕವಾಗಿದೆ.

೩

ಹೂಗಳಲ್ಲೆಲ್ಲಾ ಮಲ್ಲಿಗೆ ಹೂ ಮಧುರ, ಪರಿಶುಭ್ರ ಮತ್ತು ಪರಿಮಳಪ್ರದ. ಈ ಮಲ್ಲಿಗೆ ಹೂಗಳನ್ನು ದಂಡೆಯಾಗಿ ಕಟ್ಟಿ ಹೆಣ್ಣುಮಕ್ಕಳು ಮುಡಿಗೇರಿಸಿ ಸಂಭ್ರಮಾನಂದಗಳಿಂದ ಮೈಮರೆಯುತ್ತಾರೆ. ಹಾಗೆಯೇ ಈ ಸಂಗ್ರಹದ ಪ್ರತಿಯೊಂದು ಹಾಡೂ ಮಲ್ಲಿಗೆ ಹೂ ಇದ್ದಂತೆ. ಈ ಹೂಗಳ ಗುಚ್ಛವೇ ಮಲ್ಲಿಗೆ ದಂಡೆ. ಇದು ಹೆಣ್ಣುಮಕ್ಕಳಿರಲಿ ಗಂಡು ಮಕ್ಕಳಿಗೂ ಕೂಡ ಆಕರ್ಷಕ ಹಾಗೂ ಆಹ್ಲಾದದಾಯಕ. ಆದ್ದರಿಂದ ಮಲ್ಲಿಗೆ ದಂಡೆ ಎನ್ನುವ ಹೆಸರು ಈ ಸಂಕಲನಕ್ಕೆ ಅತ್ಯಂತ ಅರ್ಥಪೂರ್ಣವಾಗಿ ಅನ್ವಯವಾಗುತ್ತದೆ.

**ಕೃತಿಯ ಸ್ವರೂಪ :**

ಮಲ್ಲಿಗೆ ದಂಡೆಯಲ್ಲಿ ಹತ್ತು ಭಾಗಗಳಿವೆ :–

1) ದೇವತಾ ಸ್ತುತಿ
2) ಪ್ರಣಯಾಂತರ
3) ಭಾವಗೀತೆಗಳು
4) ಕಥೆಯ ಹಾಡುಗಳು
5) ಮದುವೆಯ ಹಾಡು

6) ಸೋಬಾನದ ಹಾಡು
7) ಇತರ ವಿಧಾನಗಳು
8) ಅತ್ತೆ ಮನೆಯ ಕಾಟ
9) ಹಾಸ್ಯದ ಹಾಡುಗಳು

ಹತ್ತನೆಯ ಭಾಗದಲ್ಲಿ ಇಲ್ಲಿನ ಹಾಡುಗಳಿಗೆ ಸಂಬಂಧಪಟ್ಟ ಹಿನ್ನೆಲೆ ಮತ್ತು ವೈಶಿಷ್ಟ್ಯ, ಛಂದಸ್ಸು ಹಾಗೂ ಶಬ್ದ ಪ್ರಯೋಗವನ್ನು ವಿವರಿಸಲಾಗಿದೆ. ಪ್ರಜ್ಞಾಪೂರ್ವಕವಾಗಿ ಜಾನಪದ ವೈಜ್ಞಾನಿಕ ವಿಭಾಗೀಕರಣ ಕ್ರಮವನ್ನು ಇಲ್ಲಿ ಅನುಸರಿಸದಿದ್ದರೂ ಒಂದು ರೀತಿಯಲ್ಲಿ ತಮ್ಮದೇ ಆದ ಶಾಸ್ತ್ರೀಯ ವಿಭಾಗ ಕ್ರಮವನ್ನು ಶ್ರೀಮಾನ್ ರೇವಪ್ಪ ಅವರು ಅನುಸರಿಸಿದ್ದಾರೆ. ಈ ವಿಭಾಗ ಕ್ರಮದಲ್ಲಿ ಸಾಂಪ್ರದಾಯಿಕ ದೃಷ್ಟಿಯೇ ಎದ್ದು ಕಾಣುತ್ತಿರುವುದರಲ್ಲಿ ಅಸಹಜವಾದುದು ಏನೂ ಇಲ್ಲ.

ಮೊದಲನೇ ಭಾಗವಾದ ದೇವತಾಸ್ತುತಿಯಲ್ಲಿ ಸಂಪ್ರದಾಯದಂತೆ ಗಣಪತಿ ಸ್ತೋತ್ರವನ್ನು ಮೊದಲು ಅಳವಡಿಸಲಾಗಿದೆ. ಗಣಪತಿ ಸರ್ವ ವಿಘ್ನ ನಿವಾರಕ ಎಂಬ ನಂಬಿಕೆ ಜನಪದದಲ್ಲಿದೆ. ಈ ಕಾರಣದಿಂದಲೇ ಗಣಪತಿ ಸ್ತೋತ್ರ ಆರಂಭದಲ್ಲಿ ಬಂದಿರಬಹುದು. ಆದರೆ ಈ ಹಾಡುಗಳಲ್ಲಿ ಗಣಪತಿ ಅಲ್ಲದೆ ಸಿದ್ಧರಾಮೇಶ್ವರ, ಪುಂಡರಪುರದ ವಿಠೋಬ, ವೀರಭದ್ರ ಮುಂತಾದ ದೇವರುಗಳ ಸ್ತುತಿಯೂ ಇದೆ. ಹಳ್ಳಿಯ ಜನಕ್ಕೆ ಮನೆದೇವರು ಕೆಲವೊಮ್ಮೆ ಒಂದೇ ಇದ್ದರೂ ಅವರು ವಿವಿಧ ದೇವತೆಗಳಲ್ಲಿ ಭೇದ-ಭಾವವನ್ನು ಕಾಣುವುದಿಲ್ಲ. ಶಿಷ್ಟರಲ್ಲಿರುವಂತೆ ದೇವ-ದೇವತೆಗಳ ನಡುವೆ ಗಲಭೆ-ಗದ್ದಲಗಳನ್ನೆಬ್ಬಿಸುವುದಿಲ್ಲ. ಎಲ್ಲಾ ದೇವತೆಗಳು ತಮ್ಮನ್ನು ಕಾಯುವ ಶರಣಾಗತವತ್ಸಲ ಅಧಿದೇವತೆಗಳೆಂದು ಅವರು ಭಾವಿಸುತ್ತಾರೆ. ಈ ಹಾಡುಗಳಲ್ಲಿ ಭಾವ ಸೌಂದರ್ಯಕ್ಕಿಂತ ವರ್ಣನಾ ಸೌಂದರ್ಯ ಮತ್ತು ಸಾಂಪ್ರದಾಯಿಕ ವಿವರಗಳು ತುಂಬಿಕೊಂಡಿವೆ. ಆದರೆ ಛಂದೋ ವೈವಿಧ್ಯದಿಂದಾಗಿ ಅವುಗಳ ಸಂಗೀತ ಗುಣ, ಸಹಜ ಪ್ರಾಸ ವಿನ್ಯಾಸದ ಭಾಷೆ ಮನಸೆಳೆಯುತ್ತದೆ.

ಎರಡನೇ ಭಾಗವಾದ ಪ್ರಣಯಾಂತರ ಹೆಣ್ಣು-ಗಂಡು ತಮ್ಮ ಪತಿ ಹಾಗೂ ಪತ್ನಿಯ ಪ್ರೇಮ ವಲಯದ ಹೊರಗೆ ಅರಸುವ ಪ್ರಣಯವನ್ನು ಅತ್ಯಂತ ತೀವ್ರವಾಗಿ ಬಿತ್ತರಿಸುತ್ತದೆ. ಹಳ್ಳಿಯ ಜನ ಸಂಪ್ರದಾಯವಂತರೇ ಆದರೂ ಸಹಜ ಭಾವ ರಾಗಗಳು ಕೆಲವೊಮ್ಮೆ ಸಂಪ್ರದಾಯದ ಸೀಮೆಯನ್ನು ಅತಿಕ್ರಮಿಸುತ್ತದೆ. ಈ ಅತಿಕ್ರಮತೆಯಲ್ಲಿ ಅತ್ಯಂತ ತೀವ್ರವಾಗಿ ಮನದ ಬಯಕೆಗಳು ಪರಿಣಾಮಕಾರಿಯಾಗಿ ಅಭಿವ್ಯಕ್ತವಾಗಿವೆ. ಸಂಪ್ರದಾಯದ ಕಟ್ಟಳೆಯನ್ನು ಉಲ್ಲಂಘಿಸಿ ಹೃದಯಧರ್ಮ ಹೇಗೆ ವಿಜೃಂಭಿಸುತ್ತದೆ ಎಂಬುದನ್ನು ಈ ಹಾಡುಗಳು ತುಂಬಾ ಸಹಜವಾಗಿ ಮನಮುಟ್ಟುವಂತೆ ಚಿತ್ರಿಸುತ್ತವೆ.



'ವಾರಿ ರುಮ್ಮಾಲ ಸುತ್ತಿ' ಎಂಬ ಹಾಡಿನಲ್ಲಿ ಹಿಂದಿನ ಪ್ರಣಯಿಯನ್ನು ಭೇಟಿ ಆಗುವ ಪ್ರಿಯಕರನಿಗೆ ಆ ಪ್ರಿಯೆಯು ಹೇಳುವ ಮಾತು ಅತ್ಯಂತ ಕಾವ್ಯಮಯವಾಗಿರುವುದು ಮಾತ್ರವಲ್ಲದೆ ಆಕೆ ಪರೋಕ್ಷವಾಗಿ ಛೇಡಿಸಿ ಅವನ ಈ ಅಕ್ರಮ ಪ್ರಣಯವನ್ನು ಪ್ರತಿಬಂಧಿಸುವ ರೀತಿ ಮಾರ್ಮಿಕವಾಗಿದೆ.

ಮಕಮಕ ಮಲ್ಲೀಗಿ ಅದರಾಗ ಖ್ಯಾದೀಗಿ
ಬಿಚ್ಚಿ ನೋಡಿದರ ಬಿಳಿಯೆಲಿಯೊ ಬಿಳಿಯೆಲಿಯೊ
ಬಿಚ್ಚಿ ನೋಡಿದರ
ಬಿಚ್ಚಿ ನೋಡಿದರ ಬಿಳಿಯೆಲಿಯಂಥವಳು
ಬಿಟ್ಟ ಮಲಗೂದ ಛಂದೇನೊ ಛಂದೇನೊ
ಬಿಟ್ಟ ಮಲಗೂದು

'ಹಣ್ಣ ಬಂದಾವ ಹಣ್ಣ' ಹಾಡಿನಲ್ಲೂ ಸಹ ಗಂಡನಿಲ್ಲದ ಮನೆಗೆ ಬಂದ ಪ್ರಿಯ ಹಣ್ಣ ಕೊಳತೇವ ಹಣ್ಣಿನ ಬೆಲೆಯ ಹೇಳ ಜಾಣೆ ಎನ್ನುವ ಮಾರ್ಮಿಕ ಮಾತಿನ ಮೂಲಕ ಆಕೆಯ ಬೆಲೆಯನ್ನು ಕೇಳುವ ಸಂವಾದ ಕೂಡ ಚಾತುರ್ಯಮಯವಾಗಿದೆ. ಬೆಲೆಯ ಹೇಳುವ ಜಾಣ ಮಲೆನಾಡು ದೇಶಕ್ಕೆ ಹೋಗಿದ್ದಾರೆ ಆ ಹಣ್ಣಿನ ಬೆಲೆಯನ್ನು ತಿಳಿಯದ ತಾನು ಅದಕ್ಕೆ ಏನು ಬೆಲೆ ತಾನು ಹೇಳಬಲ್ಲೆ ಎಂಬ ಹೆಣ್ಣಿನ ಮಾತು ಆಕೆಯ ಜಾಣತನದ ಪ್ರತೀಕವಾಗಿರುವುದು ಮಾತ್ರವಲ್ಲದೆ ವಿವಾಹ ಬಂಧನದಲ್ಲಿರುವ ಹೆಣ್ಣಿನ ಮೌಲ್ಯ ಬೆಲೆ ಕಟ್ಟಲಾಗದಂತದ್ದು ಎಂಬ ಅರ್ಥವನ್ನು ಸೂಚಿಸಿ ಆಕೆಯ ಅಚಂಚಲಿತ ಮನವನ್ನು ಕಣ್ಣೆದುರು ನಿಲ್ಲಿಸುತ್ತದೆ. ಈ ಇಡೀ ಹಾಡಿನ ಸಂವಾದ ಅತ್ಯಂತ ಚಾತುರ್ಯಪೂರ್ಣವಾಗಿ ಹಾಗೂ ಅಲಂಕಾರಿಕವಾಗಿ ಸಾಗಿ ಕೊನೆಗೆ ಆತ ತನ್ನ ಒಡಹುಟ್ಟಿದ ಅಣ್ಣನಾಗಿ ಇರಲಿ ಎಂಬ ಆಕೆಯ ಪ್ರತೀಕ್ಷೆಯೊಡನೆ ಮುಕ್ತಾಯ ಗೊಳ್ಳುತ್ತದೆ.

ಪ್ರಣಯ ವ್ಯವಹಾರ ಕೇವಲ ಮಾನವ ಸ್ತರದಲ್ಲಿ ಮಾತ್ರ ಮುಗಿಯದೆ ದೇವಸ್ತರವನ್ನೂ ವ್ಯಾಪಿಸುತ್ತದೆ. ಈಗಾಗಲೇ ಜಗದಂಬೆ ಪಾರ್ವತಿಯನ್ನು ಮಡದಿಯನ್ನಾಗಿ ಪಡೆದ ಪರಮೇಶ್ವರ ಗಂಗೆಯನ್ನು ಮತ್ತೊಬ್ಬಳು ಮಡದಿಯನ್ನಾಗಿ ತರುವ ಪ್ರಯತ್ನ ಮಾಡುವ ಹಾಡು "ಗಂಗೆ ಗೌರಿ" ಹಾಡು. ಈ ಹಾಡಿನಲ್ಲಿ ದೇವತೆಗಳೂ ಸಹ ಮಾನವರಂತೆ ಪ್ರಣಯಾಂತರದಲ್ಲಿ ವರ್ತಿಸುತ್ತಾರೆ ಎಂಬ ಭಾವವನ್ನು ಜನಪದ ಕವಿ ಅತ್ಯಂತ ಸೊಗಸಾಗಿ ಚಿತ್ರಿಸಿದ್ದಾರೆ. ಈ ಭಾಗದ ಹಾಡುಗಳು ಪ್ರಣಯದ ಮತ್ತೊಂದು ಮುಖವನ್ನು ಅತ್ಯಂತ ಸಹಜವಾಗಿ, ಆಕರ್ಷಕವಾಗಿ ಮತ್ತು ಕುತೂಹಲಕಾರಿಯಾದ ಭಾವಪ್ರಚೋದಕ ಪದ ವಿನ್ಯಾಸದ ಮೂಲಕ ಚಿತ್ರಿಸುತ್ತವೆ.

ಮೂರನೇ ಭಾಗದಲ್ಲಿ ಮೂರು ಭಾವಗೀತೆಗಳಿವೆ. ಜಾತ್ರೆಯಲ್ಲಿ ಕೂಸನ್ನು

ಕಳೆದುಕೊಂಡು ಕಳವಳ ಪಡುವ ತಾಯಿಯ ಹೃದಯ ವಿದ್ರಾವಕ ದೃಶ್ಯ 'ಕೂಸಿನ ಹಾಡಿ'ನಲ್ಲಿ ಇದೆ. ಆಕೆಯ ಪಾಲಿಗೆ ಕೂಸು ಎಂದರೆ ಕುಂದಲದ ಹರಳು. ತನ್ನ ಚಿಕ್ಕ ಮಗುವಿಗೆ ಹಲವಾರು ಬಗೆಯ ತಿಂಡಿ, ಉಡುಪಿನ ಆಕರ್ಷಣೆಯನ್ನೊಡ್ಡುತ್ತಾ ಆಕೆಯ ಮಗನಿಗಾಗಿ ರೋಧಿಸುವ ಚಿತ್ರಣ ತುಂಬಾ ಶಕ್ತಿವತ್ತಾಗಿ ಅಭಿವ್ಯಕ್ತವಾಗಿದೆ. ಹಾಗೆಯೇ ಮಕ್ಕಳಿಗೆ ಬಡಿಸುವ ತಿಂಡಿಗಳು, ತೊಡಿಸುವ ಉಡುಪುಗಳು – ಇವುಗಳ ವರ್ಣನೆ ಕೂಡ ಸಹಜ ರಮ್ಯವಾಗಿದೆ.

ಮೂಕ ಜೀವಿಗಳಾದ ಎತ್ತುಗಳು ತಮ್ಮ ಅನುದಿನದ ಬವಣೆಯನ್ನು ಶೋಡಿಕೊಳ್ಳುವ ಚಿತ್ರ 'ಎತ್ತಿನ ಹಾಡು'ಗಳಲ್ಲಿ ಇದೆ. ಬೆಳಿಗ್ಗೆಯಿಂದ ಸಂಜೆಯವರೆಗೆ ತಮ್ಮ ದೇಹದಿಂದ ಬೆವರನ್ನು ಬಸಿದುಕೊಳ್ಳುವ ರೈತ ತನ್ನ ಕಾರಣದಿಂದಲೇ ಬೆಳೆದ ಒಂದು ತೆನೆದಂಟು ತಿಂದರೆ ಹೇಗೆ ಸೈರಿಸದೆ ತಮ್ಮನ್ನು ನಿರ್ಜೀವ ವಸ್ತುವಿನಂತೆ ಬಡಿಯುತ್ತಾನೆ ಎಂಬ ಅಳಲನ್ನು ತೋಡಿಕೊಳ್ಳುತ್ತವೆ. ಮೂಕ ಪ್ರಾಣಿಗಳಾದ ತಮ್ಮ ನೋವು ಯಾರಿಗೂ ಅರ್ಥವಾಗುವುದಿಲ್ಲ. ಮನುಷ್ಯರು ತಮ್ಮ ಬಗ್ಗೆ ನಡೆದುಕೊಳ್ಳುವ ಕ್ರೂರ ರೀತಿಯನ್ನು ಎತ್ತುಗಳು ಬಣ್ಣಿಸುವ ಬಗೆ ಅರ್ಥವತ್ತಾಗಿದೆ. ಎತ್ತಿನ ಹಾಡು ಕೇವಲ ಎತ್ತುಗಳ ಜೀವನಕ್ಕೆ ಮಾತ್ರ ಮೀಸಲಾಗಿರದೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಶ್ರೀಮಂತರು ಶ್ರಮಿಕರಿಗೆ ಕೊಡುವ ಕಷ್ಟ ಪರಂಪರೆಯನ್ನು ಅತ್ಯಂತ ಅನ್ಯಾದೃಶವಾಗಿ ಈ ಕವಿತೆ ಧ್ವನಿಸುತ್ತದೆ. ಸರಳ ಪದಗಳ ಮೂಲಕ ಸರಳ ಭಾವಗಳ ಧಾರೆಯನ್ನು ಹರಿಸಿ ಕೇಳುಗರ ಮನಸ್ಸನ್ನು ಕರಗಿಸುವ ಈ ಹಾಡು ಸರಳ, ಅರ್ಥಪೂರ್ಣ ಮತ್ತು ಭಾವಬಂಧುರ.

ಜನಪದ ಭಾವಗೀತೆಗಳಲ್ಲಿ 'ಮಳೀ ಹಾಡು' ಅತ್ಯಂತ ವಿಶಿಷ್ಟವಾದುದು. ಉತ್ತರ ಕರ್ನಾಟಕದಲ್ಲಿ ಕ್ಷಾಮ ತಲೆದೋರಿ ಜನ-ದನಗಳು ಹೊಟ್ಟೆಗಿಲ್ಲದೆ ಸಾಯುವ ದಾರುಣ ದೃಶ್ಯ ಇಲ್ಲಿದೆ. ಉತ್ತರ ಕರ್ನಾಟಕಕ್ಕೆ ಬಡಿದ ಬರದ ಬೇಗೆ ಎಷ್ಟು ತೀವ್ರವಾದುದು ಎಂದರೆ ಅಲ್ಲಿಯ ಪ್ರಾಣಿ ಪಕ್ಷಿಗಳು ಕುಡಿಯಲು ನೀರಿಲ್ಲದೆ, ತಿನ್ನಲು ಅನ್ನವಿಲ್ಲದೆ ಸತ್ತು ಮಣ್ಣಿನಲ್ಲಿ ಮಣ್ಣಾಗಿವೆ. ಕೃಷಿಕರ ಕೇರಿಯಲ್ಲಿ ತಿನ್ನಲು ಏನೂ ಇಲ್ಲದ ಕಾರಣ ಮಾರುವುದಕ್ಕೆ ಏನೂ ಇಲ್ಲದ ಕಾರಣ ತಮ್ಮ ಮುಗ್ಧ ಮಕ್ಕಳನ್ನೇ ಮಾರಿ ಜೀವವನ್ನು ಕಾಪಾಡಿಕೊಳ್ಳಲು ಬಯಸುತ್ತಾರೆ. ಆದರೆ ಮಕ್ಕಳನ್ನು ಮಾರಿ ರೊಕ್ಕ ತೆಗೆದುಕೊಂಡರೂ ಕೊಳ್ಳಲು ಭತ್ತ ಸಿಗದಂಥ ದಟ್ಟ ದಾರಿದ್ರ್ಯ ಬಂದು ಬಿಟ್ಟಿದೆ. ಅಷ್ಟೇ ಅಲ್ಲ ವರ್ತಕ ಸಮೂಹ ಹಿಟ್ಟಿನಲ್ಲಿ ಸುಣ್ಣವನ್ನು ಕೂಡಿಸಿ ಮಾರಿದಾಗ ಆ ಮಿಶ್ರ ಧಾನ್ಯವನ್ನು ಕೊಂಡು ತಂದು ತಿಂದ ಹಸಿವಿನಿಂದ ತಪ್ತರಾದ ಜನ ಒದ್ದಾಡಿ ಸತ್ತು ಹೋಗುತ್ತಾರೆ. ಸಣ್ಣ ಅಕ್ಕಿಯಲ್ಲಿ ಅಫುಪನ್ನು ಸೇರಿಸಿ ವರ್ತಕರು ಮಾರಿದಾಗ ಅದರಿಂದ ಅನ್ನವನ್ನು ಮಾಡಿ ಮಕ್ಕಳಿಗೆ ಬಡಿಸಿದಾಗ ಆ ಮಕ್ಕಳು ಒದ್ದಾಡಿ ಸತ್ತ ಚಿತ್ರ ಅತ್ಯಂತ ಭೀಕರವಾಗಿದೆ. ಗಂಡುಳ್ಳ ಗರತಿಯರು



ತಮ್ಮ ಜೀವದ, ಮಾನದ ಹಂಗು ತೊರೆದು ಭಿಕ್ಷೆಗೆ ಹೋಗುತ್ತಿದ್ದಾರೆ. ಇಷ್ಟಾದ ನಂತರ ಒಮ್ಮೆ ಸ್ವಾತಿ ಮಳೆ ಬಂದು ಹಳ್ಳ-ಕೊಳ್ಳಗಳಲ್ಲೆಲ್ಲಾ ಹೆಣ ಹರಡಿ ಹೋಗಿವೆ. ಹೀಗೆ ಕ್ಷಾಮದ ಕಾರಣದಿಂದ ಒಂದು ನಾಡಿನಲ್ಲಿ ಉಂಟಾದ ರುದ್ರಭೀಕರವಾದ ಪರಿಣಾಮವನ್ನು ಈ ಹಾಡು ಅತ್ಯಂತ ಪ್ರಭಾವಯುತವಾಗಿ, ಶಕ್ತಿಯುತವಾಗಿ ವರ್ಣಿಸುವಲ್ಲಿ ಯಶಸ್ವಿಯಾಗಿದೆ. ಉತ್ತಮ ಕಾವ್ಯದಲ್ಲಿ ಬಯಸುವ ರಸ, ಭಾವ, ಧ್ವನಿಗಳು ಈ ಗ್ರಾಮೀಣ ಸಹಜ ಸೃಷ್ಟಿಯ ಹಾಡಿನಲ್ಲಿ ಅಪಾರ ಪ್ರಮಾಣದಲ್ಲಿ ಮೈವೆತ್ತಿವೆ.

ನಾಲ್ಕನೇ ಭಾಗದಲ್ಲಿ ಏಳು ಕಥನ ಗೀತೆಗಳಿವೆ. ದಕ್ಷಿಣ ಕರ್ನಾಟಕದಲ್ಲಿ ಪ್ರಸಿದ್ಧವಾಗಿರುವ ಗೋವಿನ ಕತೆಯ ಮತ್ತೊಂದು ಪಾಠಾಂತರ 'ಆಕಳ ಹಾಡು'. ಗೋವಿನ ಸತ್ಯನಿಷ್ಠತೆ, ಗೋವು ಮತ್ತು ಕರುವಿನ ಹೃದಯ ಕರಗಿಸುವ ಕರುಣಾಪೂರ್ಣ ಸಂವಾದ, ಹುಲಿ ಮತ್ತು ಗೋವಿನ ನಡುವಿನ ಮಾತುಕತೆ, ಗೋವಿನ ಸತ್ಯವನ್ನು ಅರಿತ ದುಷ್ಟ ಮೃಗ ತನ್ನ ಸಹಜ ದೌಷ್ಟ್ಯವನ್ನು ತೊರೆದು ಹೃದಯ ಪರಿವರ್ತನೆಗೊಂಡು ನನ್ನವ್ವ ನನ ತಾಯಿ ಎಂದು ಗೋವನ್ನು ಸ್ತುತಿಸುವ ದೃಶ್ಯ ಅರ್ಥಪೂರ್ಣವಾಗಿದೆ. ದಕ್ಷಿಣ ಕರ್ನಾಟಕದ ಪಾಠಗಳಲ್ಲಿ ಹುಲಿ ಗೋವಿನ ಸತ್ಯ ವಾಕ್ಯಕ್ಕೆ ಮೆಚ್ಚಿ ತನ್ನ ಪಾಪಕ್ಕೆ ಪ್ರಾಯಶ್ಚಿತವಾಗಿ ಮೇಲೆ ನೆಗೆದು ಕೆಳಕ್ಕೆ ಬಿದ್ದು ಆತ್ಮಾರ್ಪಣೆ ಮಾಡಿಕೊಳ್ಳುವ ದೃಶ್ಯ ಇದ್ದರೆ, ಈ ಪಾಠದಲ್ಲಿ ತನ್ನ ತಪ್ಪಿಗೆ ಪ್ರಾಯಶ್ಚಿತವಾಗಿ ಆರು ತಿಂಗಳು ಉಪವಾಸ ಮಾಡುವೆ ಎನ್ನುವ ಹುಲಿಯ ಚಿತ್ರ ಅತ್ಯಂತ ಸಹಜವಾಗಿ ರೂಪುಗೊಂಡಿದೆ. ಪ್ರಾದೇಶಿಕ ಅಂತರದಿಂದಾಗಿ ಈ ಕತೆಯ ಪಾಠಾಂತರ ಕೂಡ ಭಿನ್ನವಾಗಿರುವುದು ಇಲ್ಲಿ ಕಂಡುಬರುತ್ತದೆ.

ಎಳ್ಳಮಾಸೀ ಹಾಡು, ಅಕ್ಕಮಹಾದೇವಿಯ ಹಾಡು, ದ್ರೌಪದಿಯ ಹಾಡು, ಬರದ ಹಾಡು – ಮುಂತಾದ ಏಳು ಹಾಡುಗಳನ್ನು ನಾಲ್ಕನೇ ಭಾಗ ಒಳಗೊಂಡಿದೆ. ಪುರಾಣ, ಇತಿಹಾಸ, ಸಮಕಾಲೀನ ವಾಸ್ತವಿಕ ಜೀವನ ಈ ಕಥನ ಗೀತೆಗಳಲ್ಲಿ ಮುಪ್ಪುರಿಗೊಂಡಿವೆ. ನವಿರಾದ, ಸೂಕ್ಷ್ಮವಾದ ಕಥಾ ನಿರೂಪಣಾ ಜಾಣ್ಮೆ, ಆಕರ್ಷಕ ಪದಪ್ರಯೋಗ, ಕುತೂಹಲ ಕೆರಳಿಸುವ ವಿಧಾನ ಇವುಗಳಿಂದಾಗಿ ಈ ಹಾಡುಗಳು ಭಾವ, ಭಾಷೆ ಮತ್ತು ನಾದಗಳ ಸುಮಧುರ ಸಂಗಮವಾಗಿವೆ. ಪುರಾಣದ ದ್ರೌಪದಿಯನ್ನು, ಇತಿಹಾಸದ ಅಕ್ಕಮಹಾದೇವಿಯನ್ನು ಕೂಡ ಪ್ರಾದೇಶಿಕ ಸಹಜ ಜಾನಪದದ ಚೌಕಟ್ಟಿನಲ್ಲಿ ಇಟ್ಟು ಚಿತ್ರಿಸಿರುವ ಬಗೆ ಅಪೂರ್ವವಾಗಿದೆ. ಈ ಹಾಡುಗಳ ವಸ್ತು ಹಳೆಯದಾಗಿದ್ದರೂ ಅದರಲ್ಲಿ ಚಿತ್ರಿತವಾಗಿರುವ ಸಾಂಪ್ರದಾಯಿಕ ಜೀವನದ ವಿವರಗಳು ಕಣ್ಣಿಗೆ ಕಟ್ಟಿದಂತೆ ಇದ್ದು ಉತ್ತರ ಕರ್ನಾಟಕದ ಗ್ರಾಮೀಣ ಜೀವನದ ಸಹಜ ಇತಿಹಾಸದಂತೆ ಭಾಸವಾಗುತ್ತದೆ. ಭೂತವನ್ನು ವರ್ತಮಾನಕ್ಕೆ ಸಂಗತಗೊಳಿಸುವ ಹಾಗೂ ವರ್ತಮಾನವನ್ನು ಭೂತ ಕಾಲದ ವಸ್ತುವಿನೊಳಗೆ ಅಂತರ್ಗತ ಮಾಡುವ ಈ ಕಥನ ಕಲೆ ವಿಶಿಷ್ಟವಾದುದಾಗಿದೆ.

ದೂರದ ದೇಶದ ದೂರದ ಕಾಲದ ವ್ಯಕ್ತಿಗಳನ್ನು ಅತ್ಯಂತ ಆತ್ಮೀಯವಾಗಿ ನಮ್ಮದೇ ಕುಟುಂಬದ ಪಾತ್ರಗಳಂತೆ ಜೀವಂತವಾಗಿ ನಮ್ಮ ಸುತ್ತಮುತ್ತ ಸುಳಿದಾಡುವಂತೆ ಮಾಡುವ ಈ ಕಾವ್ಯ ಕಲೆ ಅಪೂರ್ವವಾದುದು.

ಐದನೇ ಭಾಗ ಈ ಕೃತಿಯ ವಿಸ್ತಾರವಾದ ಭಾಗ. ಹಳ್ಳಿಯ ಜೀವನದ ಪ್ರಮುಖ ಘಟನೆಗಳಲ್ಲಿ ಒಂದಾದ ಮದುವೆ ಈ ಭಾಗದ ಹಾಡುಗಳ ಅಂತರ್‌ದ್ರವ್ಯ. ಉತ್ತರ ಕರ್ನಾಟಕದ ಮದುವೆ ಸಂಪ್ರದಾಯದ ಅತ್ಯಂತ ಆಕರ್ಷಕ ವಿವರಗಳನ್ನು ಈ ಭಾಗ ನೀಡುತ್ತದೆ. ಇಲ್ಲಿ ಬರುವ ಬೀಗರ ಹಾಡು ನವಿರಾದ ವ್ಯಂಗ್ಯದಿಂದ ಪರಿಹಾಸ್ಯದಿಂದ ಹಾಗೂ ಅನ್ಯೋಕ್ತಿಯಿಂದ ಹಾಗೂ ಭಾಷೆಯ ಹದಿವರಿತು ತುಂಬಾ ವಿಶಿಷ್ಟವಾಗಿ ಸೃಜನೆಗೊಂಡಿದೆ. ಕೆಲವೊಮ್ಮೆ ಈ ಹಾಡುಗಳಲ್ಲಿ ಸಾಂಪ್ರದಾಯಿಕ ಬಣ್ಣನೆಯೇ ಪ್ರಮುಖ ಪಾತ್ರ ವಹಿಸುವ ಕಾರಣ ಕಾವ್ಯ ಕೆಲಮಟ್ಟಿಗೆ ಹಿಂದೆ ಬಿದ್ದಿರುವುದು ಉಂಟು. ಆದರೆ ಗ್ರಾಮೀಣ ಜೀವನದ ಚಿತ್ರಗಳು ತೆರೆ ತೆರೆಯಾಗಿ ಬಂದು ಕಳೆದು ಹೋದ ಬದುಕಿನ ಒಂದು ಅವಿಸ್ಮರಣೀಯ ಚಿತ್ರವನ್ನು ನಮ್ಮೆದುರಿಗೆ ಹಿಡಿಯುತ್ತವೆ. ಆಳಿಯ ಧರಿಸಿರುವ ಮುತ್ತನ್ನು ಕಡಲೆ ಕಾಳಿನ ಹಾಗೆ ಎನ್ನುವ ವರ್ಣನೆಯಾಗಲಿ, ಉದ್ದಿನಬೇಳೆಯ ಹಾಗೆ ತಿದ್ದಿದ ಹಾಗೆ ಎನ್ನುವ ಬಗೆಯಾಗಲಿ ಎಷ್ಟೊಂದು ಸಹಜ ಸುಂದರ ಹಾಗೂ ಅಪ್ಯಾಯಮಾನ. ಮದುವಳಿಗೆ ಹೆಣ್ಣಿನ ಮನಸ್ಸಿನ ದುಗುಡಗಳು, ಆಕೆಯ ತೌರಿನ ಬಗೆಯ ಅನಿಸಿಕೆಗಳು ಕೂಡ ಸರಳಾಕರ್ಷಕವಾದ ಅಭಿವ್ಯಕ್ತಿಯನ್ನು ಪಡೆದಿವೆ. ಅರಿಶಿನ ಹಚ್ಚುವಂತಹ ಕ್ರಿಯೆ ಕೂಡ ಎರಡು ಹಾಡುಗಳಲ್ಲಿ ಚಿತ್ರಿತವಾಗಿದ್ದು ಹಳ್ಳಿಯ ಸಾಮೂಹಿಕ ಬದುಕು ಹೇಗೆ ಸಂತಸದ, ಪ್ರೀತಿಯ ಕಡಲಾಗಿದೆ ಎಂಬುದನ್ನು ಸೂಚಿಸುತ್ತದೆ. ಮದುವೆಯಲ್ಲಿ ಬಳಕೆಯಾಗುವ ಐರಾಣಿ, ಐರಾಣಿ ತಯಾರಾಗುವ ವಿಧಾನದ ಚಿತ್ರಣ ಅತ್ಯಂತ ವಾಸ್ತವವೂ ರಮ್ಯವೂ ಆಗಿದೆ. ಮದುವೆಗೆ ಸಂಡಿಗೆ ಕರಿಯುವುದು, ನೂಲು ಸುತ್ತುವುದು, ಅಡಿಕೆ ಆಡುವುದು - ಮುಂತಾದ ಸಾಮಾನ್ಯ ಕ್ರಿಯೆಗಳು ಕೂಡ ರೋಚಕ ಅಭಿವ್ಯಕ್ತಿಯನ್ನು ಪಡೆದಿವೆ. ಬೀಗರ ಹಾಡು ಜನಪದರ ತೀವ್ರವಾದ ಹಾಸ್ಯ ಪ್ರಜ್ಞೆಗೆ, ವಿಡಂಬನಾ ಶಕ್ತಿಗೆ ದ್ಯೋತಕವಾಗಿದೆ. ಬೀಗರು ಒಂಟೆಲ್ಲಿ ನಿಮ್ಮ ದಳವೆಲ್ಲಿ ಎಂದು ಕೇಳಿದರೆ ಗಂಡಿನ ತಂದೆ ಹೇಳುತ್ತಾರೆ, ಕುಂಟು ಹೋರಿಯ ಮೇಲೆ ಬರುತ್ತಾನೆ ಎಂದು. ಬೀಗುತಿ ಒಳ್ಳೆಯವಳು ಎಂದುಕೊಂಡರೆ ಅವಳು ತನ್ನ ಬಗಲಿನಲ್ಲಿ ದೇವರನ್ನೇ ಕದ್ದುಕೊಂಡು ಹೋದಳಂತೆ. ಅಡಿಗೆ ಮನೆಗೆ ಆಕೆಗೆ ಪ್ರವೇಶ ಕೊಟ್ಟರೆ ಹೋಳಿಗೆ ತುಂಬಿದ ಬಟ್ಟಲನ್ನೆ ತೆಗೆದುಕೊಂಡು ಹೋದಳಂತೆ. ಇಂತಹ ಹಾಸ್ಯ ಈ ಹಾಡಿನ ಸಾಲು ಸಾಲಿನಲ್ಲೂ ಜಿನುಗುತ್ತದೆ.

ಕೂಸು ಒಪ್ಪಿಸುವ ಹಾಡು ಮದುವೆ ಸಂದರ್ಭದ ಮತ್ತೊಂದು ಸಂತೋಷದ ಶೋಕಪೂರ್ಣವಾದ ಹೃದಯಂಗಮ ಭಾವಗೀತೆ. ತನ್ನ ಕರುಳಿನ ಕುಡಿ ಹೆಣ್ಣನ್ನು ಒಪ್ಪಿಸುವಂತಹ ತಾಯಿ ಅನುಭವಿಸುವ ಯಾತನೆ ಇಲ್ಲಿ ಹೆಪ್ಪುಗಟ್ಟಿದೆ. ತನ್ನ ಮಗಳ ವಿವಿಧ ಚರ್ಯೆಗಳನ್ನು, ಅವಳಿಗೆ ಇಷ್ಟವಾದ ವಿವಿಧ ಭಕ್ಷ್ಯ-ಭೋಜನಗಳನ್ನು ಅತ್ಯಂತ ಅಕ್ಕರೆಯ ಸಕ್ಕರೆಯಲ್ಲಿ ಅದ್ದಿ ಚಿತ್ರಿಸಿದ್ದಾರೆ ಈ ಕವಿತೆಯಲ್ಲಿ ಹೆಣ್ಣುಮಕ್ಕಳು. ಮಗಳು ಮಗುವಾಗಿದ್ದಾಗ ಮೊಸರು ಅನ್ನವನ್ನು ಕಲಿಸಿ ತುಸು ತುಸು ಉಣ್ಣು ಎಂದು ಹೇಳಿ ರಾಶಿ ಅನ್ನವನ್ನೇ ಉಣ್ಣಿಸುವ ಚಿತ್ರ ಅತ್ಯಂತ ತೀವ್ರವಾಗಿರುವುದು ಮಾತ್ರವಲ್ಲದೆ ಆ ಸಂದರ್ಭವನ್ನೇ ಕಣ್ಣಿಗೆ ಕಟ್ಟುವಲ್ಲಿ ಯಶಸ್ವಿಯಾಗಿದೆ. ಹೀಗೆ ಹೆಣ್ಣು ಕೊಡುವಾಗ ಅಣ್ಣನ ಹೊಟ್ಟೆ ಸುಣ್ಣದ ಭಟ್ಟಿಯಲ್ಲಿ ತಣ್ಣೀರು ಹೊಯ್ದಂತೆ ಆಯಿತು ಎಂಬ ಚಿತ್ರ ಎಷ್ಟು ಸತ್ವಯುತವಾಗಿ ಬಂದಿದೆ ಎಂಬುದನ್ನು ಪರಿಭಾವಿಸಬಹುದು. ಈ ಹಾಡಿನ ಉದ್ದಕ್ಕೂ ವಾತ್ಸಲ್ಯದ ಧಾರೆ ತೆರೆ ತೆರೆಯಾಗಿ ಹರಿದು ಕೇಳುಗರ ಮನಸ್ಸನ್ನು ಒದ್ದೆಗೊಳಿಸುತ್ತದೆ.

ಈ ಸಂಕಲನದ ಅತ್ಯಂತ ಮುಖ್ಯವಾದ ಭಾಗಗಳಲ್ಲಿ ಸೋಬಾನದ ಪದಗಳು ಒಂದು. ಮದುವೆಯ ಸಂದರ್ಭದಲ್ಲಿ ಹಾಡಲ್ಪಡುವ ಈ ಹಾಡುಗಳು ಮದುಮಗ, ಮದುಮಗಳು ಹಾಗೂ ವಿವಾಹದ ವಿವಿಧ ಹಂತಗಳು - ಇವುಗಳನ್ನು ಕುರಿತವುಗಳು. "ಹಿಂಬಳಿ ಮುಂಬಳಿ" ಎಂಬ ಹಾಡಿನಲ್ಲಿ ಮದುಮಗಳನ್ನು ಹಸೆಗೆ ಕರೆಯುವ ವಿವಿಧ ಬಗೆಯ ಹಾಡುಗಳು ಜಾನಪದ ಕವಿಯಿತ್ರಿಯ ವಿಶಿಷ್ಟ ಕಲ್ಪನೆಗಳಿಗೆ ಮತ್ತು ಕೋಮಲ ಭಾವನೆಗಳಿಗೆ ಹಾಗೂ ಅವುಗಳನ್ನು ಹೊತ್ತು ನಿಂತಿರುವ ಹದವಾದ ಮಿದುವಾದ ಭಾಷೆಗೆ ನಿದರ್ಶನವಾಗಿದೆ.

ನೀರೆಯ ಬಾವುಲಿ ಲಿಗಿಲಿಗಿನಾಡುವ
ಕಾಲುಂಗ್ರ ಪಿಲ್ಯಾ ಝುಗಝುಗ ಹೊಳೆವುತ
ಹೊನ್ನಾ-ಭರಣಾ ಹರಡಿಗೆ ಮಲಕ
ಹೊನ್ನ ಪುತ್ತಳಿ ರುಳಿ ಸರಿಗಿಟಗೊಂಡು
ಕೋಗಿಲ ಮದಾನೇ ಹಸಿಗೇಳ

ಈ ಹಾಡು ಒಂದೇ ಸಾಕು ಗ್ರಾಮೀಣ ಕವಿಯಿತ್ರಿಯ ವರ್ಣನೆಯ ನೈಪುಣ್ಯಕ್ಕೆ. ಮೈನೆರೆದ ಬಾಲೆಯನ್ನು ವರ್ಣಿಸುವ ಮುಟ್ಟಿದರೆ ಬಾಡುವಂತಹ ಭಾವನೆಗಳನ್ನೆಲ್ಲಾ ಅಷ್ಟೇ ಸುಕೋಮಲವಾದ ಪದ ಸಂಯೋಜನೆ ಮೂಲಕ ಅಭಿವ್ಯಕ್ತಿಸುವ ಕೌಶಲ ಅತ್ಯಂತ ಮೋಹಕ. ಮೈನೆರೆದ ಬಾಲೆಯ ಮುಖ ಬಾಳೇಲಿ ಹಾಗೆ, ನಿಂಬೇಲಿ ಹಾಗೆ ಬಾಡಿದೆಯಂತೆ. ಬಾಳೆಲೆಯ, ನಿಂಬೆಲಿಯ ಸೌಕುಮಾರ್ಯವನ್ನು ನೆರೆದ ಹೆಣ್ಣು ಮಗಳ ಮುಖಕ್ಕೆ ಹೋಲಿಸುವ ಕಲೆ ಅತ್ಯಂತ ಸ್ವೋಪಜ್ಞಶೀಲವಾದುದು. ಮದುವೆಯ ಹೆಣ್ಣನ್ನು ವಿವಿಧ ಬಗೆಯಾಗಿ ಶೃಂಗರಿಸುವ ಹಳ್ಳಿಯ ಶೃಂಗಾರ ಕಲೆ ಕೂಡ ಶಿಷ್ಟರಿಗಿಂತ ಭಿನ್ನವಾಗಿದ್ದು ಅತ್ಯಪೂರ್ವವಾಗಿದೆ. ಹೆಣ್ಣುಮಗಳಿಗೆ ಕುಬುಸ ಮಾಡುವಾಗ, ಅವಳಿಗೆ ಬಯಕೆ ಮೂಡಿದಾಗ, ಉಡಿ ತುಂಬುವಾಗ, ಬೇನೆ

ತಿನ್ನುವಾಗ - ಈ ಸಂದರ್ಭಗಳನ್ನು ಎಷ್ಟೊಂದು ಸುಸೂಕ್ಷ್ಮವಾಗಿ ಜಾನಪದರು ಗಮನಿಸಿದ್ದಾರೆ ಮತ್ತು ಅವುಗಳನ್ನು ತಕ್ಕ ಪದ-ಪಾತ್ರೆಗಳಲ್ಲಿ ತುಂಬಿಟ್ಟಿದ್ದಾರೆ ಎನ್ನುವಂಥದು ಅತ್ಯಂತ ಕುತೂಹಲಕಾರಿಯಾದುದು. ಬೇನೆ ತಿನ್ನುವ ಹಾಡಿನಲ್ಲಿ ಬರುವ ಈ ಸಾಲುಗಳಲ್ಲಿ ನಿರಕ್ಷರಕುಕ್ಷಿಗಳ ಅಂತರಂಗದಿಂದ ಹೊಮ್ಮಿದ ಕಾವ್ಯ ಕಾವೇರಿ ಎಷ್ಟೊಂದು ತೀವ್ರವಾಗಿ, ಶಕ್ತಿಯುತವಾಗಿ ನಮ್ಮನ್ನು ದಂಗುಬಡಿಸುತ್ತದೆ ಎಂಬುದನ್ನು ಕಾಣಬಹುದು. ಹೆರಿಗೆ ಕಾಲದ ಬೇನೆ "ನಡಟೊಂಕ ಕೊಡಲೀಲಿ ಕಡದಂತ ತಡಬ್ಯಾನಿ", "ಹೊತ್ತು ಹೊತ್ತೀನ ಬ್ಯಾನಿ ಕತ್ತೀಲಿ ಕಡದಂಗ", "ತಾಸು ತಾಸಿನ ಬ್ಯಾನಿ ತಾಳ ಬಾರಿಸಿದಂಗ" ಇದೆಯಂತೆ. ಕ್ಷಣ ಕ್ಷಣಕ್ಕೂ ತಾಯಿಗೆ ಉಂಟಾಗುವ ಹೆರಿಗೆ ಬೇನೆಯನ್ನು ಚಿತ್ರವತ್ತಾದ ಶಕ್ತಿಪೂರ್ಣ ಉಪಮೆಗಳ ಮೂಲಕ ವರ್ಣಿಸಿರುವ ರೀತಿ ಅಪೂರ್ವ.

"ಶಾಂವಕ್ಕಿ ಕುಟ್ಟಂದ್ರ" ಎಂಬ ಹಾಡಿನಲ್ಲಿ ಅತ್ತೆ ಮನೆಯ ಕಾಟದಲ್ಲಿ ನಲುಗಿ ನರಳುವ ಹೆಣ್ಣಿನ ಚಿತ್ರವನ್ನು ಪರಿಣಾಮಕಾರಿಯಾಗಿ ನೀಡಲಾಗಿದೆ. ಇಲ್ಲಿ ಬರುವ ಸಂವಾದಗಳು ಚತುರವೂ ನಾಟಕೀಯವೂ ರೂಪಾಲಂಕಾರಯುಕ್ತವೂ ಆಗಿ ಮನ ಸೆಳೆಯುತ್ತವೆ.

ಈ ಸಂಕಲನದ ಕೆಲವು ಹಾಸ್ಯದ ಹಾಡುಗಳು ಜಾನಪದರ ಕಲ್ಮಷರಹಿತವಾದ ಪರಹಿಂಸಾರಹಿತವಾದ ಶುದ್ಧ ಪರಿಹಾಸಕ್ಕೆ ಮಾದರಿಯಾಗಿವೆ. ವಿಕಟವಲ್ಲದ, ಹೃದಯ ಅರಳಿಸುವ ಹಾಸ್ಯಭಾವ, ಅದಕ್ಕನುಗುಣವಾದ ಸರಳವೂ ಚತುರಗತಿಯದೂ ಆದ ಭಾಷೆ ಇಲ್ಲಿ ಪ್ರಭಾವಪೂರ್ಣವಾಗಿ ಮೈದಾಳಿದೆ. ನೂಲೊಲ್ಯಾಕ ಚೆನ್ನೀ ? ಎಂಬ ಹಾಡಿನಲ್ಲಿ ಗಂಡ-ಹೆಂಡಿರ ನಡುವಣ ಸಂವಾದ ಅತ್ಯಂತ ನಾಟಕೀಯವಾದ ಅನಿರೀಕ್ಷಿತವಾದ ತಿರುವನ್ನು ಪಡೆದಿರುವುದು ಜಾನಪದರ ಜಾಣ್ಮೆಗೆ ನಿದರ್ಶನವಾಗಿದೆ. ಹಾಗೆಯೇ ಜೇನನ ಹಾಡು, ಮಂಗ್ಯಾನ ಹಾಡು ಮುಂತಾದವು ಕೂಡ ಸರಳ ಸುಂದರ ಭಾಷೆಯಲ್ಲಿ ಜೀವದ ಹಲವು ಸಂದರ್ಭಗಳನ್ನು ಲಘುವಾಗಿ, ಆದರೂ ಕಚಗುಳಿಯಿಡುವ ಭಾಷೆಯ ಮೂಲಕ ವ್ಯಕ್ತಪಡಿಸಿರುವ ಜಾನಪದರ ಅಪೂರ್ವ ಭಾಷಾ ಚತುರತೆಗೆ ನಿದರ್ಶನವಾಗಿದೆ.

ಳ

ಹೀಗೆ 'ಮಲ್ಲಿಗೆ ದಂಡೆ' ಉತ್ತರ ಕರ್ನಾಟಕದ ಗ್ರಾಮೀಣ ಜನಜೀವನಕ್ಕೆ ಹಿಡಿದ ಕನ್ನಡಿಯಾಗಿರುವುದು ಮಾತ್ರವಲ್ಲದೆ ಆ ಜನಪದರ ಸೂಕ್ಷ್ಮ ಪರಿಭಾವನಾ ಶಕ್ತಿ, ನೋವಿನಲ್ಲೂ ನಲಿವನ್ನು ಕಾಣುವ ಅಸಾಧಾರಣ ತಾಳ್ಮೆ, ಜೀವನದ ಸುಖ ಸಂದರ್ಭಗಳನ್ನೆಂತೋ ದುಃಖದ ಸಂದರ್ಭಗಳನ್ನೂ ಅತ್ಯಂತ ಸಮರ್ಥವಾಗಿ, ಧ್ವನಿಪೂರ್ಣವಾಗಿ, ಆಕರ್ಷಕವಾಗಿ ತಮ್ಮ ಸಹಜ ಭಾಷೆಯಲ್ಲಿ ಅಭಿವ್ಯಕ್ತಿಸುವ



ಕೌಶಲ ಇವುಗಳಿಗೆ ಸಾಕ್ಷಿಯಾಗಿವೆ. ಜಾನಪದರ ಸ್ವೋಪಜ್ಞಶೀಲ, ಸೃಜನಶೀಲ ಕಲೆ ಜೀವನ ಸಾಧಾರಣ ಸಂದರ್ಭಗಳನ್ನು ವಿಶಿಷ್ಟ ಸುಂದರವನ್ನಾಗಿ ಇಲ್ಲಿ ಶಿಲ್ಪಿಸಿದೆ. ಹೀಗಾಗಿ ಕಾವ್ಯಸೌಂದರ್ಯ ಮತ್ತು ಜೀವನ ಸೌಂದರ್ಯಗಳೆರಡೂ ಈ ಸಂಕಲನದಲ್ಲಿ ಗರಿಷ್ಠ ಪ್ರಮಾಣದಲ್ಲಿ ಮಿಳಿತವಾಗಿವೆ. ಗರತಿ ಹಾಡಿನ ಅತ್ಯಂತ ಸಾಂದ್ರವಾದ ಭಾವ ಸೌಂದರ್ಯದ ತೀವ್ರತೆ ಇಲ್ಲಿ ಸ್ವಲ್ಪಮಟ್ಟಿಗೆ ಕಡಿಮೆಯಾಗಿದ್ದರೂ ಇಲ್ಲಿಯ ಭಾಷೆ, ಛಂದಸ್ಸು, ಭಾವ ಹಾಗೂ ವಿಷಯಗಳ ವೈವಿಧ್ಯ ನಮ್ಮನ್ನು ತಮ್ಮ ಅಂತರಾಳಕ್ಕೆ ಸೆಳೆದುಕೊಂಡುಬಿಡುತ್ತವೆ. ಹೀಗಾಗಿ ಮಲ್ಲಿಗೆ ದಂಡೆ ನಮ್ಮ ಜಾನಪದ ಗೀತ ಸಂಗ್ರಹದಲ್ಲಿ ಒಂದು ಮುಖ್ಯ ಮೆಟ್ಟಿಲಾಗಿದೆ ಎಂಬುದನ್ನು ಸಾಬೀತು ಪಡಿಸುತ್ತದೆ.

ಎಲ್ಲಿಯವರೆಗೆ ಈ ನಾಡಿನಲ್ಲಿ ಗರತಿಯರ ಬಗ್ಗೆ ಅನೂನ್ಯವಾದ ಅಕ್ಕರೆ ಗೌರವಗಳು ಜೀವಂತವಾಗಿರುತ್ತವೋ ಅಲ್ಲಿಯವರೆಗೆ, ಎಲ್ಲಿಯವರೆಗೆ ಕನ್ನಡದ ಜನ ತಮ್ಮ ಜೀವನವನ್ನು ಸಂಗೀತದಂತೆ ಭಾವಿಸಿ ಅನುಭವಿಸುತ್ತಾರೋ ಅಲ್ಲಿಯವರೆಗೆ, ಎಲ್ಲಿಯವರೆಗೆ ಮಲ್ಲಿಗೆ ದಂಡೆಯ ಬಗೆಗಿನ ಆಕರ್ಷಣೆ ಮತ್ತು ವ್ಯಾಮೋಹ ನಮ್ಮ ಜನಪದ ಹೃದಯದಲ್ಲಿ ಹಸಿರಾಗಿರುತ್ತದೆಯೋ ಅಲ್ಲಿಯವರೆಗೆ 'ಗರತಿಯ ಹಾಡು', 'ಜೀವನ ಸಂಗೀತ' ಮತ್ತು 'ಮಲ್ಲಿಗೆ ದಂಡೆ'ಗಳ ಅಂತರಂಗ ಬಹಿರಂಗ ಸೌಂದರ್ಯ ಕಾವ್ಯಾಭ್ಯಾಸಿಗಳಿಗೆ ಸ್ಫೂರ್ತಿಯನ್ನು ಸಂತೋಷವನ್ನು ವಿಶಿಷ್ಟ ಜೀವನದರ್ಶನವನ್ನೂ ನೀಡುತ್ತಲೇ ಹೋಗುತ್ತವೆ.